ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 42
೧೭ ಆಗಸ್ಟ್ ೧೯೫೮
ಸ್ವಾತಂತ್ರ್ಯೋತ್ಸವ ಸಂಚಿಕೆ

ಪುಟ ೧೨ ಬೆಲೆ: ೧೩ ನಯೇ ಪೈಸೆ

ಸ್ವಾತಂತ್ರ್ಯ ದಿನದಂದು ದೇಶದ ಸ್ವಾತಂತ್ರ್ಯವನ್ನು ಬಲಗೊಳಿಸಲಿಕ್ಕೂ

ಆಗಸ್ಟ್ 15, 1958. ಭಾರತ ಸ್ವಾತಂತ್ರ್ಯ ಯುಗದಲ್ಲಿ ಹನ್ನೊಂದು ವರುಷಗಳು ಕಳೆದು ಹನ್ನೆರಡನೇ ವರ್ಷವಾರಂಭವಾಗುವ ಪವಿತ್ರ ದಿನ. ಕಳೆದೊಂದು ವರ್ಷದ ಆಗುಹೋಗುಗಳನ್ನು ನೆನಸಿಕೊಂಡು ನವಭಾರತದ ಪುನರ್ರಚನೆಯ ಕಾರ್ಯದಲ್ಲಿ ದೇಶದ ಜನಕೋಟಿ ಹೊಸ ಸಿಧ್ಧಾರಗಳನ್ನು ಕೈಗೊಳ್ಳುವ ದಿನ. ಈ ಸಂದರ್ಭದಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಭಾರತದ ಜನತೆಗೆ ಶುಭಸಂದೇಶವನ್ನು ನೀಡುತ್ತದೆ.

ಕಳೆದೊಂದು ವರ್ಷ ನಮ್ಮ ಚರಿತ್ರೆಯಲ್ಲೇ ಅತ್ಯಂತ ಮಹತ್ವದ ಘಟನೆಗಳಿಂದ ತುಂಬಿದ್ದಾಗಿದೆ. ದೇಶದ ಸಮಸ್ಯೆಗಳು ಬಗೆಹರಿಯುವ ಬದಲು ಅವು ಇನ್ನೂ ತೀವ್ರಗೊಂಡಿವೆ. ಆಹಾರದ ಅಭಾವ. ಬೆಲೆ ಏರಿಕೆ, ನಿರುದ್ಯೋಗ ಮುಂತಾದುವುಗಳು ಭೀಕರ ಸ್ವರೂಪವನ್ನು ತಾಳಿವೆ. ದ್ವಿತೀಯ ಪಂಚ ವಾರ್ಷಿಕ ಯೋಜನೆಯು ತೀವ್ರ ಬಿಕ್ಕಟ್ಟಿಗೆ ಸಿಲುಕಿಬಿದ್ದಿದೆ. ಹಲವಾರು ಹೊಸ ಸಮಸ್ಯೆಗಳು ಉದ್ಭವಿಸಿವೆ. ಕೇರಳ ಪ್ರಾಂತದ ಒಳವ್ಯವಹಾರದಲ್ಲಿ ಕೈಹಾಕಲು ಕೇಂದ್ರ ಯೋಚಿಸುತ್ತಿದೆ. ಘಟನೆಯೊಳಗಿನ ಹಕ್ಕುಗಳಿಗೆ ಧಕ್ಕೆ ತಗಲಿದೆ.

ಆರ್ಥಿಕ ಮುಗ್ಗಟ್ಟಿನಲ್ಲಿ ನರಳುತ್ತಿರುವ ಯುದ್ಧಕೋರ ಅಮೆರಿಕನ್—ಬ್ರಿಟಿಷ್ ...ರಿಕದ ಸೈನ್ಯ ಕೂಡಲೇ ವಾಪಸಾಗಬೇಕೆಂದು ಕೇಳಿದ್ದಾರೆ. ಜೋರ್ಡಾನ್‌ನಲ್ಲೂ ಬ್ರಿಟಿಷರ ವಿರುದ್ಧ ಹೋರಾಡಲು ಜನಸಿದ್ಧರಾಗುತ್ತಿದ್ದಾರೆ.

ಸೋವಿಯತ್ ಒಕ್ಕೂಟದ ನೇತೃತ್ವದಲ್ಲಿ, ಏಷ್ಯಾ-ಆಫ್ರಿಕಾಗಳ ಸ್ವತಂತ್ರ ರಾಷ್ಟ್ರಗಳ ಶಾಂತಿ ಪ್ರಯತ್ನದ ಫಲವಾಗಿ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಶಾಂತಿಯುತವಾಗಿ ಜನತೆ ತಡೆಗಟ್ಟಿದೆ.

ಸಂಪಾದಕೀಯ

ಭಾರತ ಸರಕಾರ ಸಾಮ್ರಾಜ್ಯಶಾಹಿಗಳ ಆಕ್ರಮಣವನ್ನು ಖಂಡಿಸಿ ಶಾಂತಿ ರಕ್ಷಿಸಲು ಹೋರಾಡಿ ಜನತೆಯ ಮೆಚ್ಚುಗೆಯನ್ನು ಪಡೆದಿದೆ. ಯುದ್ಧದ ಭೀತಿಯೀಗ ಸ್ವಲ್ಪ ಕಡಿಮೆಯಾಗಿದ್ದರೂ ಬಿಕ್ಕಟ್ಟು ಮುಂದುವರಿಯುತ್ತಿದೆ.

ವಿಷಮುಗೊಳ್ಳುತ್ತಿರುವ ಆಂತರಿಕ ಪರಿಸ್ಥಿತಿ

ಕಳೆದ ವರ್ಷ ಆರ್ಥಿಕ ಮುಗ್ಗಟ್ಟಿನ ಕಾರ್ಮುಗಿಲು ನಮ್ಮ ದೇಶವನ್ನಾವರಿಸಿರುತ್ತದೆ. ವರ್ಷಾರಂಭದಲ್ಲಿ ಶುರುವಾದ ಬೆಲೆ ...

... ಎಂಬುದು ಎಲ್ಲರಿಗೂ ಮನವರಿಕೆಯಾಗಿರುವುದು ಸ್ವಾಗತಾರ್ಹವಾಗಿದೆ. ರಾಷ್ಟ್ರಾಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದರವರು 10-8-58ರಂದು ಕೊಯಮುತ್ತೂರಿನಲ್ಲಿ ಮಾತನಾಡುತ್ತಾ ಆಹಾರೋತ್ಪಾದನೆಗೆ ಅಗ್ರ ಪ್ರಾಧನ್ಯತೆ ಕೊಡಬೇಕೆಂದು ಹೇಳಿದ್ದಾರೆ. "ಹಿಂದೂಸ್ಥಾನವು ಮುಖ್ಯವಾಗಿ ವ್ಯವಸಾಯಿಕ ದೇಶವಾಗಿದ್ದು, ಫಲವತ್ತಾದ ಜಮೀನು, ಧಾರಾಳವಾದ ನೀರಿನ ಸೌಲಭ್ಯ ಮತ್ತು ಶತಮಾನಗಳ ವ್ಯವಸಾಯ ಅನುಭವಗಳೂ ಇವೆ. ವ್ಯವಸಾಯಾಭಿವೃದ್ಧಿಗೆ ತೆಗೆದುಕೊಳ್ಳುವ ಕ್ರಮಗಳು ಇತರ ಯಾವ ಕ್ರಮಗಳಿಗಿಂತಲೂ ಪ್ರಾಮುಖ್ಯವಾದುವುಗಳಾಗಿವೆ"ಎಂದು ಅವರು ಹೇಳಿ ನಮ್ಮ ಆಹಾರ ಪೂರೈಕೆಗೆ ಪರದೇಶಗಳತ್ತ ನೋಡುವುದು ನಾಚಿಕೆಗೇಡಿಂದಿದ್ದಾರೆ. ಪ್ರಧಾನ ಮಂತ್ರಿಯವರೂ, ಇತರರೂ ಸಹ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಗಮನ ಕೊಡಬೇಕೆಂದು ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಇದಕ್ಕೆ ಭೂಸುಧಾರಣೆಯು ಅಗತ್ಯವೆಂದು ತಿಳಿದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಹ ಕಾಂಗ್ರೆಸ್ ರಾಜ್ಯ ಸರಕಾರ...

... ಮಾತ್ರ ರಾಷ್ಟ್ರಗಳೊಡನೆಯೇ ಕೇಂದ್ರೀಕೃತವಾಗಿದ್ದರಿಂದ ನಷ್ಟಕ್ಕೆ ಗುರಿಯಾಗಿದೆ. ಬ್ರಿಟಿಷರ ಕಾಲದಿಂದಲೂ ಬಂದ ಈ ಅವಲಂಬನೆಯನ್ನು ಕೊನೆಗೊಳಿಸಿ, ಸಮಾಜವಾದಿ ರಾಷ್ಟ್ರಗಳೊಡನೆ ಹೆಚ್ಚಿನ ವ್ಯಾಪಾರ ಸಂಬಂಧವನ್ನು ಬೆಳೆಸುವುದು ನಮ್ಮ ದೇಶದ ದೃಷ್ಟಿಯಿಂದ ಬಹಳ ಅವಶ್ಯವಿದೆ.

ಪ್ರಜಾಪ್ರಭುತ್ವದ ಸತ್ವ ಪರೀಕ್ಷೆ

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ದೇಶದ ಪ್ರಜಾಪ್ರಭುತ್ವ ಚಳುವಳಿಯ ಒಂದು ಹೊಸ ಘಟ್ಟಕೇರಿರುವುದನ್ನು ಕೇರಳದಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಬಹುಮತ ಬಂದು ಸರಕಾರ ರಚಿಸಿದ್ದರಿಂದ ವ್ಯಕ್ತವಾಗಿದೆ. ಅಧಿಕಾರಕ್ಕೆ ಬಂದಾಗಿನಿಂದಲೂ ಕೇರಳ ಸರಕಾರ ಹಲವಾರು ಜನಹಿತ ಕಾರ್ಯಗಳನ್ನು ಕೈಕೊಂಡು ಎಲ್ಲೆಡೆಯಲ್ಲೂ ಜನಾದಾರಣೆಯನ್ನು ಪಡೆದಿದೆ. ಕೇರಳದ ಪ್ರತಿಗಾಮಿಗಳೂ, ಪದಚ್ಯುತರಾಗಿ ನಿರಾಶೆಗೊಂಡ ಕಾಂಗ್ರೆಸ್, ಪಿ.ಎಸ್.ಪಿ. ಪಕ್ಷದ ನಾಯಕರುಗಳೂ ಕಳೆದೊಂದು ವರ್ಷದಲ್ಲಿ ಕಮ್ಯೂನಿಸ್ಟ್ ಸರಕಾರದ ವಿರುದ್ಧ ಒಂದೇಸಮನೆ ಧಾಳಿ ನಡೆಸಿರುತ್ತಾರೆ. ಶಿಕ್ಷಣ ಮಸೂದೆಗೆ ವಿರುದ್ಧ ಕೆಥೋಲಿಕ್ ಸಂಸ್ಥೆಯೊಂದಿಗೆ ಸೇರಲೂ ಹಿಂಜರಿಯ

(ಕೊನೇ ಪುಟ ನೋಡಿ)

ಜನತೆಯ ಸಂಘಟನೆ, ಐಕ್ಯತೆ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೂ ಪಣ ತೊಡೋಣ

ಸಾಮ್ರಾಜ್ಯಶಾಹಿಗಳು ಮಧ್ಯ ಏಷ್ಯದ ಲೆಬನಾನ್ ಮತ್ತು ಜೋರ್ಡಾನ್ ರಾಷ್ಟ್ರಗಳಲ್ಲಿ ತಮ್ಮ ಸೈನ್ಯಗಳನ್ನಿಳಿಸಿ ಆಕ್ರಮಣ ನಡೆಸಿವೆ. ಇತರ ದೇಶಗಳಲ್ಲೂ ತಮ್ಮ ಸೈನ್ಯ ಬಲಗಳನ್ನು ಹೆಚ್ಚಿಸಿ ಮೂರನೇ ಮಹಾಯುದ್ಧವನ್ನಾರಂಭಿಸಲು ಪ್ರಚೋದನೆ ನಡೆಸಿವೆ. ಅರಬ್ ರಾಷ್ಟ್ರಗಳ ಸ್ವಾತಂತ್ರ್ಯವನ್ನು ತುಳಿಯಲು ಪಿತೂರಿ ನಡೆಸಿವೆ. ಅರಬ್ ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ ಕಳೆದ ವರ್ಷದಲ್ಲಿ ಹೊಸ ಘಟ್ಟಕ್ಕೇರಿದೆ. ಇರಾಕಿನ ಜನತೆ ಸಾಮ್ರಾಜ್ಯಶಾಹಿಗಳ ಬಾಲಬಡುಕನಾದ ರಾಜನನ್ನುರುಳಿಸಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಲೆಬನಾನ್‌ನಲ್ಲೂ ಸಾಮ್ರಾಜ್ಯಶಾಹಿಗಳ ಗುಲಾಮ ಷಾಮೂನ್‌ಗೆ ವಿರುದ್ಧ ಜನತೆ ಹೋರಾಟ ನಡೆಸಿ ಈಗ ಅಧ್ಯಕ್ಷ ಚುನಾವಣೆಯಲ್ಲಿ ಷಾಮೂನ್‌ರವರನ್ನು ಸಂಪೂರ್ಣವಾಗಿ ಸೋಲಿಸಿ ಜನರಲ್ ಷಹಾಬ್‌ರವರನ್ನು ಆರಿಸಲಾಗಿದೆ. ಹೊಸ ಅಧ್ಯಕ್ಷರು ಅಮೇ...

... ಏರಿಕೆಯು ಒಂದೇ ಸಮನೆ ಏರಿಕೊಂಡು ಬಂದು ಹೊಸ ಮಿತಿಯನ್ನು ಮುಟ್ಟಿದೆ. ವಿದೇಶ ವಿನಿಮಯ ಕಳವಳಕರ ಪರಿಸ್ಥಿತಿಯಲ್ಲಿದೆ. ಹಲವಾರು ಉದ್ದಿಮೆಗಳು ಬಿಕ್ಕಟ್ಟಿಗೆ ಬಿದ್ದು ಲಕ್ಷಾಂತರ ಜನ ನಿರುದ್ಯೋಗದಿಂದ ನರಳುತ್ತಿದ್ದಾರೆ. ದ್ವಿತೀಯ ಪಂಚ ವಾರ್ಷಿಕ ಯೋಜನೆಯು ಕಾರ್ಯಗತವಾಗುವುದಂತೂ ಬಿಟ್ಟು ಅದರ ತಿರುಳಾದರೂ ಯಶಸ್ವಿಯಾಗುವುದು ಕಷ್ಟವಾಗಿದೆ. ಕೈಗಾರಿಕಾ ಕ್ಷೇತ್ರದ ಒಟ್ಟು ಉತ್ಪಾದನೆ ಹೆಚ್ಚಾಗಿದೆಂದು ಪ್ರಕಟವಾಗಿದ್ದರೂ ವ್ಯವಸಾಯ ಕ್ಷೇತ್ರದಲ್ಲಿ ಉತ್ಪಾದನೆಯು ನಿರಾಶಾಜನಕವಾಗಿದೆ.

ಆಹಾರದ ಬಿಕ್ಕಟ್ಟು ಭೂಸುಧಾರಣೆ ಪ್ರಶ್ನೆಗೆ ಎಲ್ಲರ ಗಮನವನ್ನು ಈಗ ಸೆಳೆದಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ಕಾಲದಿಂದಲೂ ಕಾಂಗ್ರೆಸ್ಸಿಗರು ಇದರ ಬಗ್ಗೆ ಡಂಗುರ ಬಾರಿಸುತ್ತಿದ್ದರೂ ಭೂಸುಧಾರಣೆಯು ಕಾರ್ಯಗತವಾಗದೆ ನಮ್ಮ ದೇಶವು ಈ ಗಂಡಾತರಕ್ಕೆ ಮುಟ್ಟಿದೆ...

... ಗಳಿಗೆ ಒತ್ತಾಯತಂದಿದೆ. ಆದರೆ ರಾಜ್ಯ ಸರಕಾರಗಳು (ಕೇರಳ ಹೊರತು) ಇನ್ನೂ ಸಾಕಷ್ಟು ಜಾಗೃತರಾದಂತೆ ಕಾಣುವುದಿಲ್ಲ. ಅವರು ತರಬೇಕಿಂದಿರುವ ಶಾಸನಗಳೂ ಶಾಸನಗಳೂ ಸಮರ್ಪಕವಾಗಿಲ್ಲ ಅವು ರೈತರಿಗೆ ಜಮೀನು ಕೊಟ್ಟು ಹೊಸ ವಾತಾವರಣ ನಿರ್ಮಾಣ ಮಾಡುದ ಬದಲು ಅದರ ವಿರುದ್ಧವಾಗಿಯೇ ಇರುವುದು ಕಂಡು ಬರುತ್ತದೆ. ಎಲ್ಲ ರಾಜ್ಯಗಳಲ್ಲೂ ಕೂಡಲೇ ಭೂಸುಧಾರಣೆಯು ಜಾರಿಗೆ ಬಂದು ನಮ್ಮ ದೇಶದ ಮೂಲಭೂತ ಸಮಸ್ಯೆಯನ್ನು ಬಗೆಹರಿಸಲು ಯೋಗ್ಯಕ್ರಮ ತೆಗೆದುಕೊಳ್ಳುವಂತೆ ಒತ್ತಾಯಪಡಿಸುವುದು ಎಲ್ಲರ ಕರ್ತವ್ಯವಾಗಿರುತ್ತದೆ.

ಮುಗ್ಗಟ್ಟಿನಲ್ಲಿರುವ ವಿದೇಶಿ ವ್ಯಾಪಾರವನ್ನು ಅಭಿವೃದ್ಧಿಗೊಳಿಸಲು ಸರಕಾರವು ತನ್ನ ಧೋರಣೆಯಲ್ಲಿ ಬದಲಾವಣೆ ಮಾಡಬೇಕಾಗಿರುವುದರ ಬಗ್ಗೆಯೂ ಗಮನ ಸೆಳೆಯಬೇಕಾಗಿದೆ. ಈಗ ನಮ್ಮ ರಫ್ತು ಮತ್ತು ಆಮದು ವ್ಯಾಪಾರವೆಲ್ಲಾ ಪಾಶ್ಚಿ...

ಕೇರಳ ಕಾರ್ಮಿಕ ವಿವಾದಗಳ ಬಗ್ಗೆ—ಡಾಂಗೆಯವರಿಂದ ಢೇಬಾರ್‌ಗೆ ಕಾಗದ

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಎ. ಡಾಂಗೆ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಯು. ಎನ್. ಢೇಬಾರ್‌ರವರಿಗೆ ಆಗಸ್ಟ್ 1, 1958ರಂದು ಬರೆದ ಕಾಗದ:

ಪ್ರಿಯ ಶ್ರೀ ಢೇಬಾರ್,

ಕೇರಳದಲ್ಲಿಯ ಪರಿಸ್ಥಿತಿಯ ಬಗ್ಗೆ, ವಿಶೇಷವಾಗಿ ಅಲ್ಲಿಯ ಕಾನೂನು ಮತ್ತು ವ್ಯವಸ್ಥೆಗಳ ಬಗ್ಗೆ ನೀವು ವ್ಯಾಕುಲ ಚಿತ್ತರಾಗಿದ್ದೀರೆಂಬುದನ್ನು ಪತ್ರಿಕೆಗಳಲ್ಲಿಯ ವರದಿಗಳಿಂದ ತಿಳಿದೆ.

ನೀವು ಹೇಳಿದಂತಹ ಕಾನೂನು ಮತ್ತು ವ್ಯವಸ್ಥೆಗಳನ್ನು ಕುರಿತು ನಾನು ಇಲ್ಲಿ ಬರೆಯುತ್ತಿಲ್ಲ, ಆದರೆ ಕಾರ್ಮಿಕ ಸಂಘಗಳು ಮತ್ತು ಕಾರ್ಮಿಕರಿಗೆ ಸಂಬಂಧಿಸಿ ಅವುಗಳಿಗಿರುವ ಒಂದು ಮುಖದ ಬಗ್ಗೆ ಬರೆಯುತ್ತಿದ್ದೇನೆ. ಕಾಂಗ್ರೆಸ್ ಮಾರ್ಗದರ್ಶನದಲ್ಲಿರುವ ಮತ್ತು ಕಾಂಗ್ರೆಸ್ಸಿನಿಂದಲೇ ಸಂಘಟಿಸಲ್ಪಟ್ಟ 'ಇಂಟಕ್' ಒಂದು ಕಾರ್ಮಿಕ ಸಂಘಟನೆಯಾಗಿದೆಯಷ್ಟೆ. ಈ 'ಇಂಟಕ್' ಕಾರ್ಮಿಕ ಸಂಘಟನೆಯ ಬಗ್ಗೆಯೇ ನಾನಿಲ್ಲಿ ಬರೆಯುವುದು.

ಪ್ರಮುಖ ಕಾಂಗ್ರೆಸ್ ನಾಯಕರಾಗಿರುವ, ಟ್ರಾವಣಕೋರ್ ಮತ್ತು ಕೊಚ್ಚೀನ್‌ಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ, ಮುಖ್ಯ ಮಂತ್ರಿಯಾಗಿದ್ದ ಪಿ. ಗೋವಿಂದ ಮೆನೋನ್ ಹಠಾತ್ತಾಗಿ ಸೀತಾರಾಮ್ ಗಿರಣಿಯ ನಾಲ್ಕು ಜನ ಕಾರ್ಮಿಕರ ಸಂಕಷ್ಟಗಳ ಬಗ್ಗೆ ತಮಗೆ ತಾವೇ ಆಸಕ್ತಿ ವಹಿಸಿ ಪರಿಸ್ಥಿತಿಯನ್ನು ಸತ್ಯಾಗ್ರಹದ ಮಟ್ಟದ ವರೆಗೂ ತಂದು ಆ ಕಲಹವನ್ನು ರಾಜಕೀಯ ಕದನದ ವರೆಗೂ ವಿಸ್ತರಿಸಿದರು.

ಕಾರ್ಮಿಕ ವಿವಾದಗಳ ಇತ್ಯರ್ಥಕ್ಕಾಗಿ ಎಲ್ಲಾ ಕಾರ್ಮಿಕ ಸಂಘಟನೆಗಳೂ, ಕಾರ್ಮಿಕರೂ, ಸರಕಾರಗಳೂ ಮನ್ನಿಸಲ್ಪಟ್ಟು ಒಪ್ಪಿಗೆ ಪಡೆದಿರುವ ದೆಹಲಿ—ನೈನಿತಾಲ್ ತ್ರಿಪಕ್ಷೀಯ ಕನ್ವೆನ್ಷನ್ ಇರುವುದು ನಿಮಗೆ ಗೊತ್ತಿರಬೇಕು. 'ಇಂಟಕ್' ಮತ್ತು ಕಾಂಗ್ರೆಸ್ ಸರ್ಕಾರಗಳು ಹಾಗೂ ಕಾರ್ಮಿಕರು ತಾವೆಲ್ಲ ಈ ತ್ರಿಪಕ್ಷೀಯ ಕನ್ವೆನ್ಷನನ್ನು ವಿಚಾರಿಸದಿದ್ದರೂ ಎ. ಐ. ಟಿ. ಯು. ಸಿ.ಯು ಮಾತ್ರ ವಿಚಾರಿಸಬೇಕೆಂದು ಯಾವಾಗಲೂ ಕೇಳುತ್ತ ಬಂದಿದ್ದಾರೆ.

ಕೇರಳದಲ್ಲಿಯ 'ಇಂಟಕ್' ನಾಯಕರು ಮತ್ತು ಶ್ರೀ ಮೆನನ್ ಈ ನಿಯಮಗಳನ್ನು ಅನುಸರಿಸುತ್ತಿದ್ದಾರೆಯೆ ಎಂದು ಅವರನ್ನೇ ನೀವು ಕೇಳುವುದು ಸಮಂಜಸವಾದೀತು.

ಕೇರಳ ಸರಕಾರವಾದರೂ ಈ ನಿಯಮಗಳನ್ನು ಅನುಸರಿಸಿದೆಯೆ ಎಂದು ಪ್ರತಿ ಪ್ರಶ್ನೆಯನ್ನು ಕೂಡ ನೀವು ಕೇಳುವುದು ಸಮಂಜಸವಾದೀತು. ಸೀತಾರಾಮ್ ಗಿರಣಿ ವಿವಾದಗಳ ವಿಚಾರದಲ್ಲಿ ಮಾಲೀಕನಾಗಿ ಸರ್ಕಾರವು ತನ್ನ ಮಿತಿಯಲ್ಲಿರುವ ಅಧಿಕಾರಕ್ಕನುಸರಿಸಿ ಈ ಕನ್ವೆನ್ಷನ್‌ಗಳನ್ನೆಲ್ಲ ಅನುಸರಿಸಿದೆಯೆಂದು ಎ. ಐ. ಟಿ. ಯು. ಸಿ. ಭಾವಿಸುವುದರಿಂದ ಈ ಚಳವಳವನ್ನು ನಾವು ಕಾರ್ಮಿಕ ಚಳವಳವೆಂದು ಭಾವಿಸುವದಿಲ್ಲ, ಬೆಂಬಲ ನೀಡುವುದಿಲ್ಲ.

ಈಗಿನ ಪ್ರಶ್ನೆಯೆಂದರೆ, ಮೊದಲನೆಯದಾಗಿ ನೀವು ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಮೆನನ್‌ರಲ್ಲಿ ಈ ಬಗ್ಗೆ ಒಂದು ಸ್ಪಷ್ಟೀಕರಣ ಕೇಳಬೇಕು, ಎರಡನೆಯದಾಗಿ—ಸರಕಾರದಲ್ಲಾಗಲಿ, ಎ. ಐ. ಟಿ. ಯು. ಸಿ.ಯ ವಿಚಾರದಲ್ಲಾಗಲಿ 'ಇಂಟಕ್' ನಾಯಕರು ದೆಹಲಿ—ನೈನಿತಾಲ್ ಕನ್ವೆನ್ಷನ್ (ಸಮಾವೇಶ)ಗಳನ್ನು ಅನುಸರಿಸುತ್ತಿರುವರೆ ಎಂದು ಕೇಳಬೇಕು.

ಜಮ್ಷೆಡ್‌ಪುರದಲ್ಲಿ ಮುಷ್ಕರ ನಡೆದಾಗ ಬಿಹಾರ ಸರ್ಕಾರದ ಹಾಗೂ ಕಾಂಗ್ರೆಸ್ ನಾಯಕರುಗಳಿಂದ ಈ ಕನ್‌ವೆನ್ಷನ್‌ಗಳ ಬಗ್ಗೆ ತುಂಬಾ ಕೇಳಿಕೆ ಬಂತು.

ಕೇರಳದ ವಿಚಾರದಲ್ಲಿ ಒಬ್ಬರಿಂದಲೂ ಈ ಬಗೆಯ ಪ್ರಸ್ತಾಪಗಳು ಬಾರದುದು ವಿಚಿತ್ರವಲ್ಲವೇ ?

ಈ ವಿಚಾರದತ್ತ ನೀವು ಕೊಂಚ ಗಮನ ಕೊಡಬೇಕೆಂದು ವಿನಂತಿಸುತ್ತೇನೆ,

ಕೃತಜ್ಞತೆಗಳು. ನಿಮ್ಮ ವಿಶ್ವಾಸಿ,

ಎಸ್. ಎ. ಡಾಂಗೆ.

ಶ್ರೀ ಢೇಬಾರ್‌ರವರಿಗೆ ಬರೆದ ಪತ್ರದ ಪ್ರತಿಯೊಂದನ್ನು 'ಇಂಟಕ್'ನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಆರ್. ವಾಸವಾಡಾರವರಿಗೂ ಶ್ರೀ ಡಾಂಗೆ ಕಳುಹಿಸಿಕೊಟ್ಟು ಫಾರ್ವರ್ಡಿಂಗ್ ಕಾಗದದಲ್ಲಿ ಹೀಗೆ ಬರೆದರು : "(ಶ್ರೀ ಢೇಬಾರರಿಗೆ ಬರೆದ ಕಾಗದದಲ್ಲಿ) ಎತ್ತಿರುವಂತೆ ನಿಮ್ಮ ಮುಂದೆ ಕೂಡಾ ಅದೇ ಪ್ರಶ್ನೆಗಳನ್ನು, ಸಮಸ್ಯೆಗಳನ್ನು ನಿಮ್ಮ ಪರಿಶೀಲನೆಗಾಗಿ ಎತ್ತಲೇ ?"

ಶ್ರೀ ಎಸ್. ಎ. ಡಾಂಗೆಯವರು ಕೆಳಗಿನಂತೆ ಯುನೈಟೆಡ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ಕ್ವಿಲೋನ್, ಕೇರಳ ಅದರ ಅಧ್ಯಕ್ಷ ಶ್ರೀ ಎನ್. ಶ್ರೀಕಂಠನ್ ನಾಯರ್ ಅವರಿಗೆ ಕೆಳಗಿನಂತೆ ತಂತಿ ಕಳುಹಿಸಿಕೊಟ್ಟರು :

"ದೆಹಲಿ ಮತ್ತು ನೈನಿತಾಲ್‌ಗಳಲ್ಲಿಯ ತ್ರಿಪಕ್ಷೀಯ ಸಮ್ಮೇಲನದಲ್ಲಿ ನಾವೆಲ್ಲ, ಎಲ್ಲಾ ಪಾರ್ಟಿಗಳ ಅಂತರ್ ಸಂಘಟನೆಗಳ ಸಂಬಂಧವಾಗಿ ಅಂಗೀಕರಿಸಿದ ವಿಧಿನಿಯಮಗಳನ್ನು ಯು. ಟಿ. ಯು. ಸಿ.ಯ ಸಂಘಗಳು, ಅದರಂತೆ ಮಾಲೀಕರು ಮತ್ತು ಸರ್ಕಾರ ಇವು ಈ ಹಾಗೂ ಮತ್ತಿನ್ನಿತರ ವಿವಾದಗಳಲ್ಲಿ ಅನುಸರಿಸಿವೆಯೆ ಎಂಬುದನ್ನು—ನೀವು ಅನ್ಯಥಾ ಭಾವಿಸದಿದ್ದರೆ—ತಿಳಿಯಬಯಸುತ್ತಿದ್ದೇನೆ. ವರದಿಗಳು ನೀವು ಇವುಗಳನ್ನನುಸರಿಸುತ್ತಿಲ್ಲವೆನ್ನುವದರಿಂದ ಈ ವಿನಂತಿಯನ್ನು ಮಾಡಿಕೊಳ್ಳಬೇಕಾಗಿವೆ.

—ಡಾಂಗೆ, ಪ್ರಧಾನ ಕಾರ್ಯದರ್ಶಿ, ಎ.ಐ.ಟಿ.ಯು.ಸಿ.

ಕೆಳಗಿನ ತಂತಿಯೊಂದನ್ನು ಶ್ರೀ ಡಾಂಗೆಯವರು ಅಧ್ಯಕ್ಷ, 'ಇಂಟಕ್' ಕೇರಳ ಶಾಖಾ, ಕ್ವಿಲೋನ್, ಕೇರಳ ಅವರಿಗೂ ಕಳುಹಿಸಿಕೊಟ್ಟರು.

"ದೆಹಲಿ ಮತ್ತು ನೈನಿತಾಲ್‌ಗಳಲ್ಲಿಯ ತ್ರಿಪಕ್ಷೀಯ ಸಮ್ಮೇಲನದಲ್ಲಿ ಎಲ್ಲಾ ಪಾರ್ಟಿಗಳವರೂ ಅಂತರ್ ಸಂಘಟನೆಗಳ ಸಂಬಂಧವಾಗಿ, ವಿವಾದಗಳ ವಿಚಾರಣೆಗಳ ಸಂಬಂಧವಾಗಿ ಅಂಗೀಕರಿಸಿದ ವಿಧಿನಿಯಮಗಳನ್ನು 'ಇಂಟಕ್' ಸಂಘಗಳು, ಮಾಲೀಕರುಗಳು ಮತ್ತು ಸರ್ಕಾರ ಇವು ಈ ಹಾಗೂ ಇನ್ನಿತರ ವಿವಾದಗಳಲ್ಲಿ ಅನುಸರಿಸಿವೆಯೆ ಎಂಬುದನ್ನು—ನೀವು ಅನ್ಯಥಾ ಭಾವಿಸದಿದ್ದರೆ—ತಿಳಿಯಬಯಸುತ್ತೇನೆ. ವರದಿಗಳು ಇವುಗಳನ್ನು ನೀವು ಅನುಸರಿಸುತ್ತಿರುವುದಿಲ್ಲವೆಂದು ಹೇಳುತ್ತಿರುವದರಿಂದ ಈ ವಿನಂತಿಯನ್ನು ಮಾಡಿಕೊಳ್ಳಬೇಕಾಗಿದೆ.

—ಡಾಂಗೆ, ಪ್ರಧಾನ ಕಾರ್ಯದರ್ಶಿ, ಎ ಐ.ಟಿ.ಯು.ಸಿ.

ಸೆಪ್ಟೆಂಬರ್ ತಿಂಗಳಲ್ಲಿ

ಜೋಡಿ ಗ್ರಾಮಗಳ ರೈತರ ಮಹಾ ಸಮ್ಮೇಲನ

ಚಿಂತಾಮಣಿಯಲ್ಲಿ ಸರ್ವಸಿದ್ಧತೆಗಳು ನಡೆದಿವೆ

ಮೈಸೂರು ರಾಜ್ಯದಲ್ಲಿರುವ ಸುಮಾರು 2,000ಕ್ಕೂ ಮೇಲ್ಪಟ್ಟು ಜೋಡಿ ಇನಾಂ ಗ್ರಾಮಗಳ ರೈತರ ಸಮಸ್ಯೆಗಳನ್ನು ಚರ್ಚಿಸಲು ಮೈಸೂರು ರಾಜ್ಯದ ಜೋಡಿ ಇನಾಂ ಗ್ರಾಮಗಳ ರೈತರ ಸಮ್ಮೇಳನವನ್ನು ಬರುವ ಸಪ್ಟೆಂಬರ್ ತಿಂಗಳು 6ನೇ ತಾರೀಖಿಗೆ ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಸೇರಿಸಬೇಕೆಂದು ನಿರ್ಧರಿಸಲಾಗಿದೆ.

ತಾ. 3—8—'58ರಂದು ಚಿಂತಾಮಣಿಯಲ್ಲಿ ಸೇರಿದ್ದ ರೈತ ಸಂಘದ ಕಾರ್ಯಕರ್ತರ ಸಭೆಯಲ್ಲಿ ಈ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡಲು ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಅದಕ್ಕೆ ಶಾಸನ ಸಭಾ ಸದಸ್ಯರಾದ ಟಿ. ಕೆ. ಗಂಗಿರೆಡ್ಡಿಯವರು ಅಧ್ಯಕ್ಷರಾಗಿಯೂ, ಎಂ. ವಿ. ನಂಜುಂಡೇ ಗೌಡರು, ಕಾರ್ಯದರ್ಶಿಯಾಗಿಯೂ, ಸುಭಾನ್‌ರವರು ಖಜಾಂಚಿಯಾಗಿಯೂ, ಆರಿಸಲ್ಪಟ್ಟಿದ್ದಾರೆ. ಕರ್ನಾಟಕ ಪ್ರಾಂತೀಯ ರೈತ ಸಂಘದ ಕಾರ್ಯದರ್ಶಿಗಳಾದ ಕಾಮ್ರೇಡ್ ಬಿ. ವಿ. ಕಕ್ಕಿಲ್ಲಾಯರವರು ಆ ಸಭೆಯಲ್ಲಿ ಮಾತಾಡಿ ಜೋಡಿ ಗ್ರಾಮಗಳ ರೈತರ ಸಂಕಷ್ಟಗಳನ್ನು ವಿವರಿಸಿ ಸಮ್ಮೇಳವನ್ನು ಯಶಸ್ವಿ ಮಾಡಬೇಕೆಂದು ಕೋರಿದರು.

ತಾ. 6—9—1958ರಂದು ನಡೆಯಲಿರುವ ಸಮ್ಮೇಳನದಲ್ಲಿ ಭಾಗವಹಿಸಲು ಬರುವವರಿಗೆ ಊಟದ ವ್ಯವಸ್ಥೆಯನ್ನು ಸ್ವಾಗತ ಸಮಿತಿಯು ಮಾಡಲಿದೆ.

ನಮ್ಮ ರಾಜ್ಯದ ಎಲ್ಲಾ ಜೋಡಿ ಇನಾಂ ಗ್ರಾಮಗಳ ರೈತರ ಪ್ರತಿನಿಧಿಗಳೂ ಈ ಸಮ್ಮೇಳನಕ್ಕೆ ಆಗಮಿಸಿ ಅದನ್ನು ಯಶಸ್ವಿಗೊಳಿಸಿ, ಜೋಡಿ ರೈತರ ಸಮಸ್ಯೆಗಳ ಬಗ್ಗೆ ಸರಕಾರದ ಗಮನವನ್ನು ಸೆಳೆಯಲು ಸಹಕರಿಸಬೇಕೆಂದು ಕರ್ನಾಟಕ ಪ್ರಾಂತೀಯ ರೈತ ಸಂಘ ಮತ್ತು ಸಮ್ಮೇಳನದ ಸ್ವಾಗತ ಸಮಿತಿಯು ವಿನಂತಿಸುತ್ತದೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ :—

ಎಂ. ವಿ. ನಂಜುಂಡೇ ಗೌಡ,
ಕಾರ್ಯದರ್ಶಿ,
ರೈತ ಸಂಘ, ಚಿಂತಾಮಣಿ,
ಕೋಲಾರ ಜಿಲ್ಲೆ.

ರೈತ ಸಂಘಕ್ಕೆ ಸದಸ್ಯರನ್ನು ಸೇರಿಸಿರಿ

ಅಖಿಲ ಭಾರತ ಕಿಸಾನ ಸಭೆಯ ಕಾರ್ಯಕಾರಿ ಸಮಿತಿಯ ಸಭೆ ಜರುಗಿ, ರೈತ ಸಂಘಕ್ಕೆ 1958ರ ಬಗ್ಗೆ ಸದಸ್ಯರನ್ನು ಸೇರಿಸುವ ಅವಧಿಯನ್ನು 1958 ಡಿಸೆಂಬರ್‌ದ ತನಕ ಮುಂದುವರಿಸಿರುತ್ತದೆ.

ಎಲ್ಲ ಪ್ರಾದೇಶಿಕ ರೈತ ಸಂಘಗಳೂ ಜುಲೈ ತಾ 31ರ ವರೆಗೆ ಸೇರಿಸಿರುವ ಸದಸ್ಯರ ಚಂದಾ ಹಣದಲ್ಲಿ ತಲಾ 8ನಯೇ ಪೈಸೆಯಂತೆ ಕ.ಪ್ರಾ. ರೈತ ಸಂಘಕ್ಕೆ ಆಗಸ್ಟ್ ಅಂತ್ಯದೊಳಗೆ ತಲುಪಿಸಬೇಕೆಂದೂ ಸದಸ್ಯರನ್ನು ಸೇರಿಸುವ ಕೆಲಸವನ್ನು ಮುಂದುವರಿಸಬೇಕೆಂದೂ ಕೇಳಿಕೊಳ್ಳಲಾಗುತ್ತದೆ.

ಕೇರಳದ ದುರ್ಘಟನೆಗಳಿಗೆ ಕಾರಣರಾರು?

ಸೀತಾರಾಂ ಗಿರಣಿ ವಿವಾದದಲ್ಲಿ ಕಾರ್ಮಿಕರಿಗೆ ವಿಜಯ, ಪ್ರಚೋದಕರಿಗೆ ಸೋಲು

— ಚಂದನತೋಪ್, ಕುಟ್ಟನಾಡುಗಳ ಸತ್ಯಕತೆ —

ಎರಡು ತಿಂಗಳಿಂದಲೂ ಮಾಜಿ ಮುಖ್ಯಮಂತ್ರಿ ಪಾನಂಪಿಳ್ಳೆ ಗೋವಿಂದ ಮೆನನ್‌ರವರ ನೇತೃತ್ವದಲ್ಲಿ ಇಂಟಕ್‌ನ ಸೀತಾರಾಂ ಲೇಬರ್ ಕಾಂಗ್ರೆಸ್ ನಡೆಸುತ್ತಿದ್ದ ಚಳವಳಿ ಜುಲೈ ೨೭ ರಂದು ಇತ್ಯರ್ಥವಾಯಿತು. ಗೋವಿಂದ ಮೆನನ್‌ರವರು ಈ ಹೋರಾಟವನ್ನು "ಬಂಧ ವಿಮೋಚನಾ ಚಳವಳಿ" ಎಂದು ಕರೆದಿದ್ದರು. ಈ ಚಳವಳಿಯ ಕಾಲದಲ್ಲಿ ೧೨೦೦ ಮಂದಿಯ ಬಂಧನವಾಯಿತೆಂಬುದು ನಿಜ. ಆದರೆ ಅವರಲ್ಲಿ ಕೇವಲ ೧೮೩ ಮಂದಿ ಮಾತ್ರ ಕೆಲಸಗಾರರು. ೨೧೧೭ ಮಂದಿ ದುಡಿಯುವ ಕಾರ್ಖಾನೆಯಲ್ಲಿ ಕೇವಲ ೧೮೩ ಮಂದಿ ಈ ಹೋರಾಟದಲ್ಲಿ ಭಾಗವಹಿಸಿದ್ದರು. ಉಳಿದವರೆಲ್ಲ ಹೊರಗಿನಿಂದ ಬಂದ ಕಾಂಗ್ರೆಸ್ ಕಾರ್ಯಕರ್ತರುಗಳು. ನಿಜವಾಗಿ ಬಹುಮತದ ಕೆಲಸಗಾರರ ಬೆಂಬಲವಿದ್ದಿದ್ದಲ್ಲಿ, ಸಾರ್ವತ್ರಿಕ ಮುಷ್ಕರ ನಡೆಸಬಹುದಿತ್ತು.

ಹೊರಗೆ ಈ ಸ್ವಲ್ಪ ಮಂದಿ ಚಳವಳಿ ನಡೆಸುತ್ತಿದ್ದರೆ, ಕೆಲಸಗಾರರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಈ ಕಾಲಾವಧಿಯಲ್ಲಿ ಉತ್ಪಾದನೆಯು ದಿನಕ್ಕೆ ೨೭,೦೦೦ ಗಜದಿಂದ ೪೧,೦೦೦ ಗಜಕ್ಕೆ ಏರಿತ್ತು. ಮ್ಯಾನೇಜ್‌ಮೆಂಟ್ ಬೋರ್ಡಿಗೆ ಕಾರ್ಮಿಕರ ಪ್ರತಿನಿಧಿಯ ಆಯ್ಕೆ ನಡೆದಾಗ 'ಇಂಟಕ್' ಅಭ್ಯರ್ಥಿಗೆ ಕೇವಲ ೬೧೯ ಮತ ದೊರಕಿತು, ಅವರ ವಿರುದ್ಧ ಸ್ಪರ್ಧಿಸಿದ್ದ ಎ. ಐ. ಟಿ. ಯು. ಸಿ. ಅಭ್ಯರ್ಥಿಗೆ ೨೦೦೦ ಮತ ದೊರಕಿತು.

ವಿವಾದ ಉದ್ಭವಿಸಿದ್ದು ಹೇಗೆ?

ಉತ್ಪಾದನೆ ಮತ್ತು ಸಂಘಟನೆಯ ದೃಷ್ಟಿಯಿಂದ ಮ್ಯಾನೇಜ್‌ಮೆಂಟು ವೈಂಡಿಂಗ್ ಸೆಕ್ಷನ್ನಿನಿಂದ ೧೨ ಮಂದಿಯನ್ನು ರೀಲಿಂಗ್‌ಸೆಕ್ಷನ್ನಿಗೆ ವರ್ಗಾಯಿಸಿತು. ಇದು ಆದದ್ದು ಮೇ ೫ ರಂದು. ಏಳು ಮಂದಿ ಕೆಲಸಗಾರರು ಒಡನೆಯೇ ಒಪ್ಪಿಕೊಂಡರು. ಲೇಬರ್ ಕಾಂಗ್ರೆಸ್ಸಿಗೆ ಸೇರಿದ್ದ ೫ ಮಂದಿ ನೌಕರರು ಒಪ್ಪಲಿಲ್ಲ. ಲಿಖಿತ ಮೂಲಕ ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಆದರೆ ಒಂದು ವಾರದ ಕಾಲ ರೀಲಿಂಗ್‌ನಲ್ಲಿ ಕೆಲಸ ಮಾಡಲು ಒಪ್ಪಿದರು. ಮೇ ೨೭ ಮತ್ತು ೩೧ ರಂದು ನಡೆದ ಮಾತುಕತೆಗಳಲ್ಲಿ ಅವರ ಸಂಘದ ಕಾರ್ಯದರ್ಶಿ ಕೆ. ಕರುಣಾಕರನ್ ಒಪ್ಪಿಕೊಂಡಿದ್ದರು. ನೂಲು ಹೆಚ್ಚಾಗಿ ದಾಸ್ತಾನಾಗಿದ್ದುದರಿಂದ ಈ ವರ್ಗಾವಣೆ ಅಗತ್ಯವಾಗಿತ್ತು. ಅವರ ವೇತನ ಮಟ್ಟದಲ್ಲಿ ಯಾವ ಬದಲಾವಣೆಯೂ ಇದರಿಂದ ಆಗುವುದಿರಲಿಲ್ಲ.

ಕಾರ್ಮಿಕರ ಹಿತ ಮುಖ್ಯವಾಗಿಲ್ಲದಿದ್ದ ಈ ನಾಯಕರುಗಳು, ಪಾನಂಪಿಳ್ಳೆಯವರ ಮಾತಿನಲ್ಲಿ "ಬಂಧ ವಿಮೋಚನಾ ಸಮರ" ಹೂಡಿದರು. ಸತ್ಯಾಗ್ರಹ ಆರಂಭವಾಯಿತು. ರಾಜ್ಯ ಶೀಘ್ರಯಿಂದ ದಸ್ತಗಿರಿಯಾದರು. ಬೇಕಾದಷ್ಟು ಪ್ರಚಾರ ನಡೆಯಿತು. ಅದು ನಿಷ್ಫಲವಾಗುತ್ತಿದ್ದುದನ್ನು ಮನಗಂಡು ಇಬ್ಬರು ಕೆಲಸಗಾರರಿಂದ ಉಪವಾಸ ವ್ರತ ಆರಂಭವಾಯಿತು, ನಂತರ ಇನ್ನಿಬ್ಬರನ್ನು ಅವರೊಂದಿಗೆ ಸೇರಿಸಲಾಯಿತು.

ಸತ್ಯಾಗ್ರಹದಲ್ಲಿ ಭಾಗವಹಿಸಲು ಕಾರ್ಖಾನೆಗೆ ರಜೆಯಿಲ್ಲದೆ ಹಾಜರ್ ಆಗದಿದ್ದ ೪೮ ಜನ ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಲಾಯಿತು, ಕೆಲಸಗಾರರ ಮುಂದೆ ಇದ್ದ ಪ್ರಶ್ನೆ ಒಂದೆ, ಅದು ವರ್ಗಾವಣೆಯ ಆಜ್ಞೆಯನ್ನು ಪರಿಪಾಲಿಸಬೇಕೆ ಇಲ್ಲವೆ ಎಂಬುದು. ಅವರ ವೇತನದಲ್ಲಿ ಏನೂ ಬದಲಾವಣೆ ಆಗದಿರುವಾಗ, ವರ್ಗಾವಣೆ ಕೆಲವು ದಿನಗಳ ಮಟ್ಟಿಗಾದ್ದರಿಂದ ಇದನ್ನು ಹೇಗೆ ಒಪ್ಪದಿರಲು ಸಾಧ್ಯ?

ಒಪ್ಪಂದದ ಷರತ್ತುಗಳನ್ನು ಮೇ ತಿಂಗಳಲ್ಲೆ ಅವರು ಒಪ್ಪಬಹುದಿತ್ತು. ಅದರ ಅಂಶಗಳಲ್ಲಿ ಐದು ಮಂದಿ ಕೆಲಸಗಾರರು ವರ್ಗಾವಣೆಯ ಆಜ್ಞೆ ಪಾಲಿಸಿ, ಆಗಸ್ಟ್ ೧೫ ರವರೆಗೆ ರೀಲಿಂಗ್ ಸೆಕ್ಷನ್‌ನಲ್ಲಿ ಕೆಲಸ ಮಾಡುವರು. ಅವರ ವೇತನದಲ್ಲಿ ಯಾವ ಬದಲಾವಣೆಯೂ ಇಲ್ಲ. ವಜಾ ಆಗಿರುವ ಎಲ್ಲ ಕೆಲಸಗಾರರನ್ನೂ ಕೆಲಸಕ್ಕೆ ತೆಗೆದುಕೊಳ್ಳಲಾಗುವುದು. ವಿವಾದದ ಸಂಬಂಧದಲ್ಲಿ ತೆಗೆದುಕೊಳ್ಳಲಾಗಿರುವ ಶಿಸ್ತಿನ ಕ್ರಮಗಳು, ಸತ್ಯಾಗ್ರಹ ಸಂಬಂಧ ದಾಖಲಾಗಿರುವ ಮೊಕದ್ದಮೆಗಳೂ ವಾಪಸು ತೆಗೆದುಕೊಳ್ಳಲಾಗುವುದು. ಆದರೆ ಲೇಬರ್ ಕಾಂಗ್ರೆಸ್ ನಾಯಕರುಗಳು ಈ ಷರತ್ತಿಗೆ ಒಪ್ಪಲಿಲ್ಲ, ಅವರು ಚಳವಳಿಯ ಕಾಲದಲ್ಲಿ ಭಾಗವಹಿಸಿದ್ದ ಕೆಲಸಗಾರರಿಗೆ ಸ್ವಲ್ಪ ಭತ್ಯ ಕೊಡಬೇಕೆಂದು ಒತ್ತಾಯ ಪಡಿಸಿದರು. ಒಪ್ಪಂದ ಅವರಿಗೆ ಬೇಕಿರಲಿಲ್ಲ.

ಕ್ವಿಲಾನ್‌ನಲ್ಲಿ ನಡೆದ ಗೋಲೀಬಾರು

ಚಂದನ ತೋಪ್ ಬಳಿ ಜುಲೈ ೨೬ ರಂದು ಆರ್. ಎಸ್. ಪಿ. ನೇತೃತ್ವದಲ್ಲಿ ಗೇರುಬೀಜ ಕಾರ್ಖಾನೆ ನೌಕರರನ್ನೊಳಗೊಂಡಿದ್ದ ಗುಂಪಿನ ಮೇಲೆ ನಡೆದ ಪೋಲೀಸು ಗೋಲೀಬಾರಿನ ಪ್ರಕರಣದ ಬಗ್ಗೆ ಕೇರಳ ಸರಕಾರ ಜಸ್ಟಿಸ್ ಕೆ. ಶಂಕರನ್‌ರವರನ್ನು ವಿಚಾರಣೆ ನಡೆಸಲು ನೇಮಿಸಿದೆ.

ಆರ್. ಎಸ್. ಪಿ. ನಾಯಕರುಗಳು ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ತಮ್ಮ ಪ್ರಚೋದನಾ ಕೃತ್ಯವನ್ನು ಮುಚ್ಚಿರಿಸಲು ಗೋಲೀಬಾರಿನ ಬಗ್ಗೆ ಸುಳ್ಳುಕಥೆಗಳನ್ನು ಹರಡಲಾರಂಭಿಸಿದ್ದಾರೆ.

ಮೊದಲು ಅವರು ಗೋಲೀಬಾರಿನಲ್ಲಿ ಮೂವರು ಮಡಿದರೆಂದು, ಒಬ್ಬನ ಮೃತದೇಹ ಕಾರ್ಖಾನೆಯಲ್ಲಿ ಬಿದ್ದಿದೆಯೆಂದೂ ಕತೆ ಹರಡಿ, ಈ ದೇಹವನ್ನು ಶವಸಂಸ್ಕಾರಕ್ಕೆ ಕೊಡಬೇಕೆಂದು ಸರಕಾರದ ಸೆಕ್ರೆಟೇರಿಯಟ್ಟಿಗೆ ಜಾಥಾ ಹೊರಡಿಸಿದರು. ಈ ಕೆಲಸಗಾರನನ್ನು ಪೋಲಿಸ್ ಡೆಪ್ಯುಟಿ ಸೂಪರಿಂಟೆಂಡೆಂಟರೇ ತಿವಿದು ಕೊಂದರೆಂದೂ, ಆತ, ಪೋಲೀಸರು ಅತ್ಯಾಚಾರ ನಡೆಸುತ್ತಿದ್ದ ಮುಸ್ಲಿಂ ಮಹಿಳೆಯರನ್ನು ರಕ್ಷಿಸಲು ಹೊರಟಿದ್ದನೆಂದೂ ತಿಳಿಸಿದರು. ಆದರೆ ಮಡಿದ ಇಬ್ಬರಲ್ಲಿ ಒಬ್ಬ ಮುಸ್ಲಿಂ ಕಾರ್ಮಿಕನೆಂದು ತಿಳಿದ ನಂತರ, ಅವರು ಮೇಲಿನ ಕತೆಯನ್ನು ಬಿಟ್ಟು, ಅವನು ಗೋಲೀಬಾರಿನಿಂದ ಮಡಿಯಲಿಲ್ಲ, ತಿವಿದು ಕೊಲ್ಲಲ್ಪಟ್ಟ ಎಂದು ಹೇಳಿದರು. ಶವಪರೀಕ್ಷೆಯ ನಂತರ ಜಿಲ್ಲಾ ಮೆಡಿಕಲ್ ಆಫೀಸರರ ಹೇಳಿಕೆಯು ತಿವಿತದಿಂದ ಮಡಿಯಲಿಲ್ಲವೆಂದೂ ಗೋಲೀಬಾರಿನಿಂದ ಮಡಿದದ್ದೆಂದೂ ಸ್ಪಷ್ಟವಾಗಿದೆ.

ಇದು ಒಂದು ಕಡೆಯಾದರೆ, ಜುಲೈ ೨೬ ರಂದು ನಡೆದ ಘಟನೆಯ ಹಿಂದಿರುವ ನಿಜಾಂಶಗಳನ್ನು ಮುಚ್ಚಿಡಲು ಆರ್. ಎಸ್. ಪಿ. ನಾಯಕರು ಯತ್ನಿಸುತ್ತಿದ್ದಾರೆ.

ಈಗಿನ ಸರಕಾರ ಬರುವುದಕ್ಕೆ ಮೊದಲೇ ಹಿಂದುಸ್ತಾನ್ ಕ್ಯಾಷು ಪ್ರಾಡಕ್ಟ್ಸ್ ಕಂಪೆನಿ ಆರಂಭವಾಗಿತ್ತು. ಚಂದನತೋಪನ್ನೂ ಒಳಗೊಂಡು ಈ ಕಂಪೆನಿಯ ಅಡಿಯಲ್ಲಿ ಅನೇಕ ಕಾರ್ಖಾನೆಗಳಿವೆ. ಏಪ್ರಿಲ್ ೧೯, ೧೯೫೭ ಎ.ಐ.ಟಿ.ಯು.ಸಿ. ಮತ್ತು ಐ.ಎನ್.ಟಿ.ಯು.ಸಿ. ಸಂಘಗಳು ಕಂಪೆನಿಯ ಅಡಿಯಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸದ ಹಂಚಿಕೆಯನ್ನು ಸಂಬಂಧಿಸಿ ಒಂದು ಒಪ್ಪಂದವಾಯಿತು. ಆರ್. ಎಸ್. ಪಿ. ನೇತೃತ್ವದಲ್ಲಿರುವ ಸಂಘವು ಒಪ್ಪಂದದ ಬಗ್ಗೆ ವಿವಾದವೆತ್ತಿತು. ಕಾರ್ಮಿಕ ಸಚಿವರು ಏಪ್ರಿಲ್ ೨೪ರಂದು ತ್ರಿಪಕ್ಷ ಸಮ್ಮೇಳನವೊಂದನ್ನು ಕರೆದರು. ಕೆಲಸದ ಹಂಚಿಕೆ ಬಗ್ಗೆ ಅಲ್ಲಿ ಮತ್ತೆ ಒಪ್ಪಂದವಾಯಿತು. ಅದು ಇನ್ನೂ ಸಹ ಜಾರಿಯಲ್ಲಿದೆ.

ಜುಲೈ ೨೬ ರ ಘಟನೆಗೆ ಕೆಲ ವಾರಗಳ ಮುಂಚೆ ಆರ್. ಎಸ್. ಪಿ. ಸಂಘವು ಕೆಲವು ಸ್ತ್ರೀ ಮಜೂರರ ಹೆರಿಗೆ ಸೌಲಭ್ಯದ ಬಗ್ಗೆ ವಿವಾದ ಎತ್ತಿದರು. ಇದು ನಿಜವಾಗಿಯೂ ಕೈಗಾರಿಕಾ ವಿವಾದವಾಗಲಾರದು. ಹೊಸದಾಗಿ ಬಂದಿರುವ ಹೆರಿಗೆ ಸೌಲಭ್ಯ ಕಾಯಿದೆಯ ಪ್ರಕಾರ, ಫ್ಯಾಕ್ಟರಿ ಇನ್‌ಸ್ಪೆಕ್ಟರ್ ಅಥವ ಲೇಬರ್ ಆಫೀಸರರ ಸಮ್ಮುಖದಲ್ಲಿ ಅರ್ಜಿ ಕೊಟ್ಟರೆ ಸಾಕು, ಅವರು ಕ್ರಮ ತೆಗೆದುಕೊಂಡು, ಕಾಯಿದೆಯ ಪ್ರಕಾರ ಸೌಲಭ್ಯ ದೊರಕಿಸಿ ಕೊಡುವರು. ಈ ಹೊಸ ಕಾಯಿದೆ ತಂದಿದ್ದು ಈಗಿನ ಮಂತ್ರಿ ಮಂಡಲ.

ಇದಲ್ಲದೆ ಆರ್.ಎಸ್.ಪಿ. ಸಂಘವು ಅನೇಕ ವಿವಾದಗಳನ್ನು ಮನಬಂದಂತೆ ಎತ್ತಿದರು. ಅವಾಸ್ತವವೂ, ಅನ್ಯಾಯವೂ ಆದ ಬೇಡಿಕೆಗಳಾಗಿದ್ದರೂ ಸಹ ಕಾರ್ಮಿಕ ಇಲಾಖೆಯು ವಿಷಯ ತೆಗೆದುಕೊಂಡಿತು. ಜುಲೈ ೧೯ ರಂದು ಕನ್ಸಿಲಿಯೇಷನ್ ಗೊತ್ತು ಮಾಡಲಾಗಿದ್ದು ಮಾಲಿಕರ ಪ್ರತಿನಿಧಿಗಳು ಬರಲಿಲ್ಲ. ನಂತರ ೨೨ ಮತ್ತು ೨೩ ರಂದು ಮಾತುಕತೆ ನಡೆದು ಮುರಿದುಬಿತ್ತು, ವಿಷಯವನ್ನು ಲೇಬರ್ ಕಮೀಷನರಿಗೆ ಒಪ್ಪಿಸಲಾಯಿತು.

ಕನ್ಸಿಲಿಯೇಷನ್ ನಡೆಯುತ್ತಿರುವಾಗಲೆ ಆರ್.ಎಸ್.ಪಿ. ಸಂಘದವರು ಹಿಂಸಾತ್ಮಕವಾದ ರೀತಿಯಲ್ಲಿ ಕಾರ್ಖಾನೆಯೆದುರು ಪಿಕೆಟಿಂಗ್ ಆರಂಭಿಸಿದರು. ಜುಲೈ ೨೩ರಂದು ತಯಾರಾದ ಗೇರುಬೀಜವನ್ನು ಲಾರಿಯಲ್ಲಿ ಕಾರ್ಖಾನೆಯಿಂದ ಕೇಂದ್ರ ಕಛೇರಿಗೆ ಸಾಗಿಸುವುದನ್ನು ತಡೆದರು. ೨೪ರಂದು ಬೆಳಗ್ಗೆ ಮ್ಯಾನೇಜ್‌ಮೆಂಟು ಮತ್ತು ನೌಕರರನ್ನು ಕಾರ್ಖಾನೆ ಜನಪ್ರಿಯ ಆಂಧೋಳನದ ನಾಯಕತ್ವವನ್ನು ಯೊಳಗೆ ಪ್ರವೇಶಿಸದಂತೆ ತಡೆಯಲಾಯಿತು, ಆದರೆ ಕೆಲಸಗಾರರು ಮಾತ್ರ ಕಾರ್ಖಾನೆಯೊಳಗೆ ಹೋಗಿ ತಾವೇ ಕೆಲಸ ಆರಂಭಿಸಿದರು. ೨೫ ರಂದು ಬೆಳಗ್ಗೆ ಆರ್. ಎಸ್. ಪಿ. ಯೂನಿಯನ್‌ನವರು ಫ್ಯಾಕ್ಟರಿ ಮ್ಯಾನೇಜರ್ ಮತ್ತು ಮಾಲಿಕರು ಕಾರ್ಖಾನೆಗೆ ಹೋಗಲು ಯತ್ನಿಸಿದಾಗ ಅವರ ಮೇಲೆ ಧಾಳಿ ನಡೆಸಿದರು.

ಈ ವಿಷಯಗಳನ್ನು, ಸಂಘವು ನಡೆಸಿದ ತಂತ್ರವನ್ನು ಎಲ್ಲರೂ ಸ್ವಲ್ಪ ಗಮನಿಸಬೇಕಾಗಿದೆ.

ಚಂದನತೊಪಿನ ಹೋರಾಟದ ಹಿನ್ನೆಲೆಯನ್ನು ವಿವರಿಸುತ್ತ ಆರ್.ಎಸ್.ಪಿ. ಟ್ರೇಡ್ ಯೂನಿಯನ್ ನಾಯಕ ಟಿ. ಕೆ. ದಿವಾಕರನ್‌ರವರು ಪತ್ರಿಕೆಗೆ ಇತ್ತ ದೀರ್ಘ ಹೇಳಿಕೆಯ ಕೆಲವಂಶಗಳು ಈರೀತಿ ಇವೆ:

"ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿಯು ತೀವ್ರವಾಗಿ ರೂಪುಗೊಳ್ಳುತ್ತಿದೆ, ಯಾರೇ ಆಗಲಿ ಆಂತರಿಕ ಯುದ್ಧ ಅಥವಾ ಬಂಧ ವಿಮೋಚನಾ ಸಮರ ಇವನ್ನು ಬಿಟ್ಟು ಬೇರೆ ಮಾರ್ಗವಿಲ್ಲ ಎಂಬುದು ಸ್ಪಷ್ಟವಾಗಿದೆ.

"ಇಂಥ ಸನ್ನಿವೇಶದಲ್ಲಿ ಚಿಕ್ಕದಾಗಿದ್ದರೂ ಕಾರ್ಮಿಕ ವರ್ಗದಲ್ಲಿ ಬೇರೂರಿರುವ ರಾಜಕೀಯ ಪಕ್ಷವಾಗಿರುವ ಆರ್. ಎಸ್. ಪಿ. ಯ ಕರ್ತವ್ಯ ಸ್ಪಷ್ಟವಾಗಿದೆ:

"ಕಾರ್ಮಿಕ ವರ್ಗದ ಪಕ್ಷವಾದ ನಾವು ಸುಮ್ಮನೆ ನೋಡುತ್ತ ಕುಳಿತಿರುವ ಕಾಲವಲ್ಲ ಇದು, ಆದರೆ ಜನತೆಯ ಹೋರಾಟಗಳನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ದು, ಸಂದರ್ಭ ಸಾಧಕರು, ಪ್ರತಿಗಾಮಿಗಳು ಜಾತೀಯವಾದಿಗಳು, ಸರ್ವಾಧಿಕಾರತ್ವ ಮತ್ತು ಅಧಿಕಾರ ದಾಹದಿಂದ ಕೂಡಿರುವ, ರಾಜಕೀಯ ಬೇಧ ನೀತಿ ಅನುಸರಿಸುತ್ತಿರುವ ಮತ್ತು ಎಲ್ಲ ರಾಜಕೀಯ ವಿರೋಧಿಗಳನ್ನು ನಿರ್ನಾಮಗೊಳಿಸ ಹೊರಟಿರುವ ಸರ್ಕಾರದ ವಿರುದ್ಧವಿರುವ ತನ್ನು ಕೈಯಲ್ಲಿ ಪಡೆದುಕೊಳ್ಳುವುದನ್ನು ತಪ್ಪಿಸುವುದೂ ನಮ್ಮ ಕರ್ತವ್ಯವಾಗಿದೆ."

(೧೦ನೇ ಪುಟ ನೋಡಿ)

ನೆಹರೂ ಕೇರಳ ವಿಷಯವನ್ನು ತಾಳ್ಮೆ-ಗಂಭೀರತೆಗಳಿಂದ ಪರಿಶೀಲಿಸಬೇಕಿತ್ತು

ಉತ್ಪ್ರೇಕ್ಷಿತ, ಅಸತ್ಯ ವರದಿಗಳಿಂದ ಅವರ ಹೇಳಿಕೆ ಏಕಪಕ್ಷೀಯವಾಗಿದೆ

ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯಘೋಷ್ ಮತ್ತು ಕೇರಳದ ಮುಖ್ಯಮಂತ್ರಿ ಇ.ಎಂ.ಎಸ್. ನಂಬೂದ್ರಿಪಾದ್‌ರವರು ಪಂಡಿತ್ ನೆಹರೂರವರು ಆಗಸ್ಟ್ 7ರಂದು ಕೇರಳದ ಪರಿಸ್ಥಿತಿಯ ಬಗ್ಗೆ ಪತ್ರಿಕಾ ಸಮ್ಮೇಳನದಲ್ಲಿ ಇತ್ತಿರುವ ಹೇಳಿಕೆಯು ಏಕಪಕ್ಷೀಯದ್ದಾಗಿದೆ ಎಂದು ತಿಳಿಸಿದ್ದಾರೆ. ಹೇಳಿಕೆಯ ಸಾರಾಂಶ ಈ ರೀತಿ ಇದೆ:

ಪ್ರಧಾನಿ ಹೇಳಿಕೆಯ ಪರಿಣಾಮವೇನು?

ಪ್ರಧಾನ ಮಂತ್ರಿಯವರು ತಮ್ಮ ಅಭಿಪ್ರಾಯವನ್ನು ಉತ್ಪ್ರೇಕ್ಷಿತವಾದ, ಅರ್ಧ ನಿಜವಾದ ಹಾಗೂ ಪೂರ್ಣ ಅಸತ್ಯವಾದ ವರದಿಗಳ ಆಧಾರದ ಮೇಲೆ ಪ್ರಕಟಗೊಳಿಸಿದ್ದಾರೆ. ಕೇರಳದ ಪರಿಸ್ಥಿತಿಯ ಬಗ್ಗೆ ಕೆಲವು ಸ್ವಹಿತ ಚಿಂತಕರು ಉತ್ಪ್ರೇಕ್ಷಿತವಾದ ವರದಿಯನ್ನು ಇತ್ತು ಕೇಂದ್ರ ಸರಕಾರದ ಪ್ರವೇಶವನ್ನು ಆಹ್ವಾನಿಸಿರುವುದು ಇಲ್ಲಿ ಹೇಳಬೇಕಿದೆ. ಪ್ರಧಾನ ಮಂತ್ರಿಗಳು ಕೇರಳದ ಪರಿಸ್ಥಿತಿಯ ಬಗ್ಗೆ ಮಾಡಿರುವ ಈ ಏಕ ಪಕ್ಷೀಯವಾದ ಹೇಳಿಕೆಯು, ಕೇರಳ ಕಾಂಗ್ರೆಸ್ಸಿಗೆ ಮತ್ತು ಇತರ ಪಕ್ಷಗಳಿಗೆ ತಮ್ಮ ಘಟನಾ ವಿರೋಧಿ, ಹಿಂಸಾತ್ಮಕ ಚಳವಳಿಯನ್ನು ತೀವ್ರಗೊಳಿಸಲು ಸಹಾಯಕವಾಗುತ್ತದೆ ಅಷ್ಟೆ.

ಸರಕಾರದ ಪರವಾಗಿರುವವರಾಗಲೀ ಅಥವಾ ವಿರೋಧಿಗಳಾಗಲೀ ಯಾವುದೊ ವಿಭಾಗದ ಜನರು ಕಾನೂನನ್ನು ತಮ್ಮ ಕೈಗೆ ತೆಗೆದುಕೊಳ್ಳುವುದನ್ನು ತಪ್ಪಿಸಲು ಕೇರಳ ಸರಕಾರ ಹಾಗೂ ಕಮ್ಯೂನಿಸ್ಟ್ ಪಕ್ಷ ಕಾತರವಾಗಿದೆ. ರಾಜ್ಯದಲ್ಲಿ ಉತ್ತಮವಾದ ವಾತಾವರಣವೇರ್ಪಡಬೇಕೆಂಬ ಅಭಿಲಾಷೆ ಇದೆ.

ಪಂಡಿತ ನೆಹರೂರವರು ಪಕ್ಷದ ನಾಯಕರಾಗಿ ಅಭಿಪ್ರಾಯ ವ್ಯಕ್ತಗೊಳಿಸಬಹುದು, ಆದರೆ ಅವರು ಪ್ರಧಾನಿಗಳೂ ಆಗಿದ್ದಾರೆ. ಈ ವಿಭೇದವು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಆದ್ದರಿಂದ ನೆಹರೂರವರು ಬಹಿರಂಗವಾಗಿ ಈ ಹೇಳಿಕೆಯನ್ನು ಕೊಡದೆ ಇರಬೇಕಾಗಿತ್ತು. ಕೇರಳದಲ್ಲಿ ಪರಿಸ್ಥಿತಿ ಅಷ್ಟೇನೂ ತೀವ್ರವಾಗಿಲ್ಲ. ಅನೇಕ ರಾಜ್ಯಗಳಲ್ಲಿ ತೀವ್ರವಾದ ಪರಿಸ್ಥಿತಿ ಏರ್ಪಟ್ಟಿತ್ತು, ಆದರೆ ಪ್ರಧಾನ ಮಂತ್ರಿಗಳು ಅವುಗಳ ಬಗ್ಗೆ ಈರೀತಿ ಬಹಿರಂಗವಾದ ನಿಲುಮೆಯನ್ನು ತೆಗೆದುಕೊಂಡಿರಲಿಲ್ಲ. ಪ್ರಧಾನ ಮಂತ್ರಿಗಳ ಹೇಳಿಕೆಯು ವಿಷಾದಕರವಾಗಿದೆ.

ಕಳೆದ ಕೆಲವು ವಾರಗಳಲ್ಲಿ ರಾಜ್ಯದಲ್ಲಿ ಕೆಲವು ಘಟನೆಗಳು ನಡೆದಿವೆ ಎಂಬುದು ನಿಜ, ಅವು ದುರದೃಷ್ಟವಾದುದೂ, ವಿಷಾದಕರವಾದುದೂ ಆಗಿದೆ. ಆದರೆ ಪ್ರಧಾನ ಮಂತ್ರಿಗಳ ತಮ್ಮ ಅಭಿಪ್ರಾಯಗಳು ಉತ್ಪ್ರೇಕ್ಷಿತ, ಅರ್ಧ ಸತ್ಯಹಾಗೂ ಪೂರ್ಣ ಅಬದ್ಧಪೂರಿತ ವರದಿಗಳ ಆಧಾರದಿಂದ ಪ್ರೇರಿತವಾಗಿವೆ.

ಸೌಹಾರ್ದ ವಾತಾವರಣಕ್ಕೆ ಕೇರಳ ಸರಕಾರ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಪ್ರಯತ್ನಿಸಿವೆ

ಸತ್ಯಸಂಗತಿ ಗೊತ್ತಿಲ್ಲ

ಕಳೆದ 1 ತಿಂಗಳಿನಿಂದಲೂ ನಡೆದಿರುವ ಬೆಳವಣಿಗೆಗಳನ್ನು ವಿಶಾಲವಾದ ದೃಷ್ಟಿಕೋಣದಿಂದ ಪರಿಶೀಲಿಸಿದ್ದಲ್ಲಿ, ಕೇರಳದಲ್ಲಿ ನಡೆದಿರುವ ವಿಷಾದ ಘಟನೆಗಳಿಗೆ ಮತ್ತು ಪ್ರಸಕ್ತ ಪರಿಸ್ಥಿತಿಗೆ ಕಾರಣಕರ್ತರು ಕಮ್ಯೂನಿಸ್ಟ್ ಪಾರ್ಟಿಯಲ್ಲ, ಬದಲಾಗಿ ಚುನಾವಣೆಯಲ್ಲಿ ಬಹುಮತದಿಂದ ಆಯ್ಕೆಯಾಗಿರುವ ಕಮ್ಯೂನಿಸ್ಟ್ ಪಾರ್ಟಿ

ಅಜಯ ಘೋಷ್, ಇ. ಎಂ. ಎಸ್. ಹೇಳಿಕೆ:

ನೇತೃತ್ವದಲ್ಲಿರುವ ಸರಕಾರವನ್ನು ಯಾವುದಾದರೂ ರೀತಿಯಲ್ಲಿ ಪದಚ್ಯುತಿಗೊಳಿಸಲು ಯತ್ನಿಸುತ್ತಿರುವ ವಿರೋಧ ಪಕ್ಷಗಳು ಎಂಬುದು ಅರಿವಾಗುತ್ತಿತ್ತು.

ರಾಜ್ಯದಲ್ಲಿ ರಾಜಕೀಯ ಕೊಲೆಗಳು ನಡೆದಿವೆ, ಜನತೆಯ ನಡುವೆ ಭೀತಿ ಮತ್ತು ಅಭದ್ರತೆಯ ವಾತಾವರಣವೇರ್ಪಟ್ಟಿದೆ ಎಂದು ಪ್ರಧಾನಿಗಳು ಹೇಳಿದ್ದಾರೆ. ಅವರು ವರಂದ್ರಪಲ್ಲಿ ಘಟನೆಗೆ ಸಂಬಂಧಿಸಿ ಹೇಳಿದ್ದಾರೆಂದು ತಿಳಿಯುತ್ತೇವೆ. ಘಟನೆಯ ಪೂರ್ಣ ವಿವರವನ್ನು ತಿಳಿದಿರುವ ಯಾವನೇ ಆದರೂ ಪ್ರಚೋದನೆ ಬೇಕೆಂತಲೇ ಕಾಂಗ್ರೆಸ್ಸಿನವರಿಂದ ಆದುದೆಂಬುದನ್ನು ಅರಿಯದಿರಲಾರ. ಕಾಂಗ್ರೆಸ್ ನಾಯಕರುಗಳು ತೋರಿಸುತ್ತಿರುವಂತೆ ಅಲ್ಲಿ ನಡೆದುದು ರಾಜಕೀಯ ಕೊಲೆಯಲ್ಲ. ದುರದೃಷ್ಟವಶಾತ್ ಪ್ರಧಾನಿಯವರು ಅದನ್ನು ಹೇಳುತ್ತಿದ್ದಾರೆ. ಕಳೆದ 16ತಿಂಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರ, ಟ್ರೇಡ್ ಯೂನಿಯನ್ ಮತ್ತು ಕಿಸಾನ್ ಸಭಾ ಕಾರ್ಯಕರ್ತರ ಕೊಲೆಗಳಾಗಿವೆ ಎಂದು ನಾವು ಹೇಳಬಯಸುತ್ತೇನೆ. ಇದಕ್ಕೆ ರಾಜ್ಯದಲ್ಲಿರುವ ಪ್ರಮುಖ ಕಾಂಗ್ರೆಸ್ ನಾಯಕರ ಬೆಂಬಲವೂ ಇತ್ತು ಎಂದು ಹೇಳುತ್ತೇವೆ.

ಪ್ರಧಾನಿಯವರು ಮಾಡಿರುವ ಇನ್ನೊಂದು ಅಪಾದನೆಯೆಂದರೆ ಕೇರಳ ಸರಕಾರವು ನ್ಯಾಯಾಂಗ ಆಡಳಿತೆಯಲ್ಲಿ ಪ್ರವೇಶಿಸಿ, ಮೊಕದ್ದಮೆಗಳೆಲ್ಲವನ್ನೂ ಹಿಂತೆಗೆದುಕೊಂಡಿದೆ ಎಂಬುದು.

ಸರಕಾರವು ಅಧಿಕಾರ ವಹಿಸಿಕೊಂಡ ನಂತರ ಎಲ್ಲ ರಾಜಕೀಯ ಬಂದಿಗಳನ್ನು ಬಿಡುಗಡೆಮಾಡಲು ನಿಶ್ಚಯಿಸಿತು ಇದು ಕಮ್ಯೂನಿಸ್ಟರಿಗೆ ಅಷ್ಟೇ ಅಲ್ಲದೆ ಕಾಂಗ್ರೆಸ್, ಮುಸ್ಲಿಂಲೀಗ್, ಪಿ. ಎಸ್. ಪಿ. ಮತ್ತು ಆರ್.ಎಸ್.ಪಿ. ಪಕ್ಷಗಳೆಲ್ಲವಕ್ಕೂ ಅನುಕೂಲವಾಯಿತು. ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವಾಗ ಅನುಸರಿಸಲಾದ ನೀತಿಯು ಕಾರ್ಮಿಕರ ಮತ್ತು ವ್ಯವಸ್ಥಾಯಗಾರರ ವಿವಾದಗಳಿಂದ ಮತ್ತು ರಾಜಕೀಯ ಚಳವಳಿಗಳಿಂದ ಉದ್ಭವಿಸಿದ್ದ ಮೊಕದ್ದಮೆಗಳಿಗೆ ಮಾತ್ರ ಅನ್ವಯಿಸುವುದಾಗಿತ್ತು. ಈ ನೀತಿಯನ್ನು ಅನುಸರಿಸಲಾಗಿದ್ದು ನ್ಯಾಯಾಂಗ ಮತ್ತು ಆಡಳಿತೆಯನ್ನು ಕುಂಠಿತಗೊಳಿಸಲಿಕ್ಕಲ್ಲ, ಆದರೆ ರಾಜ್ಯದಲ್ಲಿ ಉತ್ತಮ ವಾತಾವರಣವೇರ್ಪಡಿಸಿ, ಎಲ್ಲ ರಾಜಕೀಯ ಪಕ್ಷಗಳ ನಡುವೆ ಸೌಹಾರ್ದಭಾವನೆ ಉಂಟುಮಾಡಲಿಕ್ಕಾಗಿ. ಈ ನೀತಿ ತಪ್ಪಾಗಿದ್ದರೆ ತಿಳಿಸಲಿ. ಅದು ತಪ್ಪೆಂದು ಪ್ರಧಾನ ಮಂತ್ರಿಗಳು ಭಾವಿಸಿದಲ್ಲಿ, ಕೇರಳ ಕಾಂಗ್ರೆಸ್ಸಿಗರು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆನ್ನುವ ಷರತ್ತುಗಳನ್ನು ವಿವಾದದ ಇತ್ಯರ್ಥಕ್ಕಾಗಿ ಮುಂಡಿಸುವುದನ್ನು ಬಿಡಬೇಕೆಂದು ಅವರಿಗೆ ತಿಳಿಸಲಿ.

ವರ್ಗಾವಣೆ, ಸಸ್ಪೆನ್‌ಶನ್ ಇತ್ಯಾದಿ ಆಡಳಿತ ಕ್ರಮಗಳ ಬಗ್ಗೆ ಬೇಕಾದಷ್ಟು ಹೇಳಲಾಗಿದೆ. ಈ ಕ್ರಮಗಳನ್ನು ನ್ಯಾಯಬದ್ಧವಾಗಿ ಘಟನಾತ್ಮಕವಾಗಿ ತೆಗೆದುಕೊಳ್ಳಲಾಗಿದೆ. ಪಕ್ಷದ ಹಿತಸಾಧನೆಯಿಂದ ಅಲ್ಲ. ಇನ್ನು ಮುಂದೆಯೂ ಸಹ ಅಂಥ ಕ್ರಮಗಳನ್ನು ಉತ್ತಮವಾದ ಆಡಳಿತೆಯಿಂದ ತೆಗೆದುಕೊಳ್ಳಬೇಕಾಗುತ್ತದೆ ಎಂದು ತಿಳಿಸುತ್ತೇವೆ ಮತ್ತು ರಾಜಕೀಯ ಪಕ್ಷಗಳು ಇಂಥದರಲ್ಲಿ ಪ್ರವೇಶಿಸಲು ಹಕ್ಕಿಲ್ಲವೆಂದು ತಿಳಿಸಬಯಸುತ್ತೇವೆ.

ಉತ್ಪ್ರೇಕ್ಷೆ, ಅಷ್ಟೆ!

ಪ್ರತಿಯೊಬ್ಬ ಪೌರನಿಗೂ ದೊರಕಬೇಕಿರುವ ಸೌಲಭ್ಯವು ಬಹುಭಾಗ ಜನಕ್ಕೆ ಕೇರಳದಲ್ಲಿ ದೊರಕುತ್ತಿಲ್ಲ, ಅವರು ಅಸಂತುಷ್ಟರಾಗಿದ್ದಾರೆ ಮತ್ತು ಅಭದ್ರತೆಯಿಂದಿದ್ದಾರೆ ಎಂದು ಪ್ರಧಾನ ಮಂತ್ರಿಗಳು ಹೇಳಿರುವುದು ಆಶ್ಚರ್ಯಕರವಾಗಿದೆ. ಇದು ಘಟನಾತ್ಮಕವಾಗಿ ಜನತೆಯಿಂದ ಅಧಿಕಾರದಿಂದ ತಳ್ಳಲ್ಪಟ್ಟ ಕೆಲವು ರಾಜಕಾರಣಿಗಳು ಕಳೆದ 16ತಿಂಗಳಲ್ಲಿ ನಿರಾಶರಾಗಿ ಮಾಡಿರುವ ಉತ್ಪ್ರೇಕ್ಷೆಯ ವ್ಯಾಖ್ಯೆಯಾಗಿದೆ ಅಷ್ಟೆ.

ಕೇರಳ ಸರಕಾರ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಜನತೆಯ ಯಾವ ಭಾಗಕ್ಕೂ, ಯಾವುದೇ ಪಕ್ಷಕ್ಕೆ ಸೇರಲಿ, ಅವರ ನಡುವೆ ಸೌಹಾರ್ದ ವಾತಾವರಣವುಂಟು ಮಾ

(೧೧ನೇ ಪುಟ ನೋಡಿ)

ನೆಹರೂರವರ ನೆನಪಿಗೆ, ಗಮನಕ್ಕೆ

● ಕೇರಳದಲ್ಲಾದ ಗೋಲಿಬಾರ್ ವಿಷಯ ಮತ್ತು ವಿದ್ಯಾರ್ಥಿಗಳ ಅಸಂಬದ್ಧ ಚಳುವಳಿಗಳ ಬಗ್ಗೆ ನೀವು ಕೇರಳ ಸರ್ಕಾರವನ್ನೇ ದೂಷಿಸಿದ್ದೀರಿ.

ಈಗ ಎರಡು ವರ್ಷಗಳ ಹಿಂದೆ ಪಾಟ್ನಾದಲ್ಲಾದ ವಿದ್ಯಾರ್ಥಿಗಳ ಗಲಭೆಯಲ್ಲಿ ಪೋಲಿಸರಿಂದಾದ ಗೋಲಿಬಾರ್ ಬಗ್ಗೆ, ಅಲ್ಲಾದ 'ಅತಿ ಹಿಂಸೆ'ಗಾಗಿ ನ್ಯಾಯ ವಿಚಾರಣೆ ನಡೆದರೂ ಹೀಗೆಯೇ ಹೇಳಿಕೆಯೊಂದನ್ನು ಹೊರಡಿಸಿ ವಿದ್ಯಾರ್ಥಿಗಳನ್ನು ಕಟುವಾಗಿ ದೂಷಿಸಿದ್ದಿರಿ. ಬಿಹಾರ ಸರಕಾರದ ಬಗ್ಗೆ ಚಕಾರವೆತ್ತಲಿಲ್ಲವೇಕೆ ?

● ಸುಮಾರು ಒಂದು ಸಹಸ್ರ ಜನ ವಿದ್ಯಾರ್ಥಿಗಳು ಮೊನ್ನೆ ತಾನೆ (ಆಗ 7) ಮಾವು ಜಂಕ್ಷನ್ ಸ್ಟೇಷನ್ (ಗೋರಖಪೂರ್) ಮೇಲೆ ಧಾಳಿ ನಡೆಸಿ ಗೂಡ್ಸ್ ರೈಲಿನಗಾರ್ಡ ಮತ್ತಿನ್ನಿತರರನ್ನು ಜಖಂಗೊಳಿಸಿದರು. 'ಷಂಟಿಂಗ್'ನಲ್ಲಿದ್ದ ಎಂಜಿನುಗಳಿಗೆ ತೊಂದರೆ ನೀಡಿ 'ಪಾಯಿಂಟ್ ಇಂಡಿಕೇಟರ್'ನ್ನು ಹಾಳುಮಾಡಿದರು. ಸ್ಟೇಷನ್ನನ್ನು ಲೂಟಿ ಮಾಡಿದರು.

ಪ್ರಧಾನಿಯವರೆ ಈಗಾರನ್ನು ನೀವು ದೂಷಿಸುತ್ತೀರಿ ?

● "ಯಾವುದಾದರೂ ರಾಜ್ಯದಲ್ಲಿ ಪೋಲೀಸರು ಗುಂಡು ಹಾರಿಸಿದರು ಎಂಬ ಕಾರಣದಿಂದಲೇ ಆ ರಾಜ್ಯ ಸರ್ಕಾರದ ಯೋಗ್ಯತೆಯನ್ನು ಅಳೆಯಲಾಗದು" ಎಂದು ಕೆಲವೇ ದಿನಗಳ ಹಿಂದೆ ಕಲಕತ್ತೆಯಲ್ಲಿ ಹೇಳಿದ ನೀವು ಕೇರಳ ಕಾಂಗ್ರೆಸ್ಸಿಗರ ಅಭಿಪ್ರಾಯಕ್ಕೆ ಕಿವಿಜೋತು ಅಭಿಪ್ರಾಯ ಬದಲಿಸುವುದು ನಿಮಗೆ ಭೂಷಣವೇ ?

● ಕಳೆದ ಹನ್ನೊಂದು ವರುಷಗಳಲ್ಲಿ ಗೋಲಿಬಾರ್ ನಡೆಯದ ಒಂದು ರಾಜ್ಯದ ಹೆಸರನ್ನಾದರೂ ನೀವು ಹೇಳುವಿರಾ? ಆ ಕಾಂಗ್ರೆಸ್ ಸರಕಾರಗಳ ಮೇಲೆ ಏನು ಕ್ರಮ ಕೈಕೊಂಡಿದಿರಿ? ಏನು ಹೇಳಿದ್ದಿರಿ? ಆಗಲೂ, ಆಗಿನಿಂದಲೂ ನೀನೆ ಪ್ರಧಾನಿಯಾಗಿಲ್ಲವೆ?

● ಕಳೆದ ಮಹಾ ಚುನಾವಣೆಗಳ ಬಳಿಕ ಮದರಾಸು ರಾಜ್ಯದ ರಾಮನಾಥಪುರದ ಅಮಾನುಷ ಘಟನೆಗಳು ಅಂತರ್ರಾಷ್ಟ್ರೀಯದಲ್ಲಿ ಬಡಾಯಿ ಕೊಚ್ಚುವ ಭಾರತಕ್ಕೆ ಭೂಷಣವಾಗಿದ್ದುವೆ ? ಆಗ ನೀವು ಮದರಾಸು ಸರ್ಕಾರದ ದಕ್ಷತೆಯ ಬಗ್ಗೆಯಾಗಲಿ, ದೌರ್ಬಲ್ಯದ ಬಗ್ಗೆಯಾಗಲಿ ಪಿಟ್ ಎಂದು ಮಾತನಾಡಿದಿರಾ?

● ಪ್ರಪಂಚಕ್ಕೆ ಶಾಂತಿಯನ್ನು ಬೋಧಿಸ ಹೊರಟ ನೀವು, ನಿಮ್ಮ ಪಕ್ಷ, 'ಶಾಂತಿಪ್ರಿಯ' ನಿಮ್ಮ ಪಕ್ಷ, ಶಾಂತಿಭದ್ರತೆಗಳ ಸ್ಥಾಪನೆಗೆ ಕೇರಳದಲ್ಲಿ ಆಳುವ ಪಕ್ಷದೊಂದಿಗೇಕೆ ಸಹಕರಿಸಲಾರದಷ್ಟು ದುರ್ಬಲವಾಗಿದೆ ? "ರಾಜ್ಯಾಂಗದ ಚೌಕಟ್ಟಿನಲ್ಲೇ ಕಾರ್ಯನಿರ್ವಹಿಸುವ ಬೇರೊಂದು ಪಕ್ಷದ ಪ್ರಯೋಗಕ್ಕೆ" ಅವಕಾಶ ಕೊಟ್ಟ ನೀವು, ನಿಮ್ಮ ಪಕ್ಷ ಯಾಕೆ ಸಹಕರಿಸಬಾರದು ? ಸಹಕರಿಸಬೇಕೆಂದು ನಿಮಗೆ ಅನಿಸುವುದಿಲ್ಲವೆ ?

—ಓರ್ವ ಸಾಮಾನ್ಯ

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಒಬ್ಬ ಸದಸ್ಯರಾದ ಪಿ. ಸಿ. ಆತ್ರಿಚ್ಚನ್

ಕೇರಳ ಕಾಂಗ್ರೆಸ್ಸಿಗರಿಗೆ ಹೇಳುತ್ತಿದ್ದಾರೆ:

“ನಿಮ್ಮ ಸಹಚರನಾಗೆ”

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಒಬ್ಬ ಸದಸ್ಯ ಶ್ರೀ ಪಿ. ಸಿ. ಆತಿಚ್ಚನ್, ಅವರು ಒಂದು ಬಹಿರಂಗ ಪತ್ರ ಪ್ರಕಟಿಸಿದ್ದಾರೆ. ಅದರಲ್ಲಿ ಅವರು ಕೇರಳದ ಕಾಂಗ್ರೆಸ್ ನಾಯಕರನ್ನು ತೀವ್ರವಾಗಿ ವಿಮರ್ಶಿಸಿ, ಬಿಚ್ಚು ಮಾತಿನಿಂದ ಹೇಳುತ್ತಾರೆ: “ನಿಮ್ಮ ಸಹಚರನಾಗಲು ನನ್ನಿಂದಾಗದು” ಎಂದು. ಆ ಪತ್ರವನ್ನು ಕನ್ನಡ ಓದುಗರಿಗೆ ಇಲ್ಲಿ ಅರ್ಪಿಸಿದ್ದೇವೆ:

ಗಾಂಧೀಜಿಯ ಶಿಷ್ಯ

“ಸುಮಾರು 23 ವರ್ಷಗಳ ಹಿಂದೆ ನಾನು ವಾರ್ಧಾಕ್ಕೆ ಹೋದೆ. ಅಲ್ಲಿ ನನ್ನ ಬಾಪುಜಿಯನ್ನು ಕಂಡೆ. ಅವರ ಪೂಜ್ಯ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದೆ. ಅವರ ದಿವ್ಯ ಉಪದೇಶಗಳನ್ನು ಕೇಳಿ ಕೇಳಿ ಪರಮಾನಂದದಲ್ಲಿ ಮುಳುಗಿದೆ. ಅವರು ನಾಯಕತ್ವ ವಹಿಸುವ, ಅವರಿಂದ ಅನುಗ್ರಹಿಸಲ್ಪಟ್ಟಿರುವ ಕಾಂಗ್ರೆಸ್ಸಿನಿಂದ ಭಾರತಕ್ಕೆ—ವಿಶೇಷವಾಗಿ ಭಾರತದ ದಲಿತ ಜನತೆಗೆ—ಎಂಥೆಂಥ ಅದ್ಭುತ ಸಿದ್ಧಿಗಳು ಲಭಿಸಲಾರವು! ಹೀಗೆ ನಾನು ಬಹಳವಾಗಿ ಆಶಿಸಿದ್ದೆ. “ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಮುಖ್ಯವಾದ ಹರಿಜನ ಸೇವೆಗೆ ನಿನ್ನ ಜೀವನವನ್ನು ಮೀಸಲಾಗಿ ಇಡು”–ನಾನು ವಾರ್ಧಾ ಬಿಟ್ಟುಬರುವಾಗ ನನ್ನ ಬಾಪೂಜಿ ನನಗೆ ಕೊಟ್ಟಿದ್ದ ಅಪ್ಪಣೆ ಇದಾಗಿತ್ತು. ಹಾಗೆ ನನ್ನ ಕಾಂಗ್ರೆಸ್ ಸೇವೆಗೆ ಈಗ 23 ವರ್ಷಗಳ ವಯಸ್ಸಾಗಿದೆ. ಎಡೆಬಿಡದೆ 18 ವರ್ಷಗಳು ನಾನು ಶಾಸನ ಸಭಾ ಸದಸ್ಯನಾಗಿದ್ದೆ. ಈವತ್ತು ನಾನೊಬ್ಬ ಕೆ. ಪಿ. ಸಿ. ಸಿ. ಸದಸ್ಯನಾಗಿದ್ದೇನೆ. ‘ಕುರವರ್ ಮಹಾಸಭೆ’ಯ ಅಧ್ಯಕ್ಷನೂ ಆಗಿದ್ದೇನೆ.

ಮೂಲಭೂತ ಪರಿವರ್ತನೆ ಆಶಿಸಿದೆ

ಪತಿತರಲ್ಲಿ ಪತಿತರಾದ, ವ್ಯವಸಾಯ ಕೂಲಿಗಾರರ ವರ್ಗಕ್ಕೆ ಸೇರಿದವನಾದ ನಾನು, ಯಾಕೆ ಕಾಂಗ್ರೆಸ್ಸನ್ನು ಸೇರಿದೆ? ಕಾಂಗ್ರೆಸ್ಸಿನ ಪರಮ ಭಕ್ತರಲ್ಲಿ ಒಬ್ಬನಾಗಿ ಅದರ ಪಾದತಳದಲ್ಲಿ ಯಾಕೆ ಆತ್ಮಾರ್ಪಣೆ ಮಾಡಿದೆ? ಅನೇಕ ಗಟ್ಟಿಗರು ಹೊಸತಾಗಿ ಬಂದು ಸೇರಿದರೂ, ಅನೇಕ ಬಲು ಗಟ್ಟಿಗರು ಬಿಟ್ಟುಹೋದರೂ, ನಾನು ಕಾಂಗ್ರೆಸ್ಸಿನಲ್ಲೇ ಯಾಕೆ ಸ್ಥಿರವಾಗಿ ನಿಂತೆ? ಅದಕ್ಕೆ ಒಂದೇ ಒಂದು ಕಾರಣ: ಮೂಲಭೂತವಾದ ಕೆಲವು ಬದಲಾವಣೆಗಳನ್ನು ನನ್ನ ವರ್ಗದ ಸಲುವಾಗಿ—ಜಮೀನ್ದಾರ, ಪುಢಾರಿ, ಪುರೋಹಿತ, ಸಾಹಿತ್ಯವೀರ, ಕಲಾಕೋವಿದ, ರಾಜ, ಮಂತ್ರಿ, ಬಂಡವಾಳಗಾರ ಮೊದಲಾದವರೆಲ್ಲರೂ ಯಾವ ವರ್ಗದ ಎದೆಯನ್ನು ಮೆಟ್ಟಿಕೊಂಡು ಮೇಲಕ್ಕೆ ಏರಿ ಏರಿ ಹೋಗುತ್ತಿದ್ದಾರೋ ಆ ವರ್ಗದ ಸಲುವಾಗಿ—ಕಾಂಗ್ರೆಸ್ಸಿನ ಮೂಲಕ ಸಾಧಿಸಬಹುದು ಎಂದು ನಾನು ಆಶಿಸಿದ್ದೆ.

ಆದರೆ ನಡೆದುದೇನು? ಒಂಭತ್ತು ವರುಷಗಳಷ್ಟು ಕಾಲ ಇಲ್ಲಿ (ಕೇರಳದಲ್ಲಿ) ಕಾಂಗ್ರೆಸ್ಸು ರಾಜ್ಯಭಾರ ನಡೆಸಿತು. ಆದರೆ ನನ್ನ ಮಟ್ಟಿಗೆ ಏನಾಯಿತು? ಎಲ್ಲರಿಗೂ ಗೊತ್ತಿರುವಂತೆ, ಕಾಂಗ್ರೆಸ್ ವೀರರಿಗೂ (ಮಾಜಿ) ಮಂತ್ರಿ ಮಹಾಶಯರಿಗೂ ಅದು ಗೊತ್ತೇ ಇದೆ—ಏನೂ ಮಾಡಿರುವುದಿಲ್ಲ ಎಂದು! ಅಂತ್ಯವಿಲ್ಲದ ಕಾಲದ ವರೆಗೆ ಈ ತರದ ಪ್ರಾಣಿಗಳು ರಾಜ್ಯ ಆಳಿದರೆ, ಕೂಲಿಗಾರ ವರ್ಗಕ್ಕೆ — ಖಂಡಿತವಾಗಿಯೂ ವ್ಯವಸಾಯ ಕೂಲಿಗಾರರಿಗೆ—ಒಣಶುಂಠಿ ಕೂಡ ಸಿಗಲಾರದು ಎಂದು ಎಲ್ಲರಿಗೂ ಗೊತ್ತಿರುವಂತೆ ಅವರಿಗೂ ಗೊತ್ತೇ ಇದೆ. ಒಂದೇ ಒಂದು ಉದಾಹರಣೆ ಕೊಡುತ್ತೇನೆ: ವ್ಯವಸಾಯ ಕೂಲಿಗಾರರಲ್ಲಿ ನೂರಕ್ಕೆ ನೂರು ಮಂದಿ ಕೂಡ ಸ್ವಂತ ಜಮೀನು ಇಲ್ಲದವರು. ಆದರೂ ಅವರು ಎಲ್ಲಿಯಾದರೂ ಗೂಡು ಕಟ್ಟಿ ಬದುಕಬೇಕಲ್ಲ? ಹಾಗೆ ಅವರು ಮಾಡುವುದು ಸರಕಾರದ ಜಮೀನುಗಳಲ್ಲಿ. ಅದರ ಮೇಲೆ ಸರಕಾರದೊಂದು ಕಂದಾಯವಿದೆ. ಅದಕ್ಕೆ ‘ನಿರೋಧಕ ಕಂದಾಯ’ ಎಂದು ಹೆಸರು.

ಯಾಕೆ?

- **ಕೇರಳ ಕಾಂಗ್ರೆಸ್ ನಾಯಕತ್ವ ಹಂದಿಯ ಮುಸುಡಾಗಿದೆ. ಅದನ್ನು ಹಿಡಿದು ತಿಕ್ಕಿದರೂ ಅದು ಸವೆಯದು, ಅದು ಹೇಸಿಗೆಯನ್ನು ಹುಡುಕುತ್ತ ಕೆಳಗೇ ಹೋಗುವುದು.**
- **ವಾತಹಿಡಿದಿರುವ ಮುಸ್ಲಿಂ ಲೀಗ್‌ನ ಕಾಲು ತಿಕ್ಕಲು ಕೈನೀಡಿರುತ್ತದೆ.**
- **ಕಾಂಗ್ರೆಸ್ಸೆಂದರೆ ಕೆಥೋಲಿಕ್ ಮಠವಾಗಿದೆ. ಕೆಥೋಲಿಕ್ ಮಠಾಧಿಪತ್ಯದ ರಕ್ಷಣೆಯೆ ಈಗಿನ ಹೋರಾಟಗಳ ಹಿನ್ನೆಲೆ.**

ಈ ನಿರೋಧಕ ಕಂದಾಯವನ್ನು ಹೆಬ್ಬಾವಿನಂತೆ ಜನರ ಮೇಲೆ ಹರಿಯ ಬಿಡುವುದು ರೂಢಿ. ಅದರೊಂದಿಗೆ ಗ್ರಾಮಾಧಿಕಾರಿಯೆಂಬ ಬ್ರಹ್ಮರಾಕ್ಷಸ ಬಾಯಿತೆರೆದುಕೊಂಡು ವ್ಯವಸಾಯ ಕೂಲಿಗಾರರನ್ನು ನುಂಗಲು ನುಗ್ಗುವುದು ಕ್ರಮ. ಇದರಲ್ಲಿ ರಿಯಾಯಿತಿ ಮಾಡಬೇಕೆಂದು ಅನೇಕ ನಿವೇದನೆಗಳನ್ನು ಕಾಂಗ್ರೆಸ್ ಮಂತ್ರಿಗಳಿಗೆ ಕೊಟ್ಟಿದ್ದೆವು. ಆದರೆ ಫಲವೇನು?

ಸ್ವಲ್ಪ ಮನಸ್ಸಿರುತ್ತಿದ್ದರೆ....

ಸಂಪೂರ್ಣ ಆತ್ಮಾತ್ಯಾಗ ಬೇಕೆಂದಿಲ್ಲ, ಬರೇ ಸ್ವಲ್ಪ ಮನಸ್ಸಿರುತ್ತಿದ್ದರೂ ಕೂಡ ಅವರು ಈ ಬೇಡಿಕೆಯನ್ನು ನೀಡಬಹುದಾಗಿತ್ತು. ಅವರನ್ನು ಸುಮ್ಮನೆ ದೂರುವುದು ಯಾಕೆ? ಅದಕ್ಕೆ ಅವರಿಗೆ ಬಿಡುವೇ ಇರಲಿಲ್ಲ, ಪಾಪ! ಮಂತ್ರಿ ಸಿಂಹಾಸನದಲ್ಲಿ ಕುಳಿತಾದ ಮೇಲೆ, ಅದರಿಂದ ಇಳಿಯದಂತೆ ನೋಡಿಕೊಳ್ಳಲು ಅವರು ಏನೆಲ್ಲಾ ಮಾಡಬೇಕಾಗಿದೆ? ಬೆನ್ನಹಿಂದೆ ತಿವಿಯುವುದು, ಗುಂಪುಗಳನ್ನು ಕಟ್ಟುವುದು, ಇತ್ಯಾದಿ ಕೆಲಸಗಳನ್ನು ಮಾಡಲು ಬೇರೆ ಯಾರಿದ್ದಾರೆ? ಕಾಂಗ್ರೆಸ್ಸಿಗೆ—ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಖಂಡಿತವಾಗಿಯೂ—ಒಂದು ನಿರ್ಧಾರವಿದೆ: ಜನತೆಯ ಕ್ಷೇಮಕ್ಕೆ ಏನು ಮಾಡಬೇಕೋ ಅದನ್ನು ಮಾಡದಿರುವುದು. ಸ್ವಂತದ ಹೊಂಡ ತೋಡಲು ಏನೆಲ್ಲಾ ಮಾಡಬೇಕೋ ಅದನ್ನೆಲ್ಲ ಮಾಡುವುದು. ಸ್ವಲ್ಪ ಹೇಳುವುದಾದರೆ, ಇಂಥ ಕೃತ್ಯಗಳ ಫಲವಾಗಿ ಅವರು ಸೃಷ್ಟಿಸಿದ್ದ ಸ್ಮಶಾನಕ್ಕೆ ಅವರ ಅಧಿಕಾರದ ಅಂತಿಮ ಯಾತ್ರೆಯೇ ನಡೆಯಿತು!

ಹಂದಿ ಮುಸುಡು

ಅಧಿಕಾರದ ಪರೆ ಅಲ್ಪಮತಿಗಳ ಕಣ್ಣಿನೊಳಗೆ ಬಹಳ ಬೇಗನೆ ಬೆಳೆಯುತ್ತದೆ. ಆದರೆ ಅಧಿಕಾರ ಪದವಿಯಿಂದ ಉರುಳಿ ಮನುಷ್ಯ ಲೋಕಕ್ಕೆ ತಿರುಗಿ ಬಿದ್ದಾಗ ಅವರೂ ಬಹಳ ಬೇಗನೆ ಒಳ್ಳೆಯವರಾಗುವರು ಎಂದು ನಾನು ನಿರೀಕ್ಷಿಸಿದ್ದೆ. ಆದುದರಿಂದ ನಾನು ಮತ್ತೂ ಕಾಂಗ್ರೆಸ್ಸಿನಲ್ಲಿ ವಿಶ್ವಾಸ ಇಟ್ಟುಕೊಂಡಿದ್ದೆ. ಆದರೆ ಕೇರಳದ ಕಾಂಗ್ರೆಸ್ ನೇತೃತ್ವವು ಒಂದು ಹಂದಿ ಮುಸುಡಾಗಿದೆ. ಅದನ್ನು ಹಿಡಿದು ತಿಕ್ಕಿದರೂ ಸವೆಯಲಾರದು. ಅದು ಯಾವಾಗಲೂ (ಹೇಸಿಗೆಯನ್ನೇ ಹುಡುಕುತ್ತ) ಕೆಳಗೆ ಕೆಳಗೆ ಹೋಗುತ್ತಿರುವುದು. ಘೀಳಿಡುವುದಲ್ಲದೆ ಬೇರೆ ಏನು ಮಾಡುವುದಕ್ಕೂ ಅದರಿಂದ ಆಗಲಾರದು.

“ಕಾಂಗ್ರೆಸಿಗರೇ! ನಿಮ್ಮಿಂದ ನಮ್ಮ ಗತಿ ಕೆಟ್ಟಿತು. ನೀವು ಕುಳಿತಿದ್ದ ಕುರ್ಚಿಯಲ್ಲಿ ಒಮ್ಮೆ ಕಮ್ಯೂನಿಸ್ಟರನ್ನು ಕುಳ್ಳಿರಿಸಿ ನೋಡಿಬಿಡುತ್ತೇವೆ” ಎಂದು ಕಳೆದ ಚುನಾವಣೆಯಲ್ಲಿ ಕೇರಳ ಹೇಳಿತು. ಹಾಗೆ ಕಮ್ಯೂನಿಸ್ಟರು—ಯಾವಾಗಲೂ ಮುಗಿಯದಷ್ಟು ಮಹಾ ವಿಷವನ್ನು ತಲೆಯಲ್ಲೂ, ವಜ್ರದಂಥ ಕಠಿಣ ಕೋರೆ ದಾಡೆಗಳನ್ನು ಬಾಯಲ್ಲೂ, ಎಲ್ಲವನ್ನೂ ಅಡಗಿಸಿಕೊಳ್ಳಬಲ್ಲ ಸಾಗರವನ್ನೇ ಹೊಟ್ಟೆಯೊಳಗೂ ಇಟ್ಟುಕೊಂಡಿರುವ ಘೋರ ಬೇತಾಳರು ಇವರೆಂದು ಯಾರ ಬಗೆಗೆ ನಾವು ಜನಕೆ ಬೋಧಿಸುತ್ತಿದ್ದೇವೋ ಆ ಕಮ್ಯೂನಿಸ್ಟರು—ಮಂತ್ರಿ ಮಂದಿರವನ್ನು ಪ್ರವೇಶಿಸಿದರು. ಅನಂತರ ಆ ದರಿದ್ರ ಘೋರ ಭೇತಾಳರು ಏನು ಮಾಡಿದರು?

“ಭೇತಾಳರು” ಮಾಡಿದ ಕರ್ತವ್ಯಗಳು

ಪೋಲೀಸು ಪಡೆಯನ್ನು ಗೌರವದ ಸ್ಥಾನಕ್ಕೆ ಏರಿಸಿತು. ಗುತ್ತಿಗೆ ಗೇಣಿ ಹಾಗೂ ಗೇಣಿ ಬಾಕಿ ವಸೂಲಿಯ ಪಟ್ಟಿಗೆ ರೈತರಿಗೆ ರಿಯಾಯಿತಿಗಳನ್ನು ಕೊಡಿಸಿತು. ಆ ಜನರ ಕಷ್ಟಕಾರ್ಪಣ್ಯಗಳನ್ನು ಸ್ವಲ್ಪ ನಿವಾರಿಸಿತು. ವಾಸವಾಗಿರುವ ಮತ್ತು ಉಳುವ ಮಣ್ಣಿನಿಂದ ಎಲ್ಲಿಗೂ ಎದ್ದುಹೋಗಬೇಕಾದದ್ದಿಲ್ಲ ಎಂದು ಶಾಸನ ಮಾಡಿದರು. ಅಂಥ ಜನರು ಎಷ್ಟೋ ಕಾಲದಿಂದ ಸುರಿಸುತ್ತಿದ್ದ ಕಣ್ಣೀರನ್ನು ಮೆಲ್ಲಗೆ ಒರಸಿ ಕಳೆದರು. ವ್ಯಾವಸಾಯಿಕ ಸಂಬಂಧ ಮಸೂದೆ, ಸಾಲ ಬಾಧೆ ನಿವಾರಣೆ ಮಸೂದೆ, ವಿದ್ಯಾಭ್ಯಾಸ ಮಸೂದೆ ಮುಂತಾದುವುಗಳನ್ನು ಬೇಗ ಬೇಗ ಜ್ಯಾರಿಗೆ ತರಲು ಕ್ರಮ ವಹಿಸಿದರು. ವ್ಯವಸಾಯಗಾರರ, ಗೇಣಿದಾರರ, ಅಧ್ಯಾಪಕರೇ ಮೊದಲಾದವರ ಹೆಗಲುಗಳ ಮೇಲಿಂದ ಶೋಷಣೆಯ ನೊಗವನ್ನು ತೆಗೆದುಹಾಕಲು ತೀರ್ಮಾನಿಸಿದರು. ಬರೇ ಹರಕು ಮುರುಕು ಗುಡಿಸಲುಗಳಲ್ಲಿ ವಾಸವಾಗಿರುವ ಹರಿಜನರ ಸಲುವಾಗಿ ಗಟ್ಟಿಮುಟ್ಟಾದ ಒಳ್ಳೆಯ ಮನೆಗಳನ್ನು ಕಟ್ಟಿಸುವ ಕೆಲಸ ಆರಂಭಿಸಿದರು. ಹೀಗೆ ಹಲವು ತರದ ದೇಶದ್ರೋಹಿ ಕಾರ್ಯಗಳನ್ನು ಈ ಕಮ್ಯೂನಿಸ್ಟ್ ಬೇತಾಳರು ನಡೆಸತೊಡಗಿದ್ದಾರೆ! ಈ ಭಯಂಕರ ಜಂತುಗಳು ಮಂತ್ರಿಸಿಂಹಾಸನದಲ್ಲಿ ಕೂತು ಇನ್ನೂ ಹೆಚ್ಚು ದಿನಗಳು ಆಗಿರುವುದಿಲ್ಲ. ಈಗಾಗಲೇ ಇಷ್ಟೆಲ್ಲಾ ಅನಾಹುತಗಳನ್ನು ಮಾಡಿರುವ ಇವರು ಇನ್ನೂ ಅಲ್ಲಿ ಉಳಿದರೆ ರಾಜ್ಯವನ್ನು ಸರ್ವನಾಶ ಮಾಡದೆ ಬಿಡಲಾರರು!

ನೆಹರೂರವರ ಉಪದೇಶ

ಇದನ್ನೆಲ್ಲ ಸಹಿಸಲು ಇಲ್ಲಿನ ಕಾಂಗ್ರೆಸ್ ನೇತೃತ್ವಕ್ಕೆ ಸಾಧ್ಯವಿಲ್ಲ.

“ಸ್ನೇಹಿತರೇ! ನೀವು ಕೊಲೆರಾ ಅಥವಾ ಮೈಲಿಗೆಗಾದರೂ ಗಂಟು ಬೀಳಬಹುದು. ಆದರೆ ಜಾತೀಯ ಸಂಘಟನೆಗಳ ಅಥವ ಮತೀಯ ಸಂಘಟನೆಗಳ ಹತ್ತಿರ ಹೋಗಬೇಡಿರಿ”—ಇದು ಕಾಂಗ್ರೆಸಿನ ಆತ್ಮವೂ ಭಾರತದ ಪ್ರಧಾನಿಯೂ ಆಗಿರುವ ಪಂಡಿತ್‌ಜೀ ಇಲ್ಲಿನ ಕಾಂಗ್ರೆಸ್ಸಿನವರಿಗೆ ಕೊಟ್ಟಿರುವ ಉಪದೇಶ ಮತ್ತು ಆಜ್ಞೆ. ಪಂಡಿತ್‌ಜೀ ಈ ಮಾತು ಹೇಳಿ ಬಾಯಿ ಮುಚ್ಚಿಲ್ಲ, ಅದಕ್ಕಿಂತ ಮೊದಲೇ ಇಲ್ಲಿನ ಕಾಂಗ್ರೆಸ್ ನೇತೃತ್ವ ತನ್ನ ಉದ್ದವಾದ ನಾಲಗೆಯನ್ನು ಮುಸ್ಲಿಂ ಲೀಗ್‌ನ ಪಾಯಸ ತೊಟ್ಟೆಕ್ಕುವಲ್ಲಿಗೆ ಚಾಚಿ ಬಿಟ್ಟಿರುತ್ತದೆ. ವಾತ ಹಿಡಿದಿರುವ ಮುಸ್ಲಿಂ ಲೀಗಿನ ಕಾಲು ತಿಕ್ಕಲು ಕೈ ನೀಡಿರುತ್ತದೆ.

ನಿರಾಶೆಯ ಗಲಭೆ

ಇಲ್ಲಿನ ಕಾಂಗ್ರೆಸ್ಸೆಂದರೆ, ಕೆಥೋಲಿಕ್ ಮಠ ಎನ್ನುವ ಸ್ಥಿತಿ ಉಂಟಾಗಿದೆ. ಅದರ

(೧೧ನೇ ಪುಟ ನೋಡಿ)

ಪ್ರಧಾನಿ ನೆಹ್ರೂ ಇದಕ್ಕೆ ಏನು ಹೇಳುತ್ತಾರೆ?

"ಹಾಯ್ !"

ಎಂದ ಮಲ್ಲೇಶಿ. ಮುಳ್ಳುಗಂಟಿಯೊಂದು ಕಾಲಿಗೆ ತೊಡಕಿ ಚುಚ್ಚಿದಾಗ. ರಕ್ತ ಚಿಲ್ ಎಂದು ಚಿಮ್ಮಿತ್ತು—ಮುಳ್ಳು ತಾಕಿದಲ್ಲಿ.

ತಾನು ದಾರಿ ನಡೆಯುತ್ತಿರುವುದೂ, ದಾರಿಯಲ್ಲಿ ಮುಳ್ಳು—ಕಲ್ಲುಗಳಿವುದೂ; ದಾರಿ ಸದಾಕಾಲ ಸುಗಮವೇ ಆಗಿರುವುದಿಲ್ಲವೆಂಬುದೂ ಆಗಲೇ ಗೊತ್ತಾಯಿತು ಆತನಿಗೆ.

"ದಾರಿ ಸದಾಕಾಲ ಸುಗಮವೇ ಆಗಿರುತ್ತದೆ" ಎಂದೂ ಯಾರೂ ಹೇಳಿರಲಿಲ್ಲವಲ್ಲ !

"ಇವಳವ್ವ್ಮಾ ಕನ" ಎಂದು ಆತನ ಬಾಯಿ ತೊದಲಿತು. ಅದೂ ಅವನಿಗರಿಯದಂತೆಯೇ !

ಹೌದು ಅವನಿಗರಿವಿರಲಿಲ್ಲ. ತಾನು ನಡೆಯುತ್ತಿರುವ ಪ್ರಜ್ಞೆ ಅವನಿಗಿರಲಿಲ್ಲ. ತನ್ನ ಜೀವನವೇ ಹಠಾತ್ತಾಗಿ ಎಲ್ಲಿಯೋ ನಿಂತಂತಾಗಿತ್ತು ಅವನಿಗೆ. ಹೀಗಿದ್ದಾಗ ನಡೆಯುವುದೆಲ್ಲಿ ಬಂತು ? ಹಳ್ಳಿ ಬಹಳ ಹಿಂದೆ ಉಳಿದಿತ್ತು. ಬರಿಗೈಯಿಂದ, ಬರಿಗಾಲಿನಿಂದ ತಾನು ಹೊರಟಿದ್ದ. ಎಲ್ಲಿಗೆ? ತನಗೇ ಗೊತ್ತಿಲ್ಲ. ಖಚಿತವಾದ ಗುರಿಯಿರಲೇ ಇಲ್ಲವಲ್ಲ. ಇದ್ದುದರ ಮೇಲೇ ಗುದ್ದು ಬಿದ್ದಿತ್ತು. ಪ್ರತಿಭಟನೆಗೆ ಶಕ್ತಿ ಇರಲಿಲ್ಲ. ತನ್ನ ಆಯುಧವೂ ಕಳೆದು ಹೋಗಿತ್ತು........

ಈ ನೆನಪೂ ಮಲ್ಲೇಶಿಗೆ ಬಹು ಪ್ರಯಾಸದಿಂದಲೇ ಮೆದುಳಿಗೆ ತಟ್ಟಹೋಗುತ್ತಿತ್ತು. ತಲೆಯ ರುಮಾಲು ಯಾವಾಗಲೋ ಹರಿದು ಹಾಳಾಗಿ ಹೋಗಿತ್ತು. ಕೂದಲು ಬೆಳೆದಿತ್ತು. ಷರ್ಟು ಛಿದ್ರಛಿದ್ರವಾಗಿತ್ತು. ದೋತರು ಮೊಳಕಾಲ ವರೆಗೆ ಮಾತ್ರ ಇತ್ತು. ಕಣ್ಣಲ್ಲಿಯ ರಕ್ತ ಬತ್ತಿತ್ತು. ಬರೀ ಸಿಟ್ಟು ಬರುತ್ತಿತ್ತು, ಕೋಪ ಕೆರಳುತ್ತಿತ್ತು. "ಅವ್ವ್ಮಾಕನ...." ಎನ್ನುತ್ತಿತ್ತು ಬಾಯಿ....

"ಹಾ...." ಎಂದು ಸುಧಾರಿಸಿಕೊಂಡು ಮುಂದೆ ಹೆಜ್ಜೆ ಹಾಕಿದ್ದ. ಯಾರೋ "ಹುಚ್ಚ" ಎಂದು ಕೂಗಿದ್ದರು. ಉಗ್ರಮುಖದಿಂದ ಅವರನ್ನು ನಿಟ್ಟಿಸಿ ಹೆಜ್ಜೆ ಚೆಲ್ಲಿದ್ದ.

"ಈ ಮುಳ್ಳುಗಂಟಿಗಳನ್ನೆಲ್ಲ ಕೊರೆದು ಸುಮುಮಾಡಿ ಬಿಡುತ್ತಿದ್ದೆ. ಎಂಥ ಭೂಮಿ, ಕಾಡು ಹಬ್ಬಿಕೊಂಡಿದೆ. ಇದನ್ನೆಲ್ಲ ಸವರಿ ಬಿಡುತ್ತಿದ್ದೆ, ಸವರಿಬಿಡಬೇಕು........"

ಚಟ್.

ಕಲ್ಲಿಗೆ ಬೆರಳುತಾಕಿ ಚಟ್ ಎಂದಿತ್ತು. ರಕ್ತ ಬಳಬಳನೆ ಬಂದಿತ್ತು. ಅನ್ಯಮನಸ್ಕನಾಗಿದ್ದ ಮಲ್ಲೇಶಿ ಕಣ್ಣು ಬಿಟ್ಟ. ಎದುರಿಗೇ ದೊಡ್ಡದೊಂದು ಕಪ್ಪುಗಲ್ಲಿನ ಬಂಡೆ ನಿಂತಿತ್ತು........

ಅದು ತನ್ನ ದಾರಿಗೆ ಮಾತ್ರ ಅಡ್ಡವಾಗಿ ನಿಂತಂತೆ ಆತನಿಗೆ ಕಾಣಲಿಲ್ಲ. ಅಂಥ ಭೀಮಗಲ್ಲು ತನ್ನ ಜೀವನದಲ್ಲೇ ಏಕಾಏಕಿಯಾಗಿ ಎದ್ದು ನಿಂತಿತ್ತು.

ಕಾಡನ್ನು ಸವರಿ ಪ್ರಯೋಜನವಿಲ್ಲ, ಈ ಕಲ್ಲನ್ನೂ ಸೀಳಬೇಕು. ಅದು ತನ್ನಿಂದಾಗದು........

ತನ್ನ ಕೈ ಬರಿದು. ತನ್ನ ಪ್ರೀತಿಯ ವಸ್ತುವೊಂದು ತನ್ನ ಕೈಯಿಂದ ಕಳಚಿ ಹೋಗಿತ್ತು, ಕಳೆದುಹೋಗಿತ್ತು, ಕಸಿಯಲ್ಪಟ್ಟಿತ್ತು. ಆ ಮೇಲೆ ಕಣ್ಣುಗಳು ಚಂಚಲವಾಗಿ ಹುಡುಕಲೆತ್ನಿಸಿದವು. ಕಾಲು ಮುಂದೆ ನಡಿದಿದ್ದುವು.

ಕಣ್ಣುಗಳಲ್ಲಿಯ ಚಂಚಲತೆ ಕಡಮೆಯಾಗಿತ್ತು. ದೃಷ್ಟಿ ತೀಕ್ಷ್ಣವಾಗುತ್ತಿತ್ತು. ಸಂಶೋಧಕನ ಕಣ್ಣುಗಳಂತೆ—ಅವು ಕಾಣುತ್ತಿದ್ದವು. ಆಕಾಶವನ್ನು ಭೇದಿಸಿ, ಭೂಗರ್ಭವನ್ನು ಸೀಳಿ ನೋಡುತ್ತಿದ್ದವವು.

"ಇಲ್ಲಿ ಇದೆಯೆ ? ನನ್ನ ಕೈ ಬಿಟ್ಟುದುದು, ನಾನು ಕಳೆದು ಕೊಂಡುದು, ನನ್ನಿಂದ ಕಸಿಯಲ್ಪಟ್ಟುದುದು, ಇಲ್ಲಿ ಇದೆಯೆ?"

ಕಣ್ಣೊಳಗಿನಿಂದ ಬಳಬಳನೆ ನೀರು ಇಳಿದುವು. ಹೊಟ್ಟೆ ತೊಳೆಸುವಂತೆ ವಿಪರೀತ ಸಂಕಟನಾಯಿತು. ಮಲ್ಲೇಶಿ ಕುಳಿತಲ್ಲೇ ಅದೇ ಕಲ್ಲ ಮೇಲೆ ಹೊರಳಿ ಮಲಗಿದ. ಕಣ್ಣು ಮುಚ್ಚಿದ.

"ಏನೋ ಯಜಮಾನಾ ?" ಹಿಂಗ್ಯಾಕ ಬಿದ್ದೀದಿಯೊ ?"

ಕನಿಕರದ ಧ್ವನಿ ಕಿವಿಗಳಿಗೆ ತಾಕಿತು. ಮೃದುವಾಗಿರದಿದ್ದರೂ ಅಭಯ ಹೇಳುವಂತಹ ಕೈ ಬೆನ್ನ ಮೇಲೆ ಆಡಿತು.

"ಛೀ, ಏಳು ಏಳೋ. ಇಲ್ಲೇನಾದರೂ ಇದೆಯೋ ಏನೋ. ಹೊಡ್ಡ ಬಿಡ್ತೀನಿ ಒಡ್ಡೀ ಮಕ್ಕನಾ. ನನ್ನ ಬರಿಗೈ ಮಾಡಿದಾರೆ. ನನ್ನ ಕೈಯಿಂದ ಕಸಿದು ಕೊಂಡಿದಾರೆ. ಸಿಕ್ಕಗಿಕ್ಕರೆ ಇದರ್ಲೇನೆ ಜಬ್ಬಿ ಬಿಡ್ತೀನಿ."

ಮಲ್ಲೇಶಿ ಹೌಹಾರಿ ಎದ್ದ. ಯಾರೋ ಒಬ್ಬರು ಎದುರಿಗೆ ನಿಂತಿದ್ದರು. ಆಗಂತುಕನ ತಲೆ ಸಮನಾಗಿಊವಂತೆ ಮಲ್ಲೇಶಿಗೆ ನಿಸಲಿಲ್ಲ. ಅಷ್ಟು ತಿಳುವಳಿಕೆ, ಅಲ್ಲ ಅಷ್ಟರ ಮಟ್ಟಿಗೆ ತನ್ನ ತಲೆ ಸಮವಾಗಿದೆಯಲ್ಲ ಎಂದು ಗೊತ್ತಾದಾಗ ಅವನಿಗೇ ವಿಸ್ಮಯವಾಯಿತು.

"ಯಾರನ್ನೋ ನೀನು ಜಬ್ಬಿ ಬಿಡೋದು?" ಮಲ್ಲೇಶಿ ಕೇಳಬೇಕೆಂದ. ನಾಲಿಗೆ ಏಳಲಿಲ್ಲ. ಕಣ್ಣುಮಾತ್ರ ಮಿಳಿಮಿಳಿ ನೋಡಿದವು.

ಇನ್ನೊಬ್ಬನ ಕಣ್ಣುಗಳೂ ಇವನನ್ನೇ ನೋಡಿದುವು. ಹಾಗೆ, ಅವನ ಹಾಗೆಯೆ........

ಅವನ ತಲೆಯೂ ಬರಿದು. ಷರ್ಟು ಹರಿದಿತ್ತು. ದೋತರು ಮೊಳಕಾಲ ವರೆಗೆ ಮಾತ್ರ ಇತ್ತು. ಬಾಹುಗಳು ಬಲಿಷ್ಠವಾಗಿದ್ದುವು. ಕೈತೋಳುಗಳಲ್ಲಿಯ ಸ್ನಾಯುಗಳು ಕಬ್ಬಿಣದ ಉಂಡೆಯಂತಿದ್ದುವು.

"ಬರಿಗೈಯವನನ್ನು ಕಂಡೇ ಈ ಬಂಡೆ ಎದುರಾಗಿದೆ" ಎಂದುಕೊಂಡ ಕಲ್ಲಪ್ಪ—ಆಗುಂತುಕ.

ದೊಡ್ಡದೊಂದು ಬಂಡೆ ಎದುರಾಗುವವರೆಗೂ ನಡೆದುಬಂದಿದ್ದ. ಅವನೇನು ಗುರಿಯಿಟ್ಟುಕೊಂಡು ಬಂದಿರಲಿಲ್ಲ. ಆದರೆ ಅದೇ ದಾರಿಯಲ್ಲಿ ಅಡ್ಡಗಟ್ಟಿತ್ತು ಅಷ್ಟೆ.

ಹೌದು, ಜೀವನ ಹಾಗೇ ಹಠಾತ್ತಾಗಿ ನಿಂತುಹೋಗಿತ್ತು. ಆಕಸ್ಮಾತ್ ಅವನ

....ರೈತ ಮಲ್ಲೇಶಿಗೆ ಕಲ್ಲು ಕುಟಿಗರ ಕಲ್ಲಣ್ಣ ಹೇಳಿದ: "ದಾರಿ ಕಾಣೋದಿಲ್ಲ ನಿಜ, ಬಂಡೆಗಲ್ಲು ತುಂಬಿವೆ, ಮುಳ್ಳುಗಂಟೆಗಳು ತುಂಬಿವೆ, ಬಂಡೆಗಳನ್ನು ಸೀಳಬೇಕು, ಮುಳ್ಳುಗಂಟಿಗಳನ್ನು ಸವರಬೇಕು, ಆ ಮೇಲೆ ಜೀವನ ವನ್ನಾರಂಭಿಸಬೇಕು...."

ಅದಕ್ಕಾಗಿ—

ಅವರು ಹುಡುಕುತ್ತಿದ್ದರು

ಜೀವನದಲ್ಲಿ ಬಂಡೆಗಲ್ಲು ಎದ್ದು ನಿಂತು ಅಡ್ಡಗಟ್ಟಿತ್ತು....

ಹಾಗಾದಾಗ ಕಲ್ಲಪ್ಪ ಭ್ರಮಿಷ್ಟನಂತಾಗಿದ್ದ. ತನ್ನ ಕೈಯಲ್ಲಿಯ ಆಯುಧ ಕಳಚಿ ಬಿದ್ದಿತ್ತು, ಕಳೆದುಹೋಗಿತ್ತು, ಕಸಿಯಲ್ಪಟ್ಟಿತ್ತು, ಕಣ್ಣುಗಳು ಚಂಚಲವಾಗಿ ಹುಡುಕಲೆತ್ನಿಸಿದವು ಕಾಲು ಮುಂದೆ ನಡೆದಿದ್ದವು....

ಬೇಸತ್ತಿದ್ದ ಕಲ್ಲಪ್ಪ ಬಂಡೆಗಲ್ಲಿನ ಬಳಿ ನಿಂತಿದ್ದ, ಕೂಡಲೆತ್ನಿಸಿದ್ದ....

"ಯಾವೂರವನೊ ಯಜಮಾನಾ ?" ಕೇಳಿದ ಕಲ್ಲಪ್ಪ. ಅದನ್ನೇ ತಾನೂ ಕೇಳದಂತೆ ಮಲ್ಲೇಶಿ ನೋಡಿದ.

"ಬಾ ಕುಂತ್ಕೋ" ಎಂದ ಮಲ್ಲೇಶಿ. 'ಎಂಥ ಆತ್ಮೀಯವಾದ ಹೃದಯ' ಎಂದಿತು ಕಲ್ಲಪ್ಪನ ಮನಸ್ಸು.

"ನೀನೆ ದುಃಖದಲ್ಲಿದ್ದಂತೀದಿಯಾ ಏನಾಗೈತೆ ನಿಂಗೆ ? ಹೇಳು ಯಜಮಾನ ? ಕಣ್ಣಲ್ಲಿ ನೀರೇಕೆ ?"

ಅಷ್ಟೇ ಆತ್ಮೀಯವಾಗಿ ಕಲ್ಲಪ್ಪ ಕೇಳಿದ—ಅಲ್ಲೇ ಕುಳ್ಳಿರುತ್ತ.

ಕಥೆಗಾರರು:

ವೆಂಕಟರಾಜ ಪಾನಸೆ

ಬಹುಕಾಲದ ವೇಲೆ ಸಂಧಿಸಿದ ಆತ್ಮೀಯರಂತೆ ಅವರಿಬ್ಬರೂ ಹತ್ತಿರಹತ್ತಿರವಾಗಿ ಕುಳಿತು ಮಾತನಾಡಿದರು.

"ಅದೊಂದು ದೊಡ್ಡ ಕಥಿ, ಕಲ್ಲಪ್ಪ ಬಾಳಿನ ಕಥಿ." ಮಲ್ಲೇಶಿ ಹೇಳಲಾರಂಭಿಸಿದ:

"....ಕಮತೆಗೇರ ಹಳ್ಳಿಗೆ ಬಂದಾಗ ಏನೇನೂ ಇರಲಿಲ್ಲ ಕಲ್ಲಪ್ಪ, ಏನೇನೂ ಇರಲಿಲ್ಲ ನನ್ನ ಹಂತ್ಯಾಕೆ. ಆಗ ಸಣ್ಣೋನು ಆಗಿದ್ದಿನಿ. ಹತ್ತಿರ ಇದ್ದುದು ಒಂದೇ ಒಂದು ಕುಡುಗೋಲು. ಕುಯ್ಲಿನ ಕಾಲಕ್ಕೆ ಕೂಲಿಯಾಗಿ ಬಂದು ಸೇರ್ಕೊಂಡೆ. ನಾವು ಬಡವ್ರು, ಕಷ್ಟಪಟ್ಟು ದುಡಿಯೋದು ನಮ್ಗೆ ಗೊತ್ತು. ನಾಲ್ಕು ಜನರ ವಿಶ್ವಾಸವಾಯಿತು. ಅದೇ ಊರಿನಲ್ಲೆ ನಿಂತೆ.

ಊರಿನ ಗ
ಭೂಮಿಯ
ಟ್ಕೊಂಡ್ರು,
ಮಾಡ್ಕೊಂ
ವರು ಸುರ್ರಿ
ಮಾಡ್ದೆ.
ಅದೃಷ್ಟವೊ.
ಮಲ್ಲೇಶಿ
ಷರ್ಟಿನ ಕೆ
"ಹೋಗ್
ಯ್ತು ಹೇಳ
ಸಮಾಧಾನ
ಹೇಳಿದ.
"ಹೆಣ್ಣ
ಇಲ್ಲೊ ನಂ

ಐತಿ ಎಂಬೊ
ಯಾರಿಗಿಲ್ಲದಿ
ತೂ ಐತಿ.
ಗಿಲ್ಲ, ದುಡು
ಎಂದುಕೊಂ
ಡುಗೀನ್ನ
ಹುಡೂಗೀ
ದ್ದಳೋ ಏನ
ಮಲ್ಲೇಶಿ
ತು ಕಡಿಕಡಿ
"ಹೋಗ
ಲ್ಲ ಹೇಳೊ
ಕುಡುಗೋ
ನುಷ್ಯರ ಹಾ
ವಾಯಿತೋ
ವಾದೆ...."
"ಏನು
ಕೊಂಚ ಬಿ
"ಬಡಿಸ
ಲ್ಲ. ಕಲ್ಲು

ನಾನೆ ನಿಜ ಸುಧಾರಕ!

ನಾನೆ ನಿಜ ಸುಧಾರಕ !
ಸಮಾಜದೊಂದು ತಾರಕ !!

* * *

ಹಚ್ಚಿಕೊಂಡು ಒಂದು ಲುಂಗಿ
ಊದಿ ಎಂಥದೇನೊ ಪುಂಗಿ
ಅಂದು ಮೆರೆದ ಬುದ್ಧ—ಗಾಂಧಿ
ಮಾಪುರುಷರೆ ? ಏನು ಎಂದಿ ?
ತಲೆಯ ಕೀಲು,
ಸಡಿಲು—ಗಿಡಿಲು ?........
ಧರೆಯ ಯಶವ ಕೋರಲೆಂದು
ಯಶೋಧರೆಯ ತೊರೆದು ಅಂದು
ಹೊರಟ
ಒರಟ,
ಬುದ್ಧ
ಪೆದ್ದ !
ನೀನಿದಕ್ಕೆ ಏನು ಎಂಬೆ ?
[ಮಾತಾಡಲೆ ಕಲ್ಲು—ಬೊಂಬೆ !]
ಏನು ? ಏನು ??

ಏನೆಂದಿ ???
ಜಗದ ಜನಕೆ ತಾಯಿ—ತಂದಿ
ಎಂದರೇನೇ ನಿಮ್ಮ ಗಾಂಧಿ ! ?
ಅಹ್‌ಹಹಾ !
ಏನು ಮಹಾ ?
ಜಗದಿ ಜನಿಸಿದವರಿಗಾದ—
ರೇನಾಯಿತು ಹಿತ—ಗಾಂಧಿ ?
ತನಗೆ ಜನಿಸಿದವರಿಗಾತ—
ನಾದನೇನು ಪಿತ—ಗಾಂಧಿ !
ಇನ್ನಾದರು
ಬೊಬ್ಬಿಡದಿರು.
ಸಾಕು ನಿನ್ನ ಗುಣಕಥನ
ಆತ್ಮಸುಖದ ಅಪಶಕುನ !
ನಾನೆ ನಿಜ ಸುಧಾರಕ !
ಸಮಾಜದೊಂದು ತಾರಕ !!

* * *

ಮನೆಗೆ ಶುಭದ ಸುಖವ ಕೋರಿ
ಜನದ ಸಿರಿಯನೆಲ್ಲ ಸೂರಿ

ಮುನ್ನಡೆಯುವ ಮಹಾಬಂಟ
ಮನೆಯ ಜನರ ನಿಜದ ನೆಂಟ
ಯಾರು ಗೊತ್ತೆ ?—
ಎಲೆಲೆ ತೊತ್ತೆ ?........
ನಾನೆ ಸ್ವತ್ವ—ಸಾಧಕ !
[ಆದರೂನು ನಾಯಕ !]
'ಮನೆಯ ಗೆದ್ದು ಮಾರುಗೆದೆ'
ಎಂದಿಲ್ಲವೆ ಹಳೆಯ ಗಾದೆ ?
ಅದನು ನಂಬಿಕೊಂಡೆ ಇಂದು
ಮನೆಯ ಸುಖವೆ ಮೊದಲು ಎಂದು
ನಡೆಯಿಸಿರುವೆ ಬಾಳುವೆ !
ಇದಕೆ ಏನು ಹೇಳುವೆ ?.........
'ಜನತೆಯ ಸುಖದೇನು ಗತಿ ?'—
ಎಂದೆಂಬೆಯಾ ಬೃಹಸ್ಪತಿ ?
ಅದುವು ನಾನು ಮಾಡದಿಲ್ಲ !
[ಆದರೆನಗೆ ಮನೆಯೆ ಎಲ್ಲ !]
ನನ್ನ ಕೈಯ ಬರೆಹಗಳಲಿ
ನನ್ನ ಬಾಯ ಬರೆಹಗಳಲಿ

ಸಾಧ್ಯವಿದ್ದು ದೆ
ಜನತೆಗಾಗಿ ಬ
ಏ....ನೊ....
ಮನೆವಾಳ್ತಿಗೆ
ನನ್ನ ಈ ಬಾ
ನಿನಗೆ ತಾನೆ
ದೇಕೆ ಗೊತ್ತೆ
ಮನುಜ—ಕ
ನನ್ನ ಮಹಿ
ನಿನ್ನ ತಲೆಯ
ಧರೆಯೊಳಿಂದ
ಮೆರೆಯಲೆಂದ
ಆತ್ಮಸುಖದ
ತಾನಾಗುತ
ಇನ್ನಾದರು
ನನ್ನೆದುರಲಿ
ನಾನೆ ನಿಜಸು
ಸಮಾಜದೊ

ಕವಿ: ಎಂ. ಅಕ

ನೀವೇನು ಹೇಳುತ್ತೀರಿ

ಬೆಂಗಳೂರಿನಲ್ಲಿ ಪೀಯಸ್‌ಪೀಯವರು ಕೊಚ್ಚಿಕೊಂಡಿರುವ ಪ್ರತಾಪದ ಬಗ್ಗೆ ನಮ್ಮ 'ಚೌಚೌವಾಲಾ' ಇದೇ ಸಂಚಿಕೆಯಲ್ಲೆಲ್ಲೋ ಸಾಕಷ್ಟು ಕುರುಕಿದ್ದಾರೆ. ಪಿ. ಎಸ್. ಪಿ.ಯ ಇನ್ನೊಂದು ಮುಖದ ಮೇಲೆ ಇಲ್ಲಿ ಬೆಳಕು ಬೀರುತ್ತಿದ್ದೇವೆ.

ಕಳೆದ ವಾರ ಇದೇ ಕಾಲಂನಲ್ಲಿ ಮೊದಲ 'ಐಟೆಂ' ಆಗಿ ಎತ್ತಿಕೊಂಡಿದ್ದ ವಿಷಯಕ್ಕೆ ಸಮರ್ಥನೆ ನೀಡಲು ನಿಮಗೊಂದು ಸುದ್ದಿ ಮತ್ತೆ ಇಲ್ಲಿದೆ. ಅರಬ್ ರಾಷ್ಟ್ರಗಳಲ್ಲಿ ನಡೆದ ದುರಾಕ್ರಮಣದ ಬಗ್ಗೆ ಹಿಂದೂ ಮಹಾ ಸಭೆಯವರೂ, ಪಿ.ಎಸ್. ಪಿ.ಯವರೂ "ಏಕಶಯನ"ದ ವೈಚಿತ್ರ್ಯವನ್ನು ತೋರಿಸಿದ್ದರೆಂದು ಹೇಳಿದ್ದೆ. ದ್ರೋಹಿಗಳು ದೇಶದಲ್ಲಿ ಎಲ್ಲಿದ್ದರೂ ತಮ್ಮ ಪತ್ತೆಯನ್ನು ತಾವೇ ನೀಡುತ್ತಾರೆ ನೋಡಿ.

"ಲೋಕಸೇವಕ" ಬಂಗಾಲದ ಪಿ. ಎಸ್ ಪಿ. ದಿನಪತ್ರಿಕೆ. ಅಮೇರಿಕೆಯು ತನ್ನ ಸೈನ್ಯದ ಬಿಡಾರವನ್ನು ಲೆಬನಾನ್‌ನಲ್ಲಿ ಬಿಟ್ಟ ಬಳಿಕ ಈ ಪತ್ರಿಕೆ ಸಂಪಾದಕೀಯವನ್ನು ಒಂದಿಷ್ಟೂ ನಾಚಿಗೆಯಿಲ್ಲದೆ ಬರೆಯುತ್ತ "ಅರಸೊತ್ತಿಗೆಯ ಆಡಳಿತದಲ್ಲಿ ಇರಾಕ್ ಅತ್ಯಂತ ಸಮೃದ್ಧವಾದ ನಾಡಾಯಿತು. ಈ ಸಮೃದ್ಧಿಯ ಮುಖ್ಯ ಕಾರಣ ಬ್ರಿಟಾನಿನ ತೈಲ ವಣಿಜರು ಕೊಡುತ್ತಿದ್ದ 'ರಾಯಲ್ಟಿ'ಯಿಂದ—ಹಣದಿಂದ !"

ಲಂಡನಿನ 'ಟೈಮ್ಸ್' ಪತ್ರಿಕೆ ಕೂಡ ಹೀಗೆ ಬರೆದಿತ್ತು!

ಇರಾಕ್‌ನಲ್ಲಾದ ಕ್ರಾಂತಿಯ ಬಗ್ಗೆ ಬೆಂಬಲದ ಮಾತಲ್ಲ, ಒಂದು ಒಳ್ಳೆಯ ಮಾತನ್ನೂ ಅದು ಹೇಳಲಿಲ್ಲ. ಇಷ್ಟೇ ಅಲ್ಲ, ಅಧ್ಯಕ್ಷ ನಾಸ್ಸೇರರನ್ನು ಬೈಯ್ಯುತ್ತ "ನಾಸ್ಸೇರ ನಿಧಾನವಾಗಿ ನಡೆಯದಿದ್ದರೆ ಅಮೇರಿಕೆಯ ಕೋಪವನ್ನು ಕೆರಳಿಸಿ ರಷ್ಯದ ಹಸ್ತಕ್ಷೇಪಕ್ಕೆ ಕಾರಣವಾಗಬೇಕಾಗುತ್ತದೆ." ಎಂದು ಬೋಧಿಸಿತು !

ಇದಾದ ಮೇಲೆ—

ಮೂರನೆಯ ದಿನದ ಸಂಪಾದಕೀಯದಲ್ಲಿ ಲೆಬನಾನ್‌ನಲ್ಲಿ ಅಧ್ಯಕ್ಷ ಷಾಮೂನ್‌ರ ಆಳ್ವಿಕೆ "ಜನಪ್ರಿಯವಾಗಿದೆ" ಎಂದು ಹೇಳಿತು !

ಪಿ. ಎಸ್. ಪಿ.ಯವರ 'ಲೋಕ ಸೇವಕ' 'ಹಂಗೇರಿಯೊಂದಿಗೆ ಐಕ್ಯತೆ' ಎಂಬ ಸಮಿತಿಯ ರಚಕರ ಜೊತೆ ಇರುವದರಲ್ಲಿ ಸಂದೇಹವೇ ಇಲ್ಲ. ದೇಶದ್ರೋಹಿಗಳಿಗಾಗಿ ಅವರು ಕಣ್ಣೀರುಗರೆಯುತ್ತಾರೆ, ದೇಶಭಕ್ತರ ಬಗ್ಗೆ ಪಿಸುಣ ನುಡಿಗಳನ್ನಾಡುತ್ತಾರೆ !

೦ ೦ ೦

ಸ್ವಾತಂತ್ರ್ಯ ದಿನೋತ್ಸವದ ಈ ಸಂದರ್ಭದಲ್ಲಿ ಇದೊಂದು ಸುದ್ದಿಯನ್ನು ನೀವು ಗಮನಿಸಬೇಕು.

ಜಸೂಯಿಟ್ಸ್ ಸಮಾಜದ ಸದಸ್ಯ ಪಾದ್ರಿ ಮೆಂಡೋಂಕಾರವರು ಕ್ಯಾಥೋಲಿಕ್ ಮಿಷನರಿಗಳ ಭಾರತ ವಿರೋಧಿ ಕುತಂತ್ರಗಳನ್ನು ಪ್ರತಿಭಟಿಸಿ ರಾಜೀನಾಮೆ ಕೊಡುತ್ತ "ನಾನು ನನ್ನ ರಾಷ್ಟ್ರವನ್ನು ಪ್ರೀತಿಸುತ್ತೇನೆ. ನಾನು ಗೋವಾದಲ್ಲಿ ಹುಟ್ಟಿದುದು. ಗೋವಾ ವಿದೇಶೀ ಆಡಳಿತದಿಂದ ಮುಕ್ತಗೊಂಡು ಭಾರತದಲ್ಲಿ ಸೇರಬೇಕೆಂದು ಆಶಿಸುತ್ತೇನೆ, ನಾನು ಸ್ವಾತಂತ್ರ್ಯವನ್ನು ಗೌರವಿಸುತ್ತೇನೆ" ಎಂದು ಹೇಳಿರುವುದನ್ನು ನೀವು ಮರೆತಿರಲಿಕ್ಕಿಲ್ಲ.

ಯಾವ ಧರ್ಮೀಯನಾದರೂ ತನ್ನ ತಾಯ್ನಾಡಿನ ಸ್ವಾತಂತ್ರ್ಯದ ಬಗ್ಗೆ, ಗೌರವದ ಬಗ್ಗೆ ಅನುಸರಿಸುವ ಕ್ರಮವೇ ಅದು. ಗೋವಾದಲ್ಲಿ ಪೋರ್ಚ್‌ಗೀಸ್ ಆಳ್ವಿಕೆ ಭದ್ರವಾಗುವದಕ್ಕೆ ಬೇರೆ ಕಾರಣಗಳೂ ಬೇಕಾದಷ್ಟಿವೆ. ಅದಕ್ಕೆ ನಮ್ಮ ಬಂಡವಾಳಗಾರರೂ, ವಾಣಿಜ್ಯೋದ್ಯಮಿಗಳೂ ಎಂದರೆ ನೀವು ವಿಸ್ಮಿತರಾಗಲಿಕ್ಕಿಲ್ಲ. ಗೋವಾದ ಒಳಗೂ ಹೊರಗೂ ಗೋವಾದ ಮೇಲೆ ಇರುವ ಪೋರ್ಚುಗೀಸರ ಹಿಡಿತವನ್ನು ಹೆಚ್ಚು ಶಕ್ತವಾಗಿಸುವದಕ್ಕೆ ದೊಡ್ಡದೊಂದು ಪಡೆಯೇ ಇದೆ. ಈ ಮಹಾನುಭಾವರು ತಮ್ಮ ವ್ಯವಹಾರಗಳಿಂದ ಗೋವಾದಲ್ಲಿ ಸುಭದ್ರವಾದ ವಿಮಾನ ನಿಲ್ದಾಣದ ರಚನೆಗೆ ಸಹಕಾರಿಗಳಾಗಿದ್ದಾರೆ. ಮಾರ್ಮಗೋವಾ ಬಂದರ ಬಲಿಷ್ಠವಾಗುವಂತೆ ಮಾಡಿದ್ದಾರೆ. ಈ ವಾಣಿಜ್ಯೋದ್ಯಮಿಗಳು ಧಾರಾಳವಾಗಿ ಅಲ್ಲಿ ವಿದೇಶೀಯರೊಂದಿಗೆ ಹಣ ಸುರಿಸಿದ್ದಾರೆ. ಇಲ್ಲಿರುವದೆಲ್ಲ ಭಾರತೀಯ ಶ್ರಮ, ಬಂಡವಾಳ, ಮ್ಯಾನೇಜ್‌ಮೆಂಟು ಮತ್ತು ಇವುಗಳ ಸಂಬಂಧವೆಲ್ಲ ಭಾರತದಲ್ಲಿರುವ ಸಂಸ್ಥೆಗಳೊಂದಿಗೇನೆ.

ಪೋರ್ಚುಗೀಸ್‌ರ ಶಕ್ತಿ, ಸ್ಥಾನಗಳನ್ನು ಹೆಚ್ಚು ಭದ್ರಗೊಳಿಸಲು, ಏಕೀಕರಿಸಲು ಸಹಾಯವಾದ ಇನ್ನೊಂದು ಕಾಣಿಕೆಯೆಂದರೆ ಇತ್ತೀಚೆಗೆ ಅಲ್ಲಿ ರಚಿತವಾಗಿರುವ ಹಡಗು ನಿರ್ಮಾಣ ಸಂಘ. ಗೋವಾದ ಗಣಿ ವ್ಯವಹಾರಗಳಲ್ಲಿ ಹಾಗೂ ಚಿನ್ನದ ಕಳ್ಳಸಾಗಾಟದಲ್ಲಿ ತೊಡಗಿರುವ ಬಂಡವಾಳಗಾರರು ಇದಕ್ಕೆ ನೆರವು ನೀಡಿದವರು ಇದರಲ್ಲಿ ವಿದೇಶೀಯರೂ ಸೇರಿಕೊಂಡಿದ್ದಾರೆ. ಪೋರ್ಚುಗೀಸ್ ಹಿಡಿತವನ್ನು ಶಾಶ್ವತಗೊಳಿಸಲು ಸಹಾಯಕರಾಗಿರುವ ಪ್ರಮುಖರ ಪಟ್ಟಿಯೊಂದನ್ನು ಕೆಳಗೆ ಕೊಟ್ಟಿದೆ;

ಚೌಗಲೆ ಅಂಡ್ ಕೊ. ಲಿ.,

ದಾಮೋದರ್ ಮಂಗಲಜೀ ಅಂಡ್ ಕೋ (ಇಂಡಿಯಾ) ಲಿ.,

ಗಂಗಾಧರ್ ಅಗ್ರವಾಲ್.

ಹೀರಾಲಾಲ್ ಪೋಡಿದಾಸ್.

ಕಾಂತಿಲಾಲ್ ಅಂಡ್ ಕೊ. ಲಿ.,

ಶಾಂತಿಲಾಲ್ ಖುಶಾಲ್‌ದಾಸ್ ಅಂಡ್ ಬ್ರದರ್ಸ್.

ಸುಬ್ರಾಯ್ ಅಂಚ್ ಕೋ.

ಟಿಂಬಲ್ ಬ್ರದರ್ಸ್ ಲಿ.,

ವಿ. ಎಂ. ಸಾಲ್ಗಾಂವಕರ್ ಅಂಡ್ ಬ್ರದರ್ಸ್ ಲಿ.,

ವಿ.ಎಸ್. ಡೇಂಪೆ ಅಂಡ್ ಕೋ. ಲಿ.

ಜೋಆಓ ಹ್ಯೂಗೋ ಸಿಕೇರಿಯಾ.

ಮಾದೇವ್ ಸಿಣೆ ತಲಾಲಿಕರ್.

ಎ. ಅಬ್ದುಲ್ ರಜಾಕ್.

ಸೇಸಾ ಗೋವಾ ಲಿ., (ಜರ್ಮನೋ ಇಟಾಲಿಯನ್)

ಡಬ್ಲ್ಯು ಐ. ಪಿ. ರೈಲ್ವೆ (ಬ್ರಿಟಿಷ್)

ಮಿಂಗೋವಾ ಸೊಸೈಟ (ಇಟಾಲಿ)

ಇದಕ್ಕೇನು ಹೇಳುತ್ತೀರಿ?

—ಪ್ರಶ್ನಾರ್ಥಿ

ಪುಂಗಾಳು

"ಬಲಹೀನವಾಗುತ್ತಿರುವ ಕಾಂಗ್ರೆಸ್ಸಿನ ಅಧಃಪತನವನ್ನು ಯಾರೂ ತಡೆಯಲಾರರು. ಮುಂದಿನ ಒಂದು ವರುಷದಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷವು ಶಕ್ತಿಯನ್ನು ಹೆಚ್ಚಿಸಿಕೊಂಡು..... ದೇಶಕ್ಕೆ ಮಾರ್ಗದರ್ಶನ ನೀಡುವಂತಾಗಬೇಕು...... ಮುಂದಿನ ೩-೪ ವರುಷಗಳಲ್ಲಿ ನಾವು ಶಕ್ತಿಯುತವಾದ ಪಕ್ಷವಾಗಿ ಬೆಳೆಯದಿದ್ದರೆ ಬೇರೆ ಇನ್ನೊಂದು ಪಕ್ಷವು ಮುನ್ನುಗ್ಗಬಹುದು......" ಎಂಬುದಾಗಿ ಪೀಯಸ್‌ಪಿ ನಾಯಕ ಅಶೋಕ ಮೆಹ್ತ ಬೆಂಗಳೂರಿನ ಪಿ. ಎಸ್. ಪಿ. ಶಿಬಿರದಲ್ಲಿ ಮಾತನಾಡುತ್ತ ಹೇಳಿದರು.

......'ಕಾಂಗ್ರೆಸ್ಸು ಬಲಹೀನವಾಗುತ್ತಿರುವುದು'—ನಿಜ, 'ಪಿ. ಎಸ್. ಪಿ. ಶಕ್ತಿಯನ್ನು ಹೆಚ್ಚಿಸಿಕೊಂಡು....' ಅಂದರೆ ಈಗ ಶಕ್ತಿಯಿಲ್ಲವೇ ಇಲ್ಲ, ನಿಜ; 'ಮುಂದಿನ ೩-೪ ವರುಷಗಳಲ್ಲಿ.... ಶಕ್ತಿಯುತವಾದ ಪಕ್ಷವಾಗಿ ಬೆಳೆಯದಿದ್ದರೆ'...... ಹಾಗಾದರೆ ಅಲ್ಲಿಯ ವರೆಗೂ ಇವರು ಶಕ್ತಿಯುತರಾಗಲಾರರು ಎಂಬ ಅವರದೇ ಆತ್ಮವಿಶ್ವಾಸದ ಮಾತೂ, ನಿಜ,.... 'ಬೇರೆ ಪಕ್ಷ ಮುನ್ನುಗ್ಗಬಹುದು'.... ನಿಜ; ಬೇರೆ ಅಂದರೆ ಪ್ರಮುಖವಾಗಿರುವ ಪಕ್ಷ, ಕಮ್ಯೂನಿಸ್ಟ ಪಾರ್ಟಿ...... ನಿಜ !

೦ ೦ ೦

ಪೀಯಸ್‌ಪೀಯ ಅಧ್ಯಕ್ಷರಾದ ಗಂಗಾಶರಣ ಸಿನ್ಹ ಅವರು ಕೂಡ ಇದೇ ವೇದಿಕೆಯಲ್ಲಿ ಮಾತನಾಡುತ್ತ "ವಿಳಂಬವಾಗುವದಕ್ಕೆ ಮುಂಚೆಯೇ ಪಕ್ಷದಲ್ಲಿ ಪುನಃ ಜೀವ ತುಂಬದಿದ್ದರೆ, ಈ ದಿಶೆಯಲ್ಲಿ ಕಾರ್ಯ ಮಾಡದಿದ್ದರೆ ಇತಿಹಾಸ ನಮ್ಮನ್ನು ಕ್ಷಮಿಸದು, 1959ರೊಳಗಾಗಿ ನಾವು ಈ ಉದ್ದೇಶವನ್ನು ಸಾಧಿಸದಿದ್ದರೆ ಪಕ್ಷವನ್ನು ವಿಸರ್ಜಿಸುವುದೇ ವಾಸಿ." ಎಂದು ಹೇಳಿದರಂತೆ.

—ಅಂತೂ ಸ್ಥಿತಿ ಭಯಂಕರವಾಗಿದೆ, ಚಿಂತಾಜನಕವಾಗಿದೆ, ಶೋಚನೀಯವಾಗಿದೆ, ಕಳವಳಕಾರಕವಾಗಿದೆ.

೦ ೦ ೦

"ಕೇರಳವೊಂದನ್ನು ಸ್ವಪ್ನ ಪಿಶಾಚಿಯೆಂದು ಭಾವಿಸಬೇಡಿ"—ನೆಹ್ರೂ.

"ಕೇರಳದಲ್ಲಿ ಸ್ಥಿತಿ ಭಯಾನಕವಾಗಿದೆ" —ನೆಹ್ರೂ.

"ಕೇರಳದ ಜನರ ಮನದಲ್ಲಿ ಒಂದು ಬಗೆಯ ಅಭದ್ರತೆಯ ಭಾವನೆ ಮೂಡಿದೆ...... ಆದರೆ ಈ ಭಾವನೆ ಎಷ್ಟರಮಟ್ಟಿಗಿದೆಯೆಂಬುದು ತನಗೆ ತಿಳಿಯದು"—ನೆಹ್ರೂ.

"ಕೇರಳದ ಈಗಿನ ಪರಿಸ್ಥಿತಿಗೆ ತಮ್ಮ ಚಟುವಟಿಕೆಗಳಿಂದ ಇತರ ಪಕ್ಷಗಳೂ ಕೂಡ ಕಾರಣವಾಗಿವೆ"—ನೆಹ್ರೂ.

—ಒಬ್ಬರೇ ನೆಹ್ರೂ ತಾನೆ ಇದನ್ನೆಲ್ಲ ಹೇಳಿದವರು ?

೦ ೦ ೦

ಅಲ್ಲ, ಅವರ ಸುತ್ತ ಇರುವ ಮೊರಾರ್ಜಿ, ಪಂತ್, ಸದೋಬಾ ಮುಂತಾದ ಮಹಾ ಪ್ರಚಂಡರ ಅಭಿಪ್ರಾಯ ನಿರೂಪಣೆಯ ಒತ್ತಡವೂ ಇದರಲ್ಲಿ ಮುಕ್ಕಾಲಾಂಶವಿದ್ದರೂ ನೆಹ್ರೂವಿನ ನಿಜವಾದ ಅಳುಕು ಮನಸ್ಸಿನ ಅಂಶ ಕೊಂಚ ಮಾತ್ರ ಇದೆಯೆಂದು ನಮ್ಮ ರಾಜಕೀಯ ಮನೋವಿಜ್ಞಾನಿಯ ಅಭಿಪ್ರಾಯ.

೦ ೦ ೦

ದೆಹಲಿಗೆ ತೆರಳಿದ ಕೇರಳ ಪ್ರದೇಶ ಕಾಂಗ್ರೆಸ್ಸಿನ ಪ್ರತಿನಿಧಿ ಮಂಡಳಳವು ಪತ್ರಿಕಾ ಗೋಷ್ಠಿಯನ್ನು ಕರೆದಿದ್ದಾಗ ಪತ್ರಿಕಾ ಪ್ರತಿನಿಧಿಗಳೊಬ್ಬರು "ಲಕ್ನೋದಲ್ಲಿ ವಿದ್ಯಾರ್ಥಿಗಳ ಮೇಲಾದ ಗೋಲೀಬಾರನ್ನು ನೀವು ಖಂಡಿಸುತ್ತೀರಾ ?" ಎಂದು ಪ್ರಶ್ನಿಸಿದರಂತೆ. ಈ ಕಾಂಗ್ರೆಸ್ ನಾಯಕರು ಒಂದು ನಿಮಿಷ ಸುಮ್ಮನೆ ಕುಳಿತು ನಿಧಾನವಾಗಿ ಹೇಳಿದರಂತೆ "ಕೇರಳದಲ್ಲಿಯ ಗೋಳೀಬಾರನ್ನೂ ನಾವು ಖಂಡಿಸುತ್ತಿಲ್ಲ."

—ಅದಲ್ಲದಿದ್ದರೆ, ಅದು ಹೌದಾದರೂ ನಿಮ್ಮ ಉದ್ದೇಶ ಸ್ಪಷ್ಟವಾಗೇ ಇದೆ. ಒಪ್ಪಿಕೊಂಡಿರಲ್ಲ! ಷಹಭಾಷ್, ನಿಮ್ಮ ಸತ್ಯಸಂಧತೆಗೆ ಮೆಚ್ಚಿಕೊಂಡೆವು !

೦ ೦ ೦

ಕಳೆದ ವರುಷ ಬೆಂಗಳೂರಿಗೆ ಆಗಮಿಸಿದ್ದ ಆಚಾರ್ಯ ಭಾವೆ ಬೆಂಗಳೂರು ನಗರವನ್ನು ಸರ್ವೋದಯವನ್ನಾಗಿಸಿದರು. ಈ ಸರ್ವೋದಯ ನಗರದಲ್ಲಿ ೨,೫೨೭ ಜನ ೧,೧೭,೧೫೨ ರೂ.ಗಳ ಮೊತ್ತದ ದಾನಕ್ಕೆ ರುಜು ಮಾಡಿದ್ದರು. ಅವರಲ್ಲಿ ೧೨೭ ದಾನಿಗಳು ೨೬,೧೧೫ ರೂ.ಗಳನ್ನು ಮಾತ್ರ ದಾನವನ್ನಾಗಿ ನೀಡಿದ್ದಾರಂತೆ. ಅಂದರೆ ಶೇ. ೫ರಷ್ಟೂ ಸಂದಾಯವಾಗಿಲ್ಲ.

—ಸಾರ್ಥಕವಾಯಿತು ಬಿಡಿ ಭಾವೆಯವರ ಜನ್ಮ. ದಾನಗಳಿಂದ ಯಾವ (ಭೂ) ಸಮಸ್ಯೆಯೂ ಬಿಡಲಾರದೆಂಬ ತಿಳುವಳಿಕೆ ಹರಡಲೂ, ಇದು ಕಾರಣವಾದುದಕ್ಕೂ ನಮ್ಮ ಜನ್ಮ ಸಾರ್ಥಕವಾಯಿತೆಂದು ಅನೇಕ ಬಡವರ ವ್ಯಾಖ್ಯೆ.

—"ಚೌಚೌವಾಲಾ"

ಕೇರಳದಲ್ಲಿ ನಾಗರಿಕ ಸ್ವಾತಂತ್ರ್ಯ

ಲೋಕಸಭೆಯಲ್ಲಿ ಕೇರಳದ ವಿಷಯ ಚರ್ಚೆಗೆ ಬಂದಾಗ ಡಾಂಗೆ ಹೇಳಿದರು:

"ಕೇರಳದಲ್ಲಿಯ ನಾಗರಿಕ ಸ್ವಾತಂತ್ರ್ಯದ ಬಗ್ಗೆ ಪ್ರಸ್ತಾಪಿಸಲಾಗಿದೆ. ನಾಗರಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದ್ದ ಒಂದೇ ಒಂದು ನಿದರ್ಶನ ನನ್ನ ಗಮನಕ್ಕೆ ಬಂದಿದೆ. ಇಬ್ಬರು ಕುಡುಕರು ಬೀದಿಯಲ್ಲಿ ಸಿಕ್ಕಾಬಟ್ಟೆ ಜಗಳಾಡಿದರು. ಕುಡಿದು ಜಗಳವಾಡಲು ಅವರಿಬ್ಬರಿಗೂ ಖಂಡಿತವಾಗಿ ಸ್ವಾತಂತ್ರ್ಯವಿದೆ. ಕೇರಳ ಸರಕಾರ ಈ ಜಗಳದ ಮಧ್ಯೆ ಪ್ರವೇಶಿಸಬೇಕೆಂದು ನಿರೀಕ್ಷಿಸಬೇಕಾಗಿಲ್ಲ. ಕುಡುಕರಲ್ಲೊಬ್ಬ ಇನ್ನೊಬ್ಬನಿಂದ ಕೊಲ್ಲಲ್ಪಟ್ಟವನು ತಮ್ಮವನೆಂದು, ಪಿ. ಎಸ್. ಪಿ. ಯವರು ಹೇಳಿದರು!

ಕರ್ನಾಟಕದ ಒಂದು ಲಕ್ಷ ಬೀಡಿ ಮಜೂರರ ಜೀವನ ಸ್ಥಿತಿ

ಅಸ್ತವ್ಯಸ್ತ ಮತ್ತು ಶೋಚನೀಯವಾಗಿದೆ

ಮೈಸೂರು ಪ್ರಾಂತದಲ್ಲಿ (ಕರ್ನಾಟಕದಲ್ಲಿ) ಒಂದು ಲಕ್ಷಕ್ಕೂ ಮಿಕ್ಕಿ ಮಜೂರರು ಬೀಡಿ ಕೈಗಾರಿಕೆಯಲ್ಲಿ ದುಡಿಯುತ್ತಿದ್ದಾರೆ. ದ. ಕ. ಜಿಲ್ಲೆಯು ಬೀಡಿ ಕೈಗಾರಿಕೆಯ ಕೇಂದ್ರವಾಗಿದ್ದು, ಈ ಒಂದು ಜಿಲ್ಲೆಯಲ್ಲೇ ಸುಮಾರು 25 ಸಾವಿರ ಬೀಡಿ ಮಜೂರರು ದುಡಿಯುತ್ತಿದ್ದಾರೆ.

ಏಳೆಂಟು ವರ್ಷಗಳ ಹಿಂದಿನ ಬೀಡಿ ಕೈಗಾರಿಕೆಯ ಒಂದು ಚಿತ್ರವನ್ನು ನಾವು ತೆಗೆದುಕೊಂಡರೆ, ಅಂದು 200—300 ಮಜೂರರ ದುಡಿಯುತ್ತಿದ್ದ ದೊಡ್ಡ ದೊಡ್ಡ ಕಾರ್ಖಾನೆಗಳಿದ್ದುವು. ಬೀಡಿ ಮಜೂರರ ದುಡಿತಕ್ಕೆ ಮಿತಿ ಇತ್ತು. ಮಜೂರ—ಮ್ಹಾಲಕರೊಳಗೆ ಒಂದಿಷ್ಟು ಒಳ್ಳೆಯ ಸಂಬಂಧವಿತ್ತು. ಬೀಡಿ ಕೈಗಾರಿಕೆಯು ಅಂದು ಸುಸಂಘಟಿತವಾದ ಒಂದು ಕೈಗಾರಿಕೆಯಾಗಿತ್ತು.

ಅಸ್ತವ್ಯಸ್ತವಾಗಿದೆ

ಆದರೆ ಕಾಲ ಕಳೆದಂತೆ 200—300 ಮಜೂರರು ದುಡಿಯುತ್ತಿದ್ದ ಕಾರ್ಖಾನೆಗಳು ಸಂಪೂರ್ಣ ಮಾಯವಾದುವು. ಈ ಕೈಗಾರಿಕೆಯಲ್ಲಿ ಕಾನೂನು ರೀತಿಯ ಮಜೂರ—ಮ್ಹಾಲಕ ಸಂಬಂಧವಿಲ್ಲ. ಕಂಟ್ರಾಕ್ಟು ಪದ್ಧತಿ ಬಲವಾಗಿ ಬೇರೂರಿದೆ. ನೂರಕ್ಕೆ 95 ಮಜೂರರು ಕಂಟ್ರಾಕ್ಟು ಮತ್ತು ಪಾಸ್ ಬುಕ್ಕಿನ ಪದ್ಧತಿಗೆ ಒಳಪಟ್ಟು ಮನೆಮನೆಗಳಲ್ಲಿ ದುಡಿಯುವಂತಾಗಿದೆ. ಇಡೀ ಕೈಗಾರಿಕೆ ಅಸಂಘಟಿತವಾಗಿ ಚದರಿಹೋದಂತೆ ಮಜೂರರು ಇಂದು ಅತೀ ಹೆಚ್ಚಾದ ಶೋಷಣೆಗೆ ಒಳಗಾಗಿದ್ದಾರೆ. ಸಾವಿರ ಬೀಡಿಗೆ ಇಂತಿಷ್ಟೇ ಕೂಲಿಯೆಂಬ ನಿರ್ಣಯವಿಲ್ಲ. ದುಡಿತದ ಸಮಯಕ್ಕೆ ಮಿತಿಯಿಲ್ಲ ಬೋನಸ್ ರಜಾ ಸೌಕರ್ಯಗಳೆಂಬುದು ಬೀಡಿ ಮಜೂರರ ಪಾಲಿಗೆ ಕನ್ನಡಿಯೊಳಗಿನ ಗಂಟಾಗಿದೆ. ಹೀಗಾಗಿ ಈ ಕೈಗಾರಿಕೆಯಲ್ಲಿ ದುಡಿಯುವ ಮಜೂರರ ಇಂದಿನ ಕೆಲಸದ ಮತ್ತು ಜೀವನದ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ.

ಬೀಡಿ ಕೈಗಾರಿಕೆಯಲ್ಲಿ ಅತೀ ಹೆಚ್ಚಿನ ಶೋಷಣೆ ನಡೆಯುತ್ತಿರುವುದರಿಂದಲೂ, ಇಂತಹ ಹೆಚ್ಚಿನ ಸುಲಿಗೆ ನಡೆಸಲು ಈ ಕೈಗಾರಿಕೆಯನ್ನು "ಮಿನಿಮಮ್ ವೇಜಸ್" ಆಕ್ಟಿನ ಪರಿಮಿತಿಗೆ ಒಳಪಡಿಸಲಾಗಿದೆ. ಬೀಡಿ ಮಾಲಕರುಗಳು ಮತ್ತು ಕಂಟ್ರಾಕ್ಟುದಾರರುಗಳು ಜತೆಯಾಗಿ, ಮಜೂರರ ಮೇಲೆ ದಬ್ಬಾಳಿಕೆ ನಡೆಸಿ, ವಿವಿಧ ರೀತಿಯ ಕಿರುಕುಳಕೊಟ್ಟು ಅತ್ಯಧಿಕ ಲಾಭ ಗಳಿಸುತ್ತಿದ್ದಾರೆ. ಆದರೂ ಈ ವಿಭಾಗದ ಮಜೂರರ ಹಿತರಕ್ಷಿಸಲು ಸರಕಾರ ಸಂಪೂರ್ಣ ಕಡೆಗಣಿಸಿದೆ ಎಂಬುದು ತುಂಬಾ ವಿಷಾದಕರವಾಗಿದೆ.

ಹಿತಗಳ ರಕ್ಷಣೆ

ತಮ್ಮ ಹಿತಗಳ ರಕ್ಷಣೆಗಾಗಿ ಬೀಡಿ ಮಜೂರರು ದೀರ್ಘಕಾಲದಿಂದ ಹೋರಾಟ ನಡೆಸುತ್ತಾ ಬಂದಿದ್ದಾರೆ. ಬೀಡಿ ಮಜೂರರ ಸ್ಥಿತಿಗತಿಗಳ ವಿಚಾರಣೆ ನಡೆಸಲು ಹಲವು ಕಮಿಟಿಗಳ ರಚನೆಯಾಗಿದೆ. ಕೇಂದ್ರ ಸರಕಾರದಿಂದ ನೇಮಕ ಹೊಂದಿರುವ ಶ್ರೀ ರೇಗೆ ಕಮಿಟಿ, ಮದ್ರಾಸು ಸರಕಾರ ನೇಮಿಸಿರುವ ಡಾ. ನಾರಾಯಣಸ್ವಾಮಿ ನಾಯ್ಡು ಕಮಿಟಿ ಮತ್ತು ಮದ್ರಾಸು ಸರಕಾರದ ಮಜೂರ ಮಂತ್ರಿಗಳು ಕರೆದಿರುವ ಬೀಡಿ ಮಜೂರ-ಮಾಲಕ-ಸರಕಾರದ ಪ್ರತಿನಿಧಿಗಳ ಸಮ್ಮೇಳನ. ಸಾವಿರಾರು ರೂಪಾಯಿ ಖರ್ಚುಮಾಡಿ ತಯಾರಿಸಿರುವ ಈ ಕಮಿಟಿಗಳ ವರದಿ ಮತ್ತು ತ್ರಿಪಕ್ಷೀಯ ಸಮ್ಮೇಳನದ ಸೂಚನೆಗಳನ್ನೆಲ್ಲಾ ಸರಕಾರ ಕಸದ ಬುಟ್ಟಿಗೆ ಎಸೆದಿದೆ. ಆದರೂ ಮದ್ರಾಸು ಪ್ರಾಂತ್ಯದ ಬೀಡಿ ಮಜೂರರು ತಮ್ಮ ಚಳುವಳಿಯನ್ನು ನಿಲ್ಲಿಸದೆ ಮುಂದುವರಿಸಿದ್ದರಿಂದ ದ. ಕ. ಜಿಲ್ಲೆಯನ್ನು ಮೈಸೂರಿಗೆ ಸೇರಿಸುವ ಮುನ್ನ ಆಗಿನ ಸರಕಾರವು ಈ ಕೈಗಾರಿಕೆಯಲ್ಲಿ ದುಡಿಯುವ ಬೀಡಿ ಮಜೂರರ ಸ್ಥಿತಿಗತಿಗಳನ್ನು ಪರಿಶೀಲಿಸಲು ಒಬ್ಬ ಸ್ಪೆಷಲ್ ಆಫೀಸರರನ್ನು ನೇಮಕ ಮಾಡಿತ್ತು. ಅವರ ವರದಿಯ ಆಧಾರದಲ್ಲಿ ಬೀಡಿ ಮಜೂರರ ಹಿತರಕ್ಷಣೆಯ ಕಾಯಿದೆ ತರಲಾಗುವುದೆಂದು ಸಾರಲಾಗಿತ್ತು. ಪ್ರಾಂತಗಳ ಪುನರ್ವಿಂಗಡನೆಯಾದ ಬಳಿಕವೂ ಕನಿಷ್ಟ ಕೂಲಿ ನಿರ್ಣಯಿಸಬೇಕು, ಮತ್ತು ಬೀಡಿ ಮಜೂರರು ಮೈಸೂರು ಸರಕಾರವನ್ನು ಹಲವು ಬಾರಿ ಒತ್ತಾಯಿಸಿರುವರು. ಬೀಡಿ ಮಜೂರರಿಗೆ ಕನಿಷ್ಠ ವೇತನ ನಿರ್ಣಯಿಸಲು ಮತ್ತು ಕಾನೂನು ರಚಿಸಲು ಬೇಕಾದ ಕ್ರಮಗಳನ್ನು ಸರಕಾರ ಕೈಕೊಳ್ಳದಿದ್ದರೆ ಮುಷ್ಕರ ಹೂಡುವ ನೋಟೀಸನ್ನು 1957ನೇ ಜುಲೈ ತಿಂಗಳಲ್ಲಿ ದ. ಕ. ಜಿಲ್ಲೆಯ ಬೀಡಿ ಮಜೂರರು ಕೊಟ್ಟಿದ್ದರು. ಆಗಿನ ಮಜೂರ ಮಂತ್ರಿಗಳಾಗಿದ್ದ ಶ್ರೀ ಬಿ. ವೈಕುಂಠ ಬಾಳಿಗರು ಖಂಡಿತವಾದ ಭರವಸೆಕೊಟ್ಟ ನಂತರ ನೋಟೀಸನ್ನು ಹಿಂತೆಗೆದುಕೊಳ್ಳಲಾಯಿತು.

> **ಬೀಡಿ ಕೈಗಾರಿಕೆಯಲ್ಲಿ ಅತೀ ಹೆಚ್ಚಿನ ಶೋಷಣೆ ನಡೆದಿದೆ. ಕನಿಷ್ಠ ಕೂಲಿ ನಿರ್ಣಯಕ್ಕಾಗಿ ಸರ್ಕಾರವನ್ನು ಒತ್ತಾಯಿಸಲು ಕರ್ನಾಟಕದಲ್ಲೆಲ್ಲ ಸಂಘಟಿತ ಭಾರೀ ಚಳವಳ ನಡಿಯಲಿ!**

ಕಳೆದ ಒಕ್ಟೋಬರ್ ತಿಂಗಳಿನಲ್ಲಿ ಸೇರಿದ್ದ ಅಖಿಲ ಕರ್ನಾಟಕ ಬೀಡಿ ಮಜೂರರ ಸಮ್ಮೇಳನದಲ್ಲಿಯೂ ಬೀಡಿ ಮಜೂರರ ಕಷ್ಟ-ಸಂಕಷ್ಟಗಳನ್ನು ಸರಕಾರದ ಗಮನಕ್ಕೆ ತಂದು ತೀರ್ಮಾನಿಸಲು ಯೋಗ್ಯ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸರಕಾರವನ್ನು ವಿನಂತಿಸಲಾಯಿತು. ಆದರೂ ಸರಕಾರ ಈ ಪರಿಸ್ಥಿತಿಯನ್ನು ಪರಿಶೀಲಿಸಲಿಲ್ಲ. ಕನಿಷ್ಠ ಕೂಲಿ ನಿರ್ಣಯಿಸಿಲ್ಲ. ಕಾನೂನು ರಚಿಸಿಲ್ಲ.

ಲೇಖಕರು:
ಕೆ. ಮೋನಪ್ಪ ಶೆಟ್ಟಿ

ಕೇರಳ—ಮೈಸೂರುಗಳಲ್ಲಿ

ಆದರೆ ಇದೇ ವೇಳೆ ಮದ್ರಾಸು ಮತ್ತು ಕೇರಳ ಸರಕಾರಗಳು ಬೀಡಿ ಮಜೂರರ ಹಿತರಕ್ಷಣಾ ಮಸೂದೆಯ ಕರಡುಗಳನ್ನು ಪ್ರಕಟಿಸಿವೆ. ಕೇರಳ ಸರಕಾರ ಸಾವಿರ ಬೀಡಿಗಳಿಗೆ ರೂ 1—14—0 ಕನಿಷ್ಠ ಕೂಲಿ ಕೊಡಬೇಕೆಂದು ಆಜ್ಞೆ ಹೊರಡಿಸಿದೆ. ದ. ಕನ್ನಡ ಜಿಲ್ಲೆಯ ಮತ್ತು ಮೈಸೂರಿನ ಹಲವು ಬೀಡಿ ಮಾಲಕರುಗಳು ಕೇರಳದಲ್ಲಿರುವ ತಮ್ಮ ಬ್ರಾಂಚುಗಳಲ್ಲಿ ಕಳೆದ ಮಾರ್ಚಿ ತಿಂಗಳಿಂದ ಸಾವಿರ ಬೀಡಿಗಳಿಗೆ ರೂ. 1—14—0 ಮಜೂರಿ ಕೊಡುತ್ತಿದ್ದಾರೆ. ಆದರೆ ಅದೇ ವೇಳೆ ಈ ಮಾಲಕರುಗಳು ಮೈಸೂರು ಪ್ರಾಂತದಲ್ಲಿ ಕೊಡುತ್ತಿರುವ ಕೂಲಿ ರೂ. 1—4—0 ಗೂ ಕಡಿಮೆ ಇದೆ. ಇಂಥಾ ಪರಿಸ್ಥಿತಿಯಲ್ಲಿ ಮೈಸೂರು ಸರಕಾರ ಬೀಡಿ ಮಜೂರರಿಗೆ ಕನಿಷ್ಠ ಕೂಲಿಯನ್ನೂ ನಿರ್ಣಯಿಸಿಲ್ಲ. ಮಾತ್ರವಲ್ಲ ಕನಿಷ್ಠ ಕೂಲಿ ಸಲಹಾ ಸಮಿತಿಯನ್ನು ಕೂಡಾ ರಚನೆ ಮಾಡಿಲ್ಲ.

ಪ್ರಾಂತದ ಸಾವಿರಾರು ಬೀಡಿ ಮಜೂರರಿಗೆ ಕನಿಷ್ಠ ಕೂಲಿ ನಿರ್ಣಯಿಸುವುದು ಮತ್ತವರ ಹಿತರಕ್ಷಣೆ ಮಾಡಲು ಕಾನೂನು ರಚಿಸುವುದು ಇಂದಿನ ಅತ್ಯಗತ್ಯದ ಮತ್ತು ತುರ್ತಿನ ಕೆಲಸವಾಗಿದೆಯೆಂಬುದನ್ನು ನಾವು ಸರಕಾರದ ಗಮನಕ್ಕೆ ತರಲಿಚ್ಛಿಸುತ್ತೇವೆ.

ಬೀಡಿ ಮಜೂರರ ತುರ್ತಿನ ಈ ಬೇಡಿಕೆಗಳು ಕೂಡಲೇ ಈಡೇರುವಂತೆ ಸರಕಾರವನ್ನು ಒತ್ತಾಯಿಸುವ ಕಾರ್ಯಕ್ರಮ ಕೈಕೊಳ್ಳಲು ಕರ್ನಾಟಕ ಬೀಡಿ ವರ್ಕ್ಸ್ ಫೆಡರೇಶನ್ ತೀರ್ಮಾನಿಸಿದೆ.

ಕನಿಷ್ಠ ವೇತನ ಜಾರಿಗೆ ಬರಲಿ

ಮೈಸೂರು ಪ್ರಾಂತದಲ್ಲಿ ಕೂಡಲೇ ಮಿನಿಮಮ್ ವೇಜ್ ಕಮಿಟಿಯನ್ನು ರಚಿಸಬೇಕು. ಮತ್ತು ಸಾವಿರ ಬೀಡಿಗೆ ರೂ. 2—0—0 ಕನಿಷ್ಠ ಕೂಲಿ ನಿರ್ಣಯಿಸಬೇಕು. ಬೀಡಿ ಮಜೂರರ ಹಿತರಕ್ಷಿಸಲು ಕೇರಳ ಮತ್ತು ಮದ್ರಾಸು ಸರಕಾರಗಳು ಪ್ರಕಟಿಸಿರುವಂತಹ ಮಸೂದೆಗಳ ಆಧಾರದಲ್ಲಿ ಮೈಸೂರು ಸರಕಾರವೂ ಕಾನೂನೊಂದನ್ನು ರಚಿಸಬೇಕು. ಈ ಕೇಳಿಕೆಗಳ ಮನವಿಗೆ ಪ್ರಾಂತದ ಬೀಡಿ ಮಜೂರರ ಸಹಿ ಸಂಗ್ರಹಿಸಿ, ಬೀಡಿ ಮಜೂರರ ಪ್ರತಿನಿಧಿಗಳ ಶಿಷ್ಠಮಂಡಳ ಆಗೋಸ್ತು ತಿಂಗಳ ಮಧ್ಯದಲ್ಲಿ ಬೆಂಗಳೂರಿನಲ್ಲಿ ಮಜೂರ ಮಂತ್ರಿಗಳಿಗೆ ಈ ಮನವಿಯನ್ನು ಒಪ್ಪಿಸುವುದು.

ಈ ಪದ್ಧತಿ ತೊಲಗಲಿ

ತಮ್ಮ ಲಾಭವನ್ನು ಹೆಚ್ಚಿಸುವ ಅತಿಯಾಶೆಯಿಂದ, ಫೇಕ್ಟರಿಗಳ ಮಾಲಕರು ಸಂಘಟಿತ ರೀತಿಯಲ್ಲಿ ನಡೆಸಲ್ಪಡುತ್ತಿದ್ದ ಕೈಗಾರಿಕೆಯನ್ನು ಚದುರಿಸಿ, ಮಜೂರರಿಗೂ ಮಾಲಕರಿಗೂ ಸಂಬಂಧವಿಲ್ಲದ ಕಂಟ್ರಾಕ್ಟು ಮತ್ತು ಪಾಸು ಬುಕ್ಕಿನಲ್ಲಿ ಮನೆಗಳಲ್ಲಿ ದುಡಿಸುವ ಪದ್ಧತಿಯನ್ನು ಜ್ಯಾರಿಗೆ ತಂದು, ಮಜೂರರ ಮೇಲೆ ಹಲವು ರೀತಿಯಿಂದ ದಬ್ಬಾಳಿಕೆ ನಡೆಸಿ ಹಿಂಸಿಸುತ್ತಿರುವ ಬೀಡಿ ಮಾಲಕರುಗಳ ಮತ್ತು ಕಂಟ್ರಾಕ್ಟುದಾರರುಗಳ ಕಪಿಮುಷ್ಟಿಯಿಂದ ಬೀಡಿ ಮಜೂರರು ಬಿಡುಗಡೆಹೊಂದಲೇಬೇಕು. ಇದಕ್ಕಾಗಿ ಪ್ರಾಂತದ ಬೀಡಿ ಮಜೂರರು ಸಂಘಟಿತರಾಗಬೇಕು. ಅಲ್ಲಲ್ಲಿ ಸಂಘವನ್ನು ರಚಿಸಿ ಒಗ್ಗಟ್ಟಾಗಬೇಕು.

ಕನಿಷ್ಠ ಜೀವನವಕಾಶವಾದರೂ ಬೇಕು

ಪ್ರಾಂತದ ಬೀಡಿ ಮಜೂರರಿಗೂ ಜೀವನಕ್ಕೆ ತಕ್ಕ ವೇತನ, ದಿನಕ್ಕೆ 8 ಗಂಟೆ ಕೆಲಸ, ರಜಾ ಸೌಕರ್ಯ, ಉದ್ಯೋಗ ಭದ್ರತೆ ಮಜೂರ—ಮ್ಹಾಲಕ ಸಂಬಂಧ ಇರುವ ಯೋಗ್ಯ ಕಾನೂನು ಜ್ಯಾರಿಯಾಗಬೇಕು. ಈ ಕೈಗಾರಿಕೆಯಲ್ಲಿ ದುಡಿಯುವ ಸಾವಿರಾರು ಸ್ತ್ರೀಮಜೂರರಿಗೆ ಅವರ ಹೆರಿಗೆ ಕಾಲದಲ್ಲಿ ಸಂಬಳ ಸಹಿತ ರಜೆ ಸಿಗುವಂತೆ ಕಾನೂನಿನ ರಚನೆಯಾಗಬೇಕು. ಈ ಕೇಳಿಕೆಗಳನ್ನು ಸಂಪಾದಿಸಲು ಕರ್ನಾಟಕದ ಬೀಡಿ ಮಜೂರರು ಸಂಘಟಿತ ಚಳುವಳಿ ನಡೆಸಬೇಕು.

ಇದರ ಪ್ರಥಮ ಹೆಜ್ಜೆಯಾಗಿ ಮನವಿಗೆ ಸಹಿಸಂಗ್ರಹಿಸುವ ಕಾರ್ಯವನ್ನು ಕೈಕೊಳ್ಳಲಾಗಿದೆ. ಈ ಮನವಿಗೆ ಕರ್ನಾಟಕದ ಸಹಸ್ರಾರು ಸಂಖ್ಯೆಯಲ್ಲಿರುವ ಬೀಡಿ ಮಜೂರರು ಸಹಿಹಾಕಿ, ಸಾವಿರ ಬೀಡಿಗೆ ರೂ. 2 ಕನಿಷ್ಟ ಕೂಲಿ ನಿರ್ಣಯವಾಗಬೇಕು, ಮತ್ತು ಬೀಡಿ ಮಜೂರರ ಹಿತರಕ್ಷಿಸಲು ಕಾನೂನು ರಚಿಸಬೇಕು ಎಂಬ ಕೇಳಿಕೆಗಳನ್ನು ಕೂಡಲೇ ಮಾನ್ಯ ಮಾಡುವಂತೆ ಸರಕಾರವನ್ನು ಒತ್ತಾಯಿಸಬೇಕೆಂದೂ, ಈ ಮನವಿಯನ್ನು ಸರಕಾರಕ್ಕೆ ಒಪ್ಪಿಸಲು ಹೋಗುವ ಶಿಷ್ಟಮಂಡಲದಲ್ಲಿ ಪ್ರತಿಯೊಂದು ಜಿಲ್ಲೆಯ, ತಾಲೂಕಿನ, ಸರ್ಕಲ್ಲಿನ ಬೀಡಿ ಮಜೂರರು ಒಬ್ಬೊಬ್ಬ ಪ್ರತಿನಿಧಿಯನ್ನು ಕಳಹಿಸಿಕೊಡಬೇಕೆಂದೂ; ಕರ್ನಾಟಕ ಬೀಡಿ ವರ್ಕರ್ಸ್ ಫೆಡರೇಶನಿನ ಪರವಾಗಿ ಕಾರ್ಯದರ್ಶಿಗಳು ವಿನಂತಿಸಿಕೊಳ್ಳುತ್ತಾರೆ.

ಅವರು ಹುಡುಕುತ್ತಿದ್ದರು !

(೬ನೇ ಪುಟದಿಂದ)

ರಂಭಿಸಿದ ಮೇಲೆ ಗೌಡ್ರ ಹೊಟ್ಟೇ ಉರೀತು. ಅದು ಅವರಿಂದಲೇ ನನಗೆ ದೊರೆತುದು. ರೈತ-ಕಾನೂನು ಬರುತ್ತೆ ಎನ್ನುತ್ಲೇ ಕಿತ್ಕೊಂಡ್ರು. ಇಷ್ಟೇ ಅಲ್ಲ, ಹೆಂಡ್ತೀನ್ನೂ....ಹ್ಞೂ, ಗೌಡ ಬಲಾತ್ಕಾರ ನಡೆಸಿದ...."

"ಇದ್ದಕ್ಕಿದ್ದ ಹಾಗೆ ಒಂದು ದಿನ ರಾತ್ರೆ ನಾಲ್ಕಾರು ಜನ ಜಟ್ಟಿಗಳು ಮನೆಗೆ ನುಗ್ಗಿ ನನ್ನ ಜಜ್ಜಿದರು. ಗೌಡ್ರಮೇಲೆ ಕುಡುಗೋಲು ಎತ್ತಿದೆ ಎಂದ್ರು. ಇನ್ನೂ ಏನೇನೋ ಆಯಿತು. ಬದುಕೋದೆ ಕಷ್ಟವಾಯಿತು. ಹೊರಡಬೇಕಾಯಿತು. ಮನೆ, ಮಾರು ಎಲ್ಲಾ ತೊರೆದು...."

ಮಲ್ಲೇಶಿ ಕಲ್ಲಪ್ಪನ ತೊಡೆಗಳಲ್ಲಿ ಮುಖ ಮರೆಸಿಕೊಂಡು ಎಳೇ ಮಗುವಿನಂತೆ ಬಿಕ್ಕಳಿ ಬಿಕ್ಕಳಿಸಿ ಅತ್ತ.

"ಇಬ್ಬರದೂ ಒಂದೇ ಕತೆ ಏಳು ಮಲ್ಲೇಶಿ" ಎಂದು ಕಲ್ಲಪ್ಪ ಅವನ ತಲೆ ನೇವರಿಸಿದ.

"ಏನು ಕಲ್ಲಣ್ಣ ಹಾಗಂತೀಯಾ? ನಿನಗೇನಾಯಿತು ?"

ಮಿಳಿಮಿಳಿ ಕಣ್ಣುಬಿಡುತ್ತ ಮಲ್ಲೇಶಿ ಕೇಳಿದ.

"ದುಕ್ಖಾ ಇನ್ನೊಬ್ಬ ದುಖ್ಖಿ ಮುಂದೆ ತೋಡಕಂಡ್ರೆ ಕಮ್ಮೀ ಆಗತ್ತೈತಂತೆ. ಹೇಳು ಕಲ್ಲಪ್ಪ, ಹೇಳು...." ಮಲ್ಲೇಶಿ ಬಲವಂತ ಪಡಿಸಿದ.

"ಹೇಳಿ, ಕೇಳಿ ಏನು ಮಾಡೋದೈತಿ-ಬಿಡು ಮಲ್ಲೇಶಿ ನಮ್ಮಂಥೋರು" ಎಂದು ಗಂಗಪ್ಪ ತಡೆತಡೆದು ಹೇಳಿದ.

"ಇಲ್ಲೇ ನಗರ ಕಾಣತ್ತೈತಲ್ಲ, ಅದರಂಚಿನಲ್ಲಿ ಒಂದು ಭಾರೀ ಬಂಗ್ಲೆ ಐತಿ. ಆ ಬಂಗ್ಲೆ ಕಟ್ಟುವಾಗಿನಿಂದಲೂ ನಾನು ಅಲ್ಲಿದ್ದೆ. ಕಲ್ಲುಕುಟಿಗರವನು ನಾನು. ಅದೇನೋ ಯಿಶ್ವಾಸ ಬೇಳೀತು. ಅಲ್ಲೀ ಇದ್ದೆ—ಹುಡುಗನಾದಾಗಿದಿಂದ. ನಮ್ಮ ತಂದೆ ನನಗೆ ಬಿಟ್ಟ ಆಸ್ತಿಯೆಂದರೆ ಒಂದು ಸುತಿಗ್ಗೆ, ಭಾರೀ ಸುತಿಗಿ. ಎಂಥಾ ಬಂಡೆಗಲ್ಲಾದರೂ ಫಳಫಳಾ ಸೀಳಬೇಕು ನೋಡು. ಆ ಬಂಗ್ಲೆ ಈಚೆ ಕಲ್ಲು ತುಂಬಿದ ಮಾಳ ಐತೆ. ಯಾವ ಪ್ರಯೋಜನವೂ ಅದರಿಂದಿಲ್ಲ. ಅದೇನೋ ಭೂದಾನವೋ ಏನೋ ಅಂತೆ. ಭಾವೆ ಅವ್ರು ಬಂದಿದ್ದಾಗ ಬಂಗ್ಲೇ ಮಾಲೀಕರು ನನಗೂ ಒಂದಿಷ್ಟು ಭೂದಾನ ಮಾಡಿದ್ರು. ನಾನೇನು ರೈತನೆ? ಬೇಸಾಯ ಮಾಡೋ ಆಶೆ ಇದ್ರೂ ಆ ಜಾತಿ ನನ್ನದಲ್ಲ. ಏನು ಮಾಡೋದು ಹೇಳು ಅಂಥಾ ಭೂಮಿ ತಗೊಂಡು. ರೈತ ಆಗಿದ್ರೆ ಕಷ್ಟಪಟ್ಟು ಉಳುಮೆಗೆ ಸಿದ್ಧಪಡಿಸುತ್ತಿದ್ದೆ. ಸರಿ, ಇತ್ತಲ್ಲ ನನ್ನ ಶಸ್ತ್ರ. ದಿನಾಲು ಕಲ್ಲುಬಂಡೆಯನ್ನೊಡೆದು ಕುಪ್ಪೆ ಹಾಕುವುದೇ ನನ್ನ ಕೆಲಸವಾಯಿತು....

"ಕಾಸಿನ ಅಭಾವವಾದಾಗ ಒಂದು ಕುಪ್ಪೆ ಮಾರಕೊಂಡೆ. ಒಂದಿಷ್ಟು ಕಾಸೂ ಬಂತು. ಅದ್ಹೇಗೋ ಮನೇ ಮಾಲೀಕರಿಗೆ ಈ ಸಮಾಚಾರ ಗೊತ್ತಾಯ್ತು. ಕಲ್ಲಿನಲ್ಲೂ ಕಾಸು ಹುಟ್ಟುತ್ತೈತೆ ಅಂತ ಗೊತ್ತಾದರೆ ಸುಮ್ಮಕಿದ್ದಾರೆ ? ಮನೆ ಜವಾನರ ಧಾಳಿ ಆರಂಭವಾಯ್ತು. ಅವ್ರ ಡ್ರೈವರ್ ಒಬ್ಬನಿದಾನೆ, ಬದ್ಮಾಷ್. ಅವನ್ನ ಛೂ ಬಿಟ್ರು. ಆ ಭಡವ ಬಡವರ ಹೆಣ್ಣು ಅಂದ್ರೆ ತಾವು ಊಳಿಗಾ ಮಾಡೋ ಶ್ರೀಮಂತರ ಮನೇ ಹುಡಿಗೀರು ಎಂತ ತಿಳಿದಿದ್ದನೋ ಏನೋ. ನಾನು ನಗರಕ್ಕೆ ಹೋಗಿದ್ದ ಸಮಯಾ ಸಾಧಿಸಿ ಗುಡಿಸಲಿಗೆ ನುಗ್ಗಿದ. ಅದೇನಾಯ್ತೋ ನಂಗೊತ್ತಿಲ್ಲ. ಲಚ್ಮಿ ಸತ್ತೋಗಿದ್ಳು. ದೊಡ್ಡ ಮನೆ ಜವಾನರುಗಳು ಅಲ್ಲಿ ನನ್ನನ್ನು ಸಿಲ್ಲಿಸಗೊಡಲೇಯಿಲ್ಲ. ನನ್ನ ಕೈ ಸ್ನಾಯು ಕಬ್ಬಿಣದ ಉಂಡೆಯಾಗಿದ್ದರೂ ೮-೧೦ ಜನರಿಗೆ ಹೇಗೆ ಈಡಾದೇನು ಮಲ್ಲೇಶಿ ? ಹೌದು ಒದ್ದೋಡಿಸಿದರು, ನಿಜವಾಗ್ಲೂ ಒದ್ದೇ ಓಡಿಸಿದರು. ಗುಡಿಸಲಿನಲ್ಲಿ ಕಾಲಿಕ್ಕಲೂ ಕೊಡಲಿಲ್ಲ. ಎಲ್ಲಾ ಕಳಕೊಂಡು ಒಂಟಿಯಾಗಿ ಓಡಿಬಂದೆ. ಬಡವರ ದುಕ್ಖಾ ಯಾರು ಕೇಳುತ್ತಾರೆ ಮಲ್ಲೇಶಿ ?...."

ಕಲ್ಲಣ್ಣನ ಮಾತು ಒಳಗೊಳಗೇ ಇಂಗಿಕೊಕೆಳ್ಳುತ್ತಿತ್ತು. ದೀರ್ಘ ನಿಶ್ವಾಸದಿಂದ ಎದೆ ನಿಧಾನವಾಗಿ ಕೆಳಗಿಳಿಯುತ್ತಿತ್ತು.

"ಅದೇನೊ ದಾನ ಎಂದಿ ?"

"ಆಯ್ಯೊ ಆ ದಾನದ ಮುಂಡಾಮೋಚ್ತು. ನಮ್ಮಂಥ ಬಡವರಿಗೇನಾದ್ರೂ ದಾನ ಇದ್ರೆ ನಾಲ್ಕು ಮೊಳ ಮಣ್ಣು ದಾನ ಅಷ್ಟೆ."

ಎಂದು ಕಲ್ಲಣ್ಣ ನೀರವವಾದ.

ಯಾರೂ ಮಾತನಾಡಲಿಲ್ಲ. ಗಾಢ ಮೌನ ಇಬ್ಬರಲ್ಲೂ ಗಂಭೀರವಾಗಿ ಬಿಡಾರ ಹೂಡಿತು. ಕಣ್ಣುಗಳಲ್ಲಿ ಅದೇ ತೀಕ್ಷ್ಣತೆ, ಅದೇ ಹುಡುಕು ನೋಟ.

ದುಡಿಯುವ ವರ್ಗಕ್ಕೆ ಸೇರಿದ್ದ ಅವರಿಬ್ಬರೂ ಇನ್ನೇನನ್ನೂ ಕಳೆದುಕೊಂಡಿದ್ದಿಲ್ಲ, ತಮ್ಮ ಬೇಡಿಗಳನ್ನು ಮಾತ್ರ.

"ಹೀಂಗೆ ಕುಂತ್ರೆ ಹೆಂಗಾದೀತು ಮಲ್ಲೇಶಿ, ನಡಿ ಏಳು...."

ಎಂದ ಕಲ್ಲಣ್ಣ, ಆತ ಏಳುತ್ತಲೇ ಮಲ್ಲೇಶಿಗೆ ಹೇಳಿದ:

"ಜೋಬಿನಲ್ಲಿ ಒಂದಿಷ್ಟು ಕಾಸು ಐತೆ. ಹೊಟ್ಟೆಗೆ ಒಂದಿಷ್ಟು ಏನನ್ನಾದರೂ ಸೇರಿಸೋಣ. ಆಮೇಲೆ ಮುಂದೆ ನೋಡಿಕೊಂಡರಾಯ್ತು."

ಮಲ್ಲೇಶಿಯ ರೆಟ್ಟೆಗೆ ಕೈಹಾಕಿ ಕಲ್ಲಣ್ಣ ಮೇಲೆಬ್ಬಿಸತೊಡಗಿದ.

"ನನಗೇನೂ ತಿಳೀದು ಕಲ್ಲಣ್ಣ. ನಾನು ಹಳ್ಳೀಯವನು. ಮುಂದೆ ದಾರಿ ಕಾಣೋದಿಲ್ಲ."

"ಕೊನೇವರೆಗೂ ಹೀಗೆ ಇದ್ದೀತಾ?" ನಡೀ ಹೋಗೋಣ. ದಾರಿ ಕಾಣೋದಿಲ್ಲ, ನಿಜ. ಹುಡುಕಬೇಕು."

ಮಲ್ಲೇಶಿ ನಿಧಾನವಾಗಿ ಎದ್ದ.

ಇಬ್ಬರೂ ಕೈಯಲ್ಲಿ ಕೈಹಾಕಿದರು—ಬಂಧುಗಳಂತೆ.

ಮಲ್ಲೇಶಿಗೂ ಹಾಗೇ ಅನ್ನಿಸಿತು. ಸೋತವರಿಬ್ಬರೂ ಒಂದಾದಾಗ, ಅಳಿದ ಆಶೆಗಳ ಮಣ್ಣಿನ ಮಕ್ಕಳಿಬ್ಬರು ಒಂದಾದಾಗ ಮೈಯಲ್ಲಿ ಬಲಬಂದಂತಾಗಿತ್ತು.

ಇಬ್ಬರೂ ಮೇಲೆದ್ದು ನಿಂತರು. ಅವರ ಕಣ್ಣುಗಳಲ್ಲಿ ಶಕ್ತಿ ತುಂಬಿತ್ತು. ಅವು ತೀಕ್ಷ್ಣವಾಗಿ ಸುತ್ತಲೂ, ಕಾಲಕೆಳಗೂ ನೋಡಿದವು, ಹುಡುಕಾಡಿದವು. ಮನಸಿನ ಮಾತು ನುಡಿಯಾಗಿ ಹೊರಬರದಿದ್ದರೂ ಅಲ್ಲಿ ಧ್ವನಿಸುತ್ತಿತ್ತು.

"ಕೊನೇ ವರೆಗೂ ಹೀಗೆ ಇದ್ದೀತಾ?

....ದಾರಿ ಕಾಣೋದಿಲ್ಲ ನಿಜ, ಹುಡುಕಬೇಕು. ಭೂಮಿ ಬೇಕಾದಷ್ಟು ವಿಶಾಲವಾಗಿದೆ. [ಯಾರಪ್ಪನದೂ ಅಲ್ಲ, ಎಲ್ಲ ಮಕ್ಕಳದೂ ಹೌದು.] ಬದುಕೋದಕ್ಕಾಗೇ ಭೂಮಿ ಇರೋದು.

"....ದಾರಿ ಕಾಣೋದಿಲ್ಲ, ನಿಜ. ಬಂಡೆಗಲ್ಲು ತುಂಬಿವೆ, ಮುಳ್ಳುಗಂಟೆಗಳು ತುಂಬಿವೆ, ಬಂಡೆಗಳನ್ನು ಸೀಳಬೇಕು, ಮುಳ್ಳುಗಂಟೆಗಳನ್ನು ಸವರಬೇಕು. ಆ ಮೇಲೆ ಜೀವನವನ್ನಾರಂಭಿಸಬೇಕು...."

ಅದಕ್ಕಾಗಿ ಅವರ ಕಣ್ಣುಗಳು ಹುಡುಕುತ್ತಿದ್ದವು, ಅವರು ಕಳೆದುಕೊಂಡಿದ್ದ

—ಸುತ್ತಿಗೆ, ಕುಡುಗೋಲುಗಳನ್ನು!

ಒಂದು ಮುಖ್ಯ ಮನವಿ

'ಜನಶಕ್ತಿ' ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಪ್ರತಿ ವಾರವೂ ಅನೇಕ ಪತ್ರಗಳು, ಲೇಖನಗಳು ಬರುತ್ತಿವೆ. ಪ್ರತಿಯೊಂದು ವಿಷಯವೂ ಪ್ರಕಟವಾಗಬೇಕೆಂದೇ ನಮ್ಮಿಚ್ಛೆಯಿರುವದರಿಂದ ಸುದ್ದಿ ಕಳುಹಿಸುವವರಿಗೆ ದಯವಿಟ್ಟು ನಿಮ್ಮ ಸುದ್ದಿಗಳನ್ನು, ಪತ್ರಗಳನ್ನು ಚೊಕ್ಕಟವಾಗಿ ಯಾವ ಕಾರಣದಿಂದಲೂ ವಿಸ್ತರಿಸದೆ ವಿಷಯದ ಅಗತ್ಯಕ್ಕೆ ತಕ್ಕಂತೆ, ಸ್ವಲ್ಪದರಲ್ಲಿ ಬರೆದು ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ. ನಿಮ್ಮೊಂದಿಗೆ ಇನ್ನೂ ಹಲವು ಕಡೆಯ ಸುದ್ದಿಗಳು ಪ್ರಕಟವಾಗಬೇಕೆಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ಅದಕ್ಕಾಗಿ ಎಷ್ಟು ಸಾಧ್ಯವೋ ಅಷ್ಟು ಚಿಕ್ಕದಾಗಿ ಬರೆದು ಕಳುಹಿಸಿ.

—ಸಂ.

ಕೇರಳದ ದುರ್ಘಟನೆಗಳಿಗೆ ಕಾರಣರಾರು ?

(೩ನೇ ಪುಟದಿಂದ)

ಚಂದನತೋಪು ಗೋಲೀಬಾರಿನ ಬಗ್ಗೆ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತ ಆರ್. ಎಸ್. ಪಿ. ನಾಯಕ ಶ್ರೀಕಂಠನ್ ನಾಯರ್‌ರವರು ರಾಜಕೀಯವಾಗಿ ಗೋಲೀಬಾರು ಆರ್.ಎಸ್.ಪಿ. ಕೆಲಸಗಾರರಿಂದ ಆದದ್ದು ಮತ್ತು ಇದು ವಿದ್ಯಾರ್ಥಿ ಚಳವಳಿಯ ಬಗ್ಗೆ ಅವರಿಗಿರುವ ಸೌಹಾರ್ದವನ್ನು ತೋರಿಸುತ್ತದೆ.

ಈ ಹೇಳಿಕೆಗಳೇ ಚಂದನತೋಪು ಹೋರಾಟದ ಹಿಂದಿದ್ದ ರಾಜಕೀಯ ಉದ್ದಿಶ್ಯವು ಸ್ಪಷ್ಟವಾಗುತ್ತದೆ.

ಆರ್.ಎಸ್.ಪಿ. ನಾಯಕರಿಗಾಗಲಿ ಅಥವ ಇತರೇ ವಿರೋಧ ಪಕ್ಷಗಳಿಗಾಗಲೀ ಗೋಲೀಬಾರಿನಿಂದ ಖೇದವಾಗಿಲ್ಲ. ಕಮ್ಯೂನಿಸ್ಟ್ ಸರಕಾರ ಗೋಲೀಬಾರು ಮಾಡುವಂತೆ ಮಾಡಿದ್ದಕ್ಕಾಗಿ ಅವರಿಗೆ ಸಂತೋಷವಾಗಿದೆ. ಸರಕಾರದ ಪೋಲೀಸು ನೀತಿಗೆ ಅಪಜಯವಾಗಿದೆಯೆಂದು ಅವರು ಭಾವಿಸಿದ್ದಾರೆ. ಅವರು ಈ ನೀತಿಯನ್ನು ಪರಾಭವಗೊಳಿಸುವುದರಲ್ಲಿ ಯಶಸ್ವಿಯಾಗಿದ್ದಲ್ಲಿ ಅದು ಕಮ್ಯೂನಿಸ್ಟ್ ಪಾರ್ಟಿಗೆ ಮಾತ್ರವೇ ಸೋಲಲ್ಲ, ಇಡೀ ಕಾರ್ಮಿಕ ವರ್ಗಕ್ಕೆ, ಜನತೆಗೆ ಮತ್ತು ಕೇರಳದಲ್ಲಿ ಪ್ರಜಾಪ್ರಭುತ್ವಕ್ಕೆ ಸೋಲಾದಂತೆ ಆಗುತ್ತದೆ.

ಬಹುತೇಕ ಕಾರ್ಮಿಕರು ಮತ್ತು ಕೇರಳದ ಪ್ರಜಾಪ್ರಭುತ್ವ ಜನತೆ ಇದನ್ನು ಅರಿತಿದ್ದಾರೆ. ಆದ್ದರಿಂದಾಗಿಯೇ ಈ ಘಟನೆಯ ಬಗ್ಗೆ ತಮ್ಮ ಅಸಮ್ಮತಿಯನ್ನು, ವಿಷಾದವನ್ನು ವ್ಯಕ್ತಪಡಿಸಿ, ಸರಕಾರಕ್ಕೆ ಬೆಂಬಲ ನೀಡಿದ್ದಾರೆ. ಆರ್.ಎಸ್.ಪಿ. ಯ ಪ್ರಚೋದಕರ ಕೃತ್ಯವನ್ನು ಖಂಡಿಸಿದ್ದಾರೆ.

ಈ ಘಟನೆಯ ನಂತರ ಅನೇಕ ಕಾರ್ಮಿಕರು ಆರ್.ಎಸ್.ಪಿ. ಸಂಘಕ್ಕೆ ರಾಜೀನಾಮೆ ಇತ್ತು ಹೊರಬರುತ್ತಿದ್ದಾರೆ. ಕ್ವಿಲಾನ್ ಜಿಲ್ಲೆಯ ಕಲ್ಲು ಕಡವು ಗೇರುಬೀಜ ಕಾರ್ಖಾನೆಯಿಂದ ೨೬೫ ಕೆಲಸಗಾರರು ಆರ್. ಎಸ್. ಪಿ. ಸಂಘಕ್ಕೆ ರಾಜೀನಾಮೆ ಇತ್ತಿದ್ದಾರೆ.

ವಿದ್ಯಾರ್ಥಿ ಚಳವಳಿ— ಕಮ್ಯೂನಿಸ್ಟ್ ಪಾರ್ಟಿ ಹೇಳಿಕೆಯ ಸಾರಾಂಶ

ವಿದ್ಯಾರ್ಥಿ ಚಳವಳಿಯ—ಪ್ರಶ್ನೆಯು ಇತ್ಯರ್ಥವಾಗಿರುವುದನ್ನು ಕೇರಳ ಕಮ್ಯೂನಿಸ್ಟ್ ಪಕ್ಷವು ಸ್ವಾಗತಿಸುತ್ತದೆ.

ವಿದ್ಯಾರ್ಥಿಗಳ ಒಂದು ವಿಭಾಗವು ನಡೆಸುತ್ತಿದ್ದ ಚಳವಳಿ ಜನತೆಯಲ್ಲಿ ಕಳವಳ ಉಂಟುಮಾಡಿದ್ದಿತು; ಅದು ಇತ್ಯರ್ಥವಾಗಿ ಹಿಂತೆಗೆಯಲ್ಪಟ್ಟಿರುವುದರಿಂದ ಕಮ್ಯೂನಿಸ್ಟ್ ಪಾರ್ಟಿಯು ಹರ್ಷಗೊಂಡಿದೆ. ಕೇರಳ ಸರ್ಕಾರವು ಉದಾರತೆಯಿಂದ ಮುಂದೆ ಬಂದು ಅನೇಕ ರಿಯಾಯಿತಿಗಳನ್ನಿತ್ತಿದೆ.

ಆದರೆ ಕೆಲವು ಮಂದಿ ಈ ವಿವಾದ ಇತ್ಯರ್ಥವನ್ನು ಕಮ್ಯೂನಿಸ್ಟ್ ಸರಕಾರಕ್ಕೆ ಆದ ಸೋಲು, ಕಮ್ಯೂನಿಸ್ಟ್ ಪಾರ್ಟಿಯ ಕತೆ ಮುಗಿಯಿತು ಎಂದು ಹೇಳುತ್ತಿರುವುದು ವಿಷಾದಕರವಾಗಿದೆ. ಇದನ್ನು ನಾವು ಕಮ್ಯೂನಿಸ್ಟ್ ಪಾರ್ಟಿಯ ಅಥವ ಕೇರಳ ಸರ್ಕಾರದ ಬಲಹೀನತೆಯೆಂದು ಭಾವಿಸುವುದಿಲ್ಲ.

ವಿದ್ಯಾರ್ಥಿ ಚಳವಳಿಯ ಬೆಂಬಲವಾಗಿದ್ದ ನಾಯಕರುಗಳು ಹಿಂದೆ ಕುಟ್ಟನಾಡಿನ ವಿದ್ಯಾರ್ಥಿಗಳು ಒಂದಾಣೆ ರಿಯಾಯಿತಿ ಪಡೆದಿದ್ದಾರೆಂದು, ಅದನ್ನು ಕೊಟ್ಟ ಹೊರತು ಹೋರಾಟ ಹಿಂತೆಗೆದುಕೊಳ್ಳಲಾಗುವುದೆಂದು ಪ್ರಚಾರ ಮಾಡುತ್ತಿದ್ದರು. ಈ ಪ್ರಶ್ನೆಯನ್ನು ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಿ ಇತ್ಯರ್ಥಗೊಳಿಸಬೇಕೆಂಬುದನ್ನು ಎಲ್ಲರೂ ಒಪ್ಪಿದ್ದಾರೆ.

ಚಳವಳಿಗಾರರು ಪೋಲೀಸರ ಅತ್ಯಾಚಾರ ನಡೆದಿದೆ, ದಬ್ಬಾಳಿಕೆ ತೀವ್ರವಾಗಿ ನಡೆದಿದೆ ಎಂದೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕೆಂದೂ ಹೇಳಿದ್ದಾರೆ. ತದ್ವಿರುದ್ಧವಾಗಿ ಚಳವಳಿಗಾರರು ಗಲಭೆ ನಡೆಸಿ, ಸರಕಾರದ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ನಷ್ಟವುಂಟು ಮಾಡಿದ್ದಾರೆಂದೂ, ಕಾನೂನು ಉಲ್ಲಂಘನೆಯಾಗಿದೆಯೆಂದೂ ತಿಳಿಸಿದೆ. ಈ ಬಗ್ಗೆಯೂ ಸಹ ನಿಷ್ಪಕ್ಷಪಾತವಾದ ವಿಚಾರಣೆ ನಡೆಯಲಿದೆ.

ಸರಕಾರವು ಪ್ರಶ್ನೆ ಇತ್ಯರ್ಥವಾಗುವವರೆಗೆ ಸ್ವತಃ ಮುಂದೆ ಬಂದು ಕುಟ್ಟನಾಡು ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ದೋಣಿಯಲ್ಲಿ ಪೂರ್ಣ ರಿಯಾಯಿತಿಯನ್ನು ಕೊಟ್ಟಿದೆ. ವಿದ್ಯಾರ್ಥಿಗಳ ಕಾನೂನು ವಿರೋಧಿ ಚಟುವಟಿಕೆಯಿಂದ ಸರಕಾರಕ್ಕೆ ಭಾರೀ ನಷ್ಟ ಸಂಭವಿಸಿದ್ದರೂ ಸಹ ಎಲ್ಲ ಪೋಲೀಸು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾಗಿದೆ. ಬಂಧಿತರೆಲ್ಲರ ಬಿಡುಗಡೆಯಾಗಿದೆ.

ಈ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ನೋಡಿದರೆ, ಚಳವಳಿಗಾರರು ಮತ್ತು ಅವರ ಬೆಂಬಲಿಗರಿಗೆ ಪ್ರಶ್ನೆಯ ಇತ್ಯರ್ಥ ಅಗತ್ಯವಿರಲಿಲ್ಲವೆಂಬುದು ಕಾಣಬರುತ್ತದೆ. ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರದ ವಿರುದ್ಧ ಚಳವಳಿ ನಡೆಸುವುದೇ ಉದ್ದೇಶವಾಗಿತ್ತೆಂದು ಸ್ಪಷ್ಟವಾಗುತ್ತದೆ.

ಈಗ ಗೌರವಯುತವಾದ ರೀತ್ಯ ಒಪ್ಪಂದವಾಗಿ ಶಾಂತಿಯುತವಾದ ವಾತಾವರಣ ಏರ್ಪಟ್ಟಿರುವುದರಿಂದ ಎಲ್ಲ ದೇಶಾಭಿಮಾನಿ ಮತ್ತು ಪ್ರಜಾಪ್ರಭುತ್ವವಾದಿಗಳು ಮುಂದೆ ಬಂದು ಈ ಚಳವಳಿಯಿಂದ ಉದ್ಭವಿಸಿರುವ ಮೂಲಭೂತ ಪ್ರಶ್ನೆಗಳನ್ನು ಗಂಭೀರವಾಗಿ ಪರ್ಯಾಲೋಚಿಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯು ಕೇಳಿಕೊಳ್ಳುತ್ತದೆ.

ಚಳವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ ಅತ್ಯಲ್ಪ

ಕುಟ್ಟನಾಡು ವಿದ್ಯಾರ್ಥಿಗಳಿಗೆ ದೋಣಿ ದರದಲ್ಲಿ ರಿಯಾಯಿತಿ ಬಗ್ಗೆ ನಡೆದ ಚಳವಳಿಯಲ್ಲಿ ಬಹುಮಂದಿ ವಿದ್ಯಾರ್ಥಿಗಳು ಭಾಗವಹಿಸಲಿಲ್ಲ. ಬೇಡಿಕೆ ಬಹಳ ಸುಲಭದ್ದಾಗಿತ್ತು. ಆದರೆ ಒಂದು ತಿಂಗಳ ಕಾಲದಲ್ಲಿ ಅದನ್ನು ರಾಜ್ಯಾದ್ಯಂತ ಹೋರಾಟದ ರೂಪುಗೊಟ್ಟು, ಭಾರತಾದ್ಯಂತ ಪ್ರಚಾರ ಮಾಡಲಾಯಿತು.

ಎಲ್ಲ ಕಮ್ಯೂನಿಸ್ಟೇತರ ಪಕ್ಷಗಳೂ ತಮ್ಮ ಬೆಂಬಲವಿತ್ತು ಅದನ್ನು ರಾಜಕೀಯ ಹಿತಕ್ಕಾಗಿ ಬಳಸಿದುವು. ಅನೇಕ ಖಾಸಗಿ ಶಾಲೆಗಳ ಮ್ಯಾನೇಜ್‌ಮೆಂಟು ಮತ್ತು ಕ್ಯಾಥೊಲಿಕ್ ಶಾಲೆಗಳ ವ್ಯವಸ್ಥಾಪಕರು ನೇರವಾಗಿ ಈ ಚಳವಳಿಯನ್ನು ಪ್ರಚೋದಿಸಿದರು. ಉಪಾಧ್ಯಾಯರುಗಳು ಕೆಲವರು ಬೇಕೆಂತಲೇ ವಿದ್ಯಾರ್ಥಿಗಳನ್ನು ಚಳವಳಿಯಲ್ಲಿ ಭಾಗವಹಿಸಲು ಹೊರಗಟ್ಟಿದರು.

ಆದರೂ ಚಳವಳಿಯಲ್ಲಿ ಭಾಗವಹಿಸಿದವರ ಸಂಖ್ಯೆ ಅಲ್ಪವಾಗಿತ್ತು. ರಾಜ್ಯದಲ್ಲಿ ೧೧,೦೦೦ ಶಾಲೆಗಳೂ ಮತ್ತು ೭೦ ಕಾಲೇಜುಗಳು ಇದ್ದು, ೩೦ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಚಳವಳಿಯಲ್ಲಿ ಭಾಗವಹಿಸಿದ ವಿದ್ಯಾಸಂಸ್ಥೆಗಳು ಶೇಕಡ ಹತ್ತು ಸಹ ಇರಲಿಲ್ಲ.

ತ್ರಿವೇಂದ್ರಂನಲ್ಲಿ ೫ ಲಕ್ಷ ವಿದ್ಯಾರ್ಥಿಗಳಿದ್ದರೂ ಚಳವಳಿಯಲ್ಲಿ ಭಾಗವಹಿಸಿದವರು ಕೇವಲ ೫೦೦ ಮಂದಿ. ಮೂರು ಕಾಲೇಜುಗಳು ಮತ್ತು ಕೆಲವು ಹೈಸ್ಕೂಲುಗಳು ಚಳವಳಿಯಲ್ಲಿ ಸೇರಿದ್ದುವು. ಕ್ವಿಲಾನ್‌ನಲ್ಲಿ ೬ ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಚಳವಳಿಯಲ್ಲಿ ಭಾಗವಹಿಸಿದ್ದವರ ಹೆಚ್ಚು ಸಂಖ್ಯೆಯೆಂದರೆ ೨೦೦೦. ಪಾಲಘಾಟ್‌ನಲ್ಲಿ ೨ ಲಕ್ಷ ವಿದ್ಯಾರ್ಥಿಗಳಿದ್ದರೂ ಭಾಗವಹಿಸಿದ್ದು ಇಲ್ಲಿಯೇ ಹೆಚ್ಚು ಅಂದರೆ, ೧೯೦೦.

ಕೊಟ್ಟಾಯಂ, ತ್ರಿಚೂರು ಮತ್ತು ಎರ್ನಾಕುಲಂಗಳಲ್ಲಿ ಚಳವಳಿಯಲ್ಲಿ ಭಾಗವಹಿಸಿದ್ದು ಕ್ರಿಶ್ಚಿಯನ್ ಆಡಳಿತೆಯಲ್ಲಿರುವ ಶಾಲಾ ವಿದ್ಯಾರ್ಥಿಗಳೇ ಹೆಚ್ಚಾಗಿದ್ದರು.

ಸಂಪಾದಕರಿಗೆ ಪತ್ರಗಳು

ಕೈಗಾರಿಕಾ ಸಚಿವರು ಖುದ್ದಾಗಿ ಗಮನಿಸಬೇಕು

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಆಡಳಿತ ವೈಖರಿಯ ಬಗ್ಗೆ ಅನೇಕ ದಂತ ಕತೆಗಳು ಹಲವಾರು ವರುಷಗಳಿಂದ ಕೇಳಿಬರುತ್ತಿದ್ದರೂ ಸರಕಾರ ಸಲ್ಲದ ಉತ್ತರಗಳಿಂದ ಜನರ ಕಣ್ಣಿಗೆ ಮಣ್ಣೆರಚುವ ಪ್ರಯತ್ನವನ್ನು ಮಾಡುತ್ತಲೇ ಇರುವುದು ಶೋಚನೀಯ.

ಇದು ಹೀಗೇ ಮುಂದೊರೆದರೆ ಪ್ರಾಂತ್ಯಕ್ಕೆ ಆದಾಯ ತರುವ ಈ ಪ್ರಮುಖ ಕೈಗಾರಿಕೆಗೆ 10 ವರುಷಗಳಲ್ಲಿ ಏಳಿಗೆಗೆ ಕುಂದು ಬರುವುದು ಖಂಡಿತ. ಇವುಗಳನ್ನು ಸಚಿವರು ಕೊಂಚ ಗಮನಿಸಿದರೆ ಒಳಿತು.

● ಸ್ವಜನ ಪಕ್ಷಪಾತ, ತಾಂತ್ರಿಕ ತಜ್ಞರ ಅಭಾವ, ಯಂತ್ರ ಸಲಕರಣೆಗಳ ಬಗ್ಗೆ ನಿರ್ಲಕ್ಷ್ಯ ಇವುಗಳಿಂದ ಉತ್ಪತ್ತಿಗೆ ತೀವ್ರ ಧಕ್ಕೆ ತಗಲಲಿದೆ.

● ಇಲ್ಲಿನ ಸಿಮೆಂಟ್ ಧೂಳಿಗಿಂತ ಕಡೆಯೆಂದು ಜನ ದೂರಿಕೊಳ್ಳುತ್ತಿದ್ದು ಒಂದು ವರುಷದಿಂದ ಅದರ ಉತ್ಪತ್ತಿ ಕಡಮೆಯಾಗಿದೆ.

● ಉತ್ತಮ ಕೆಲಸಗಾರರ ಉಪಯೋಗ ಪಡೆದುಕೊಳ್ಳದೆ ನಿರುಪಯೋಗೀ ಜನರನ್ನು ಅವರ ಮೇಲೆ ಅಧಿಕಾರಿಗಳನ್ನಾಗಿ ಹಾಕಿದ್ದರಿಂದ ಕೆಲಸದಸು ಗಮತಿ ಮಾಯವಾಗಿದೆ.

● ಆಡಳಿತ ವರ್ಗದ ವರಿಷ್ಠಾಧಿಕಾರಿ ಈ ಬಗ್ಗೆ ತೆಗೆದುಕೊಂಡ ಕ್ರಮ ಯಾರಿಗೂ ಅರ್ಥವಾಗಿಲ್ಲ.

● ಕಾರ್ಮಿಕವರ್ಗವನ್ನು ವಿಶ್ವಾಸಕ್ಕೆ ತಗೆದುಕೊಂಡು ಅವರ ದುಡಿಮೆಗೆ ತಕ್ಕ ಪ್ರತಿಫಲ ಕೊಟ್ಟು ಕಾರ್ಖಾನೆಯನ್ನು ಬೆಳೆಸುವ ಮನೋಭಾವ ಅಧಿಕಾರಿಗಳಲ್ಲಿಲ್ಲ.

● **ಹೊಸತಾಗಿ ಶುರುವಾಗಿರುವ ತಿರುಗುಣಿ ಕೊಳಾಯಿಯಲ್ಲಿ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ೬ ತಿಂಗಳಿಗೆಂದು ನೇಮಿಸಲ್ಪಟ್ಟ ಜರ್ಮನ್ ಇಂಜಿನಿಯರುಗಳು ೨ ವರ್ಷವಾದರೂ (ದಿನಕ್ಕೆ ಒಬ್ಬರಿಗೆ ೧೦೦ ರೂ. ಸಂಬಳ) ಇರುವರಲ್ಲದೆ ಉತ್ಪತ್ತಿಗೆ ನಿಗದಿಯಾದ ಹತ್ತಿರದಲ್ಲಿ ಒಂದು ಪಾಲೂ ಸಹ ಉತ್ಪತ್ತಿ ಇನ್ನೂ ಬರುತ್ತಿಲ್ಲವೆಂದರೆ ಯಾರಿಗೆ ತಾನೆ ಆಶ್ಚರ್ಯವಾಗದು ! ?**

ಶ್ರೀ ಜತ್ತಿಯವರು ಕೂಡಲೇ ಕಾರ್ಖಾನೆಯ ಆಡಳಿತದ ಕಡೆಗೆ ಗಮನ ಕೊಟ್ಟು ಈ ಸಲಹೆಗಳನ್ನು ಗಮನಿಸಲಿ !

1) ಒಬ್ಬ ವಿಶೇಷ ತಾಂತ್ರಿಕ ತಜ್ಞರನ್ನು ಉನ್ನತಾಧಿಕಾರಿಯಾಗಿ ನಿಯಮಿಸಲಿ. 2) ಕಾರ್ಮಿಕವರ್ಗವನ್ನೂ ಮುಖಂಡರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವರ ಸಮಸ್ಯೆಗಳ ನಿವಾರಣೆಗೆ ಯತ್ನಿಸಿ, ಪರಸ್ಪರ ಸಹಕಾರದಿಂದ ಕಾರ್ಖಾನೆಯ ಅಭಿವೃದ್ಧಿಗೆ ನೆರವಾಗಲಿ. 3) ಹಳೆಯ ಕುಪ್ರಸಿದ್ಧ ಸೋಮಾರಿ ಅಧಿಕಾರಿಗಳನ್ನು ತೆಗೆದುಹಾಕಿ ಹೊಸಬರನ್ನೂ ದಕ್ಷರನ್ನೂ ಅವರ ಬದಲು ತರಲಿ. ಅಂದರೆ ಮಾತ್ರ ಕಾರ್ಖಾನೆಯ ಅಭಿವೃದ್ಧಿಯಾದೀತು.

"ವೀಕ್ಷಕ", ಭದ್ರಾವತಿ.

ನಿಮ್ಮ ಸಹಚರನಾಗೆ

(೫ನೇ ಪುಟದಿಂದ)

ಕೈವಾಡವೇ ಇಂದಿಲ್ಲಿ ನಡೆಯುವ ಹೋರಾಟಗಳು. ಕೆಥೋಲಿಕ್ ಮಠಾಧಿಪತ್ಯದ ಸಂರಕ್ಷಣೆಯೇ ಈ ಹೋರಾಟಗಳ ಹಿಂದೆ ಅಡಗಿರುವ ಉದ್ದೇಶ. ಆರ್.ಎಸ್.ಪಿ ಯೂ ಪಿ.ಎಸ್.ಪಿ.ಯೂ ಇಲ್ಲಿನ ಕಾಂಗ್ರೆಸ್ಸಿನೊಂದಿಗೆ ಸೇರಿದೆ ಎಂದರೆ, ಮೂರು ತೀವ್ರ ನಿರಾಶೆಗಳು ಒಂದುಗೂಡಿವೆ ಎಂದು ನನಗೆ ತೋರುತ್ತದೆ. ಸೀತಾರಾಂ ಗಿರಣಿಯ ಸಮರದಲ್ಲೂ ಪಳಿಂಗುನ್ನಿನ ಕುಬೇರ ಪುತ್ರರ ಒಂದಾಣೆ ಸಮರದಲ್ಲೂ ಚಂದನ ತೋಪಿನ ಗೋಳಿಬಾರು ಸಮರದಲ್ಲೂ ಈ ನಾಡಿನಲ್ಲಿ ನಡೆಯುವ ಎಲ್ಲ ಸಮರಗಳಲ್ಲೂ ಕೇಳಿಬರುವ ಬೊಬ್ಬೆ ಒಂದೇ: ನಿರಾಶೆಯಿಂದ ಹುಟ್ಟಿರುವ ಗಲಭೆ !

ಸತ್ಯದಲ್ಲಿ ಆಸಕ್ತಿಯಾಗಲಿ ನಾಚಿಕೆಯ ವಾಸನೆಯಾಗಲಿ ಇರುವವನಿಗೆ, ತಂದೆಯೂ ತಾಯಿಯೂ ಇರುವವನಿಗೆ, ಅಕ್ಕ ತಂಗಿಯರು ಇರುವವನಿಗೆ, ಮನುಷ್ಯನಾಗಿ ಇರುವವನಿಗೆ, ಮನುಷ್ಯನಾಗಿ ಹುಟ್ಟಿರುವವನಿಗೆ ಯೋಚನೆ ಮಾಡಲು ಕೂಡ ಸಾಧ್ಯವಿಲ್ಲದಂಥ ಘೋಷಣೆಗಳನ್ನು ಬೀದಿಗಳಲ್ಲಿ ಬೊಬ್ಬಿಡುವವರ ಹೃದಯದಲ್ಲಿ ಒಂದು ಏಕನಾದ ಮಿಡಿಯುತ್ತಿದೆ: ಕಮ್ಯೂನಿಸ್ಟರನ್ನು ಸಂಹಾರ ಮಾಡಿ ಕೆಥೋಲಿಕ್ ಮಠಾಧಿಪತಿಗಳ ಸ್ವಾರ್ಥವನ್ನು ಸಂರಕ್ಷಿಸಬೇಕು ಎಂಬ ಆಗ್ರಹ! ಇಲ್ಲ, ಕಾಂಗ್ರೆಸ್ಸಿಗರೇ, ಅದು ನಡೆಯಲಾರದು. ಆರ್.ಎಸ್.ಪಿ. ಯವರಲ್ಲೂ ಪಿ.ಎಸ್.ಪಿ.ಯವರಲ್ಲೂ ನಾನು ಏನೂ ಹೇಳುವುದಿಲ್ಲ. ಕೇರಳದ ಕಣ್ಣುಗಳು ತೆರೆದಿವೆ.

ಇಂದು ಇಲ್ಲಿನ ಸಾಧಾರಣದವನು ಸರಿಯಾವುದು ತಪ್ಪು ಯಾವುದೆಂದು ತಿಳಿದುಕೊಳ್ಳುವ ಶಕ್ತಿಹೊಂದಿದ್ದಾನೆ; ಅವನು ಬುದ್ಧಿವಂತನಾಗಿದ್ದಾನೆ. ಯಾವುದೊಂದು ಘಟನೆಯ ಅಥವ ಹೋರಾಟದ ಹಿಂದೆ ಅವಿತಿರುವ ನಿಜವಾದ ಕಾರಣವೇನು ಎಂದು ತಿಳಿದುಕೊಳ್ಳುವ ಶಕ್ತಿ ಅವನಿಗೆ ಇದೆ.

ಜನರ ಭಾಗಕ್ಕೆ ಬನ್ನಿ

ಆದುದರಿಂದ ಕಾಂಗ್ರೆಸಿಗರೇ! ನೀವು ನಷ್ಟಹೊಂದಿರುವ ಸ್ಥಾನವನ್ನೂ ಗೌರವವನ್ನೂ ತಿರುಗಿ ಪಡೆದು ಕೇರಳದ ಮುಂದೆ ತಲೆ ಎತ್ತಿ ನಿಲ್ಲಬೇಕು ಎಂಬ ಆಶೆ ನಿಮಗೆ ಇದ್ದರೆ, ಸತ್ಯಸಂಧತೆಯಿಂದ ಜನರ ಭಾಗಕ್ಕೆ ತಿರುಗಿ ಬನ್ನಿರಿ. ಅದಲ್ಲ, ಈಗಿನ ದಾರಿಯಲ್ಲೆ ಮುಂದರಿಯುವ ಆಗ್ರಹ ನಿಮಗೆ ಇದ್ದರೆ, ಅಯ್ಯೋ ಕಷ್ಟ!–ಎಂದು ಮಾತ್ರ ನಿಮ್ಮ ಬಗೆಗೆ ನಾನು ಹೇಳಬಲ್ಲೆ.

ನನ್ನ ಮಟ್ಟಿಗೆ ಹೇಳುವುದಾದರೆ, ನಿಮ್ಮ ಈ ದಾರಿಯಲ್ಲಿ ನಿಮ್ಮೊಂದಿಗೆ ನಡೆಯಲು ನನ್ನಿಂದಾಗದು. ಅದರಲ್ಲಿ ನಾನು ನಿಮ್ಮ ಸಹಚರನಾಗಲಾರೆ !

ರೈತ ಸಮಸ್ಯೆ ಪರಿಹಾರಕ್ಕೆ ರೈತರೇ ಎಚ್ಚರಾಗಬೇಕು

ಹುಕ್ಕೇರಿ: ಈ ತಾಲೂಕಿನಲ್ಲಿ ರೈತರಿಗೆ ತಗಾವಿ ಸಾಲ ಸಿಗದೆ ತುಂಬಾ ತೊಂದರೆಯಾಗಿದೆ. ಭಾವಿಯ ಸಲುವಾಗಿ ಮಂಜೂರಾದ ಸಾಲದ ಎರಡನೇ ಮತ್ತು ಮೂರನೇ ಕಂತುಗಳ ಹಣ ರೈತರ ಕೈ ಸೇರದೆ ಮಳೆಗಾಲದ ಮೊದಲೇ ಆಗಬೇಕಾಗಿದ್ದ ಭಾವಿಗಳ ಕೆಲಸವಾಗದೆ ರೈತರು ನಷ್ಟಕ್ಕೀಡಾಗಿದ್ದಾರೆ. ಹೊಸ ತಗಾಯಿಗಾಗಿ ರೈತರು ಹುಕ್ಕೇರಿಗೆಡತಾಕಿ ರೈತರು ಮತ್ತಿಷ್ಟು ಖರ್ಚಿಗೀಡಾಗಿದ್ದಾರೆ. ಇದರಿಂದಾಗಿ ರೈತವರ್ಗದಲ್ಲಿ ತೀವ್ರ ಅಸಂತುಷ್ಟಿ ಬೆಳೆಯುತ್ತಿದ್ದು ತಹಶೀಲ್‌ದಾರರು ಇನ್ನಾದರೂ ಈ ಕಡೆಗೆ ಗಮನ ಕೊಡಬಹುದೆಂದು ಆಶಿಸಲಾಗಿದೆಯಲ್ಲದೆ ಇಂಥವನ್ನೆಲ್ಲ ಎದುರಿಸಲು ರೈತ ಸಂಘಟನೆಯ ಯೋಚನೆ ನಡೆಯುತ್ತಿದೆ.

ಹೆರಿಬೆಟ್ಟು:- ತಾ|| 30-7-58ರಂದು ಈ ಗ್ರಾಮದ ಬೈರಂಜೆ ಶಾರದಾ ಎಲಿಮೆಂಟರಿ ಶಾಲೆಯಲ್ಲಿ ಬಾಳಗಟ್ಟ ರಾಮಚಂದ್ರಭಟ್ಟರ ಅಧ್ಯಕ್ಷತೆಯಲ್ಲಿ ರೈತರ ಸಭೆ ನಡೆಯಿತು.

ಸಭೆಯಲ್ಲಿ ರಶೀದಿಕೊಡುವವರ ವರ್ತನೆಯನ್ನು ಖಂಡಿಸಿ 3ಗೇಣಿ ಚೀಟಿಗಳನ್ನು ಕೊಡಬೇಕೆಂದಿದ್ದರೂ ಕೆಲವು ಧನಿಗಳು ಹಾಗೆ ಮಾಡದೆ 2ಗೇಣಿ ಚೀಲಗಳಲ್ಲಿ ಮಾತ್ರ ಹೆಬ್ಬೆಟ್ಟು ತೆಗೆದುಕೊಂಡಿರುವದಾಗಿಯೂ ಇನ್ನೊಂದರಲ್ಲೇನಿದೆ ಎಂಬುದು ತಮಗೆ ತಿಳಿಯದೆಂದೂ ವಿಷಾದ ವ್ಯಕ್ತಪಡಿಸಲಾಯಿತು. ಸರಕಾರ ಕಾನೂನು ಮಾಡಿದಾಗ ಅದನ್ನು ಜಾರಿಯಲ್ಲಿ ತರುವುದು, ತರುವಂತೆ ಮಾಡುವುದು ಜನರ ಕರ್ತವ್ಯವೆಂದೂ ರೈತರು ಹೆಚ್ಚು ಜಾಗೃತರಾಗಬೇಕೆಂದೂ ಕರೆ ಕೊಡಲಾಯಿತು.

ಇದೇ ಸಂಬರ್ಭದಲ್ಲಿ ಹಳೇ ವಿದ್ಯಾರ್ಥಿಗಳ ಸಭೆ ನಡೆದು ಅವರು ಕೂಡಾ ಈ ಕಡೆಗೆ ಗಮನ ಕೊಡಬೇಕೆಂದು ಕೇಳಿಕೊಳ್ಳಲಾಯಿತು.

ಪಡುತೋನ್ಸೆ: ಈ ಗ್ರಾಮದ ಸಭೆಯು ಕೆಮ್ಮಣ್ಣಿನಲ್ಲಿ ತಾ|| 2—8—58 ರಂದು ಪೊಮ್ಮಯ್ಯಶೆಟ್ಟರ ಅಧ್ಯಕ್ಷತೆಯಲ್ಲಿ ನಡಿಯಿತು.

ಸಕಾಲದಲ್ಲಿ ಮಳೆಯಾಗದೆ ನಂತರ ಆದ ವಿಪರೀತ ಮಳೆಯಿಂದಾದ ನಷ್ಟದ ಬಗ್ಗೆ ಗೇಣಿ ರಿಯಾಯಿತಿ ಮಾಡಬೇಕೆಂದು ಸಹಿ ಸಂಗ್ರಹಿಸಿ ಅರ್ಪಿಸಿದ ಮನವಿಯ ಬಗ್ಗೆ ಸರ್ಕಾರ ಉಚಿತ ಕ್ರಮ ಕೈಕೊಳ್ಳಬೇಕೆಂದು ಒತ್ತಾಯ ಮಾಡಲಾಯಿತು.

ಉಡುಪಿ ತಾಲೂಕು ರೈತಸಂಘದ ಸಂಘಟಕರಾದ ಶ್ರೀ ಅನಂತಕೃಷ್ಣ ಐತಾಳರು ರೈತರ ಮೇಲೆ ನಡೆದ ಶೋಷಣೆಯ ದುಸ್ಥಿತಿಯನ್ನು ತೊಲಗಿಸಲು ರೈತಸಂಘವನ್ನು ಬಲಪಡಿಸಿ ಚಳುವಳಿ ನಡೆಸದಿದ್ದರೆ ರೈತರಿಗೆ ಮುಕ್ತಿಯಿಲ್ಲವೆಂದು ಘೋಷಿಸಿದರು.

ಗೂಳೂರು: ಸ್ಥಳೀಯ ಶ್ರೀ ವೆಂಕಟರಮಣ ಶೆಟ್ಟಿಯವರ ಜಮೀನಿನಲ್ಲಿ ರೈತರುಗಳಾದ ಶ್ರೀ ಬಿಸ್ಮಗಂಗಪ್ಪ, ಬೆಳ್ಳೂರು ಪರಸಿಂಹನ್, ಕೋಟೆ ನಾರಾಯಣಪ್ಪ ಎಂಬವರು ಇಟ್ಟಿದ್ದ ರಾಗೀ ಬೆಳೆಯ ಫಸಲಿನಲ್ಲಿ ಶಾಸನದ ಪ್ರಕಾರ 1/3 ಭಾಗವನ್ನು ಜಮೀನ್ದಾರರಿಗೆ ಕೊಡಲು ಹೋದಾಗ ಅವರು ½ ಬೇಕೆಂದು ತಕ್ರಾರು ಮಾಡಿದರು. ಆದರೆ ಪಂಚಾಯಿತಿ ಮಾಡಲಾದ ಒಪ್ಪಂದಕ್ಕೆ ಕೊನೆಗೆ ಬಂದಿದ್ದರು. ಆದರೆ ಸ್ಥಳೀಯ ಕಾಂಗ್ರೆಸ್ಸಿಗರಾದ ಗೋವಿಂದ ಶೆಟ್ಟಿ ರತ್ನಮಯ್ಯ ಶೆಟ್ಟಿ ಮುಂತಾದವರು ಮಧ್ಯೆ ಪ್ರವೇಶಿಸಿ, ಕಿತಾಪತಿ ಮಾಡಿ ಫಸಲನ್ನು ಅಮಾನತ್ತು ಮಾಡಬೇಕೆಂದು ಅಮಲ್ದಾರ್‌ರಿಂದ ಆರ್ಡರ್ ಮಾಡಿಸಿರುತ್ತಾರೆ.


ತಾ|| 5—8—58 ರಂದು ಗೂಳುರು ರೈತಸಂಘದ ಸಭೆ ನಡೆದು ಕಾಂಗ್ರೆಸ್ಸಿಗರ ಈ ವಿರೋಧಿ ನೀತಿಯನ್ನು ಖಂಡಿಸಿ ಕಾನೂನು ರೀತ್ಯಾ ರೈತರಿಗೆ ಸಲ್ಲಬೇಕಾದ ಗೇಣಿ ಕೊಡಿಸಲು ಒತ್ತಾಯ ಮಾಡಿತು ಮತ್ತು ರೈತರೆಲ್ಲ ಒಗ್ಗಟ್ಟಾಗಿ ಸರ್ಕಾರದ ಕಾನೂನನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿತು.

ಕುಣಿಗಲ್ಲು: ಈ ತಾಲ್ಲೂಕು ಸಮಿತಿ ಮತ್ತು ರೈತ ಮುಂದಾಳು ಕೆ.ವಿ. ಕೃಷ್ಣಸ್ವಾಮಿ ಅವರುಗಳು "ಭೂಮಾಲೀಕರು ಕಾನೂನನ್ನು ಮೀರಿ ಬಡ ರೈತರ ಮೇಲೆ ಮೋಸ ದಬ್ಬಾಳಿಕೆಗಳನ್ನು ನಡೆಸುತ್ತಿದ್ದಾರೆ. ಭೂಮಾಲಿಕರನೇಕರು ಬೆಳೆಯ ಮೂರನೇ ಒಂದು ಭಾಗವೆಂಬ ಕಾನೂನೇ ಇಲ್ಲ ಎಂದು ಪ್ರಚಾರ ಮಾಡುತ್ತಿದ್ದಾರೆ. ಆದರೆ ಮೈಸೂರು ಸರ್ಕಾರದ ನಂ. ೯ ೧೮೭೨೦-L.S ೭೩-೫೪-೨೮ ನೋಟಿಫಿಕೇಷನ್‌ನಲ್ಲಿ ಇದು ಸ್ಪಷ್ಟವಾಗೇ ಇದೆ. ಇದನ್ನು ತಿಳಿದು ರೈತರು ಎಚ್ಚರಿಕೆ ವಹಿಸಬೇಕು" ಎಂದು ಕರೆ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಿಸಿ 6—8—1958 ರಂದು ರೈತರ ಭಾರೀ ಸಭೆ ನಡೆಯಿತು.

ಮೃತ ಹಮಾಲನ ಬಗ್ಗೆ ಪರಿಹಾರ ಬೇಕು

ಸಿದ್ದಾಪುರದ ಪ್ರಸಿದ್ಧ ವ್ಯಾಪಾರಿಗಳಾದ ಡಾ|| ಎಸ್. ಬ. ಶಹಾ ಇವರ ಅಂಗಡಿಯಲ್ಲಿ ಗಣಪತಿ ಘರಾಘಟಿ ಎಂಬ ಹಮಾಲನು ಜೋಳದ ಚೀಲಗಳನ್ನು ಹೇರಿಡುವಾಗ್ಗೆ ಚೀಲವೊಂದು ಮೈಮೇಲೆ ಬಿದ್ದು ಸ್ಥಳದಲ್ಲಿಯೇ ಮೃತನಾದನು. ಈ ದುರಂತದ ಬಗ್ಗೆ ಮಾಲಿಕರು ಒಂದಿಷ್ಟು ಕನಿಕರಪಡದ್ದರಿಂದ ಮೃತನ ಕುಟುಂಬಕ್ಕೆ ಪರಿಹಾರ ದೊರಕಿಸಿ ಕೊಡಲು ತೀವ್ರವಾಗಿ ಪ್ರಯತ್ನಿಸಲಾಗುತ್ತಿದೆ. ಪೋಲೀಸರಿಂದ ಪಂಚನಾಮೆ ಕಾರ್ಯವೂ ನಡೆದಿದೆ.

ಸತ್ತವನ ಕುಟುಂಬಕ್ಕೆ ಕೂಡಲೆ ಪರಿಹಾರ ನೀಡಬೇಕೆಂದು ಬಾಕೀ ಹಮಾಲರಲ್ಲಿ ಬಲವಾದ ಅಭಿಪ್ರಾಯ ಮೂಡಿದೆ.



ಮನೆಯಲ್ಲಿ ಬೀಡಿ ಕಟ್ಟಲು ಲೈಸೆನ್ಸ್ ಬೇಕಿಲ್ಲ!

ಉಡುಪಿ ಬೀಡಿ ಮಜೂರರ ವಿಜಯ

ಮನೆಯಲ್ಲಿ ಬೀಡಿ ಕಟ್ಟುವ ಬೀಡಿ ಮಜೂರರು ಲೈಸನ್ಸ್ ಪಡಕೊಳ್ಳಬೇಕೆಂಬುದಾಗಿ ಉಡುಪಿ ಮುನಿಸಿಪಾಲಿಟಿಯು ಇಲ್ಲಿಯ ಕೆಲವು ಬೀಡಿ ಮಜೂರರಿಗೆ ನೋಟಿಸು ಜಾರಿ ಮಾಡಿತ್ತು. ಈ ಪೈಕಿ ಪ್ರಥಮವಾಗಿ ಗೋಪಾಲ ಎಂ. ಪಾಲನ್ ಮತ್ತು ಕಿಟ್ಟಪೂಜಾರಿ ಎಂಬವರಿಬ್ಬರ ಮೇಲೆ ಉಡುಪಿ ಜುಡಿಶಿಯಲ್ ಸಬ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಮದ್ರಾಸ್ ಡಿಸ್ಟ್ರಿಕ್ಟ್ ಮುನಿಸಿಪಾಲಿಟಿ ಆಕ್ಟಿನ ೨೪೯ನೇ ಸೆಕ್ಷನ್ ಷೆಡ್ಯೂಲ್ ೫ರ ಮೇರೆಗೆ ಮುನಿಸಿಪಾಲಿಟಿಯ ನೋಟಿಫಿಕೇಶನಿನ ಪ್ರಕಾರ ೬ ರೂಪಾಯಿ ಕೊಟ್ಟು ಲೈಸನ್ಸು ಪಡಕೊಳ್ಳಲು ತಪ್ಪಿನ ಬಗ್ಗೆ ದಾವೆ ಹೂಡಲಾಗಿತ್ತು.

ಬೀಡಿ ಕಟ್ಟುವವರಿಂದ ಲೈಸನ್ಸು ಫೀಸು ವಸೂಲು ಮಾಡುವುದು ಸರಿಯಲ್ಲವೆಂದು ಉಡುಪಿ ತಾಲ್ಲೂಕು ಬೀಡಿ ಲೇಬರ್ ಯೂನಿಯನ್ ಆರೋಪಿಗಳ ಪರವಾಗಿ ಉಡುಪಿಯ ಅಡ್ವೋಕೇಟ್ ಶ್ರೀ ಎಂ. ಬಾಲಕೃಷ್ಣರಾಯರನ್ನು ವಾದಿಸಲು ಏರ್ಪಾಡು ಮಾಡಿತ್ತು. ಮುನಿಸಿಪಾಲಿಟಿಯ ಕಡೆಯಿಂದ ಮುನಿಸಿಪಾಲಿಟಿಯ ಕಾನೂನು ಸಲಹೆಗಾರರಾದ ಶ್ರೀ ಎನ್. ವಿ. ಕಾಮತರು ವಾದಿಸಿದ್ದರು.

ಸದ್ರಿ ಮೊಕದ್ದಮೆಯ ವಿಚಾರಣೆ ನಡೆದು ತಾ|| 30—7—58ರಂದು ಮೆಜಿಸ್ಟ್ರೇಟರು ತೀರ್ಪಿತ್ತರು. ಮೆಜಿಸ್ಟ್ರೇಟರರು ತಮ್ಮ ತೀರ್ಪಿನಲ್ಲಿ ಆರೋಪಿಗಳು ಪಾಸುಪುಸ್ತಕದ ಮೂಲಕ ಬೀಡಿ ಕಟ್ಟುವವರೆಂದೂ ಅವರು ಬೀಡಿ ಕಟ್ಟಿಸುವವರಲ್ಲವೆಂದೂ ಸಾಕ್ಷಿ ಮತ್ತು ಪುರಾವೆಗಳ ಮೂಲಕ ಸ್ಪಷ್ಟವಾಗಿದೆಯೆಂದೂ ಮುನಿಸಿಪಾಲಿಟಿಯ ನೋಟಿಫಿಕೇಶನಿನ ಪ್ರಕಾರ ಬೀಡಿ ಕಟ್ಟಿಸುವವರು ಲೈಸನ್ಸು ಪಡಕೊಳ್ಳಬೇಕಾಗುವುದೆಂದೂ ಹೇಳಿ ಆರೋಪಿಗಳನ್ನು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸೆಕ್ಷನ್ ೨೪೫ (೧)ರ ಪ್ರಕಾರ ಬಿಡುಗಡೆ ಮಾಡಿರುವರು.

ಬೀಡಿ ಮಜೂರರ ಸಭೆ

ಕುಣಿಗಲ್ ಬೀಡಿ ಕೆಲಸಗಾರರ ಸಭೆಯು 5—8—58 ರಂದು ಸಂಘದ ಉಪಾಧ್ಯಕ್ಷರಾದ ಶ್ರೀ ಹುಸೇನ್ ಷರೀಫ್‌ರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಕುಣಿಗಲ್ಲಿನ ಬೀಡಿ ಮಜೂರರಲ್ಲಿ ಅರ್ಧದಷ್ಟು ಸ್ತ್ರೀಮುಸ್ಲಿಂ ಮಹಿಳೆಯರು ಮತ್ತು ಅವರು ಘೋಷಾ ಪದ್ಧತಿಯಲ್ಲಿರುವವರಾಗಿದ್ದಾರೆ. ಫ್ಯಾಕ್ಟರಿ ಮಾಲೀಕರೆದುರು ಹೋಗಿ ಅವರು ತಮ್ಮ ಬೇಡಿಕೆಗಳನ್ನು ಕುಂದುಕೊರತೆಗಳನ್ನು ಹೇಳುವುದು ಸಾಧ್ಯವಿಲ್ಲ. ಈ ದೌರ್ಬಲ್ಯವನ್ನು ತಿಳಿದ ಮಾಲಿಕರು ಅವರಿಗೆ 12 ಆಣೆಗಳ ಬದಲು 10 ಆಣೆಗಳನ್ನು ಕೊಟ್ಟು ಶೋಷಿಸುತ್ತಿದ್ದಾರೆ. ಇದರ ನಿವಾರಣೆಗೆ ಅಸಿಸ್ಟೆಂಟ್ ಕಮಿಷನರ್ ಆಫ್ ಲೇಬರ್ ಇವರು ಲೇಡಿ ಇನ್ಸ್‌ಪೆಕ್ಟರುಗಳನ್ನು ಕಳುಹಿಸಿ ಅವರ ದುಸ್ಥಿತಿಯನ್ನು ಪರಿಶೀಲಿಸಬೇಕೆಂದೂ ಮಹಿಳಾ ಕೆಲಸಗಾರರ ಕುಂದುಕೊರತೆಗಳನ್ನು ಮಹಿಳಾ ಅಧಿಕಾರಿಗಳೇ ಬಂದು ಪರಿಶೀಲಿಸಬೇಕೆಂದೂ ಒತ್ತಾಯ ಹಾಕಲಾಯಿತು.

ಅಜಯ ಘೋಷ್, ಇ. ಎಂ. ಎಸ್. ಹೇಳಿಕೆ

(೪ನೇ ಪುಟದಿಂದ)

ಡಲು, ಸಹಕಾರದಿಂದ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗುವ ಮನೋಭಾವ ಉಂಟು ಮಾಡಲು ಯತ್ನಿಸುತ್ತಿವೆ. ಅನೇಕ ಭಾರಿ ವಿರೋಧ ಪಕ್ಷಗಳ ಸಹಕಾರವನ್ನು ಆಹ್ವಾನಿಸಲಾಗಿದೆ, ಎಂದು ಇ. ಎಂ. ಎಸ್.ರವರು ತಿಳಿಸಿದ್ದಾರೆ.

ಅಜಯ ಘೋಷ್‌ರವರು ತಮ್ಮ ಅಭಿಪ್ರಾಯ ವ್ಯಕ್ತಗೊಳಿಸುತ್ತ ನೆಹರೂರವರು ಏಕಪಕ್ಷೀಯವಾದ ಹೇಳಿಕೆಯನ್ನಿತ್ತಿದ್ದಾರೆ, ನೆಹರೂರವರು ವಿಶಿಷ್ಟವಾದ ಪ್ರಶ್ನೆಗಳ ಬಗ್ಗೆ ಯಾವುದನ್ನೂ ಹೇಳಿಲ್ಲ, ರಾಜ್ಯದಲ್ಲಿ ಪರಿಸ್ಥಿತಿ ಹದಗೆಟ್ಟಿದೆ ಎಂದು ನನಗನ್ನಿಸುವುದುದಿಲ್ಲ. ಇತರೇ ರಾಜ್ಯಗಳಲ್ಲೂ ಪರಿಸ್ಥಿತಿ ತೀವ್ರವಾಗಿದ್ದಾಗ ಪ್ರಧಾನ ಮಂತ್ರಿಗಳು ಹೇಳಿಕೆಯನ್ನೀಯಲಿಲ್ಲ. ಪ್ರಧಾನಿ ನೆಹರೂರವರ ಹೇಳಿಕೆಯನ್ನು ಕೇಂದ್ರ ಕಾರ್ಯಕಾರೀ ಸಮಿತಿಯು ಪರಿಶೀಲಿಸುವುದು. ಸರಿಯಾದ ವಿಚಾರಣೆಯಿಲ್ಲದೆ ಅಭಿಪ್ರಾಯವನ್ನು ಕೊಡುವುದು ಸರಿಯಲ್ಲ. ವಿದ್ಯಾರ್ಥಿ ಚಳವಳಿಯ ಬಗ್ಗೆ ಸಮಗ್ರವಾದ ನ್ಯಾಯಾಂಗ ವಿಚಾರಣೆ ನಡೆಯಲಿರುವಾಗ ಏನು ಹೇಳುವುದೂ ಸರಿಯಲ್ಲ.

ಹಿಂದೆ ಪಾಟ್ನಾದಲ್ಲಿ ಗೋಲೀಬಾರು ನಡೆದಿತ್ತು ಮತ್ತು ಕೆಲವು ಮಂದಿ ಮಡಿದಿದ್ದರು. ವಿಚಾರಣೆ ನಡೆದು ಪೋಲೀಸರ ಬಲಪ್ರಯೋಗ ಅತಿಯಾಗಿತ್ತು ಎಂದೂ ವ್ಯಕ್ತಗೊಂಡಿತು. ಆಗ ನೆಹರೂರವರು ವಿದ್ಯಾರ್ಥಿಗಳನ್ನು ಬಹಿರಂಗವಾಗಿ ದೂಷಿಸಿದರೇ ಹೊರತು, ಆ ರಾಜ್ಯಸರಕಾರದ ಬಗ್ಗೆ ತಕರಾರನೆತ್ತಲಿಲ್ಲ.

ಪ್ರಜಾಪ್ರಭುತ್ವದ ರಕ್ಷಣೆಗೆ ಪಣ ತೊಡೋಣ

(ಮೊದಲನೇ ಪುಟದಿಂದ)

ಲಿಲ್ಲ. ಅದರ ನಂತರ ಮಂತ್ರಿಗಳ ಮೇಲೆ ಹಿಂಸಾತ್ಮಕ ಧಾಳಿ ನಡೆಸುವುದು, ಕಮ್ಯೂನಿಸ್ಟ್ ಪಾರ್ಟಿಯ ಶಾಸನಸಭಾ ಸದಸ್ಯರನ್ನು ಲಂಚಕೊಟ್ಟು ತಮ್ಮ ಕಡೆಗೆಳೆಯಲು ಮಾಡಿದ ಪ್ರಯತ್ನ ಕಟ್ಟಂಪಳ್ಳಿ ಸತ್ಯಾಗ್ರಹ ಮುಂತಾದುವುಗಳನ್ನು ನಡೆಸಿದರು. ದೇವಿಕುಳಂ ಉಪಚುನಾವಣೆಯಲ್ಲಿ ಸೋತ ನಂತರವಂತೂ ಅವರಿಗೆ ಹುಚ್ಚುಹಿಡಿದಂತಾಗಿದೆ. ಇತ್ತೀಚೆಗೆ ಅವರ ನಡತೆ ಮಿತಿಮೀರಿಹೋಗಿದೆ. ವಿದ್ಯಾರ್ಥಿಗಳ ಮುಷ್ಕರ, ಸೀತಾರಾಂ ಮಿಲ್ ಕೆಲಸಗಾರರರ ಹೋರಾಟ ಮುಂತಾದುವುಗಳ ನೆವದಲ್ಲಿ ಹಿಂಸೆ, ಪುಂಡತನನಡೆಸಿ ಕಮ್ಯೂನಿಸ್ಟ್ ಸರಕಾರದ ವಿರುದ್ಧ ಚಳವಳಿ ನಡೆಸಿದ್ದಾರೆ. ಕೇರಳದಲ್ಲಿ ವ್ಯಕ್ತಿ ಸ್ವಾತಂತ್ರ್ಯವಾಗಲಿ, ರಕ್ಷಣೆಯಾಗಲಿ ಇಲ್ಲವೆಂದೂ, ಕೇಂದ್ರ ಸರಕಾರ ಪ್ರವೇಶಿಸಬೇಕೆಂದೂ ಪಿತೂರಿ ನಡೆಸಿದ್ದಾರೆ. ಅವರ ವರ್ತನೆ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವಂತಾಗಿದೆ.

ಈಗ ಪ್ರಧಾನ ಮಂತ್ರಿ ನೆಹರೂರವರ ಮೇಲೆ ಒತ್ತಾಯ ತಂದು ಅವರಿಂದಲೂ ಕೇರಳದ ವಿರುದ್ಧ ಹೇಳಿಕೆ ಹೊರಡಿಸಿರುತ್ತಾರೆ.

ಪಂಡಿತ್ ನೆಹರೂರವರು ಕೊಟ್ಟ ಹೇಳಿಕೆಯು ನಮ್ಮ ರಾಜ್ಯಾಂಗಕ್ಕೆ ವಿರುದ್ಧವಾಗಿದೆ ಎಂದು ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟಿದೆ. ರಾಜ್ಯದ ಒಳಾಡಳಿತೆಯ ವಿಷಯಲ್ಲಿ ಕೇಂದ್ರ ಸರಕಾರ ಪ್ರವೇಶಿಸುವುದು ಘಟನಾಬದ್ಧವಾಗಿರುತ್ತದೆಯೇ ಎಂಬ ಮೂಲಭೂತ ಪ್ರಶ್ನೆ ಉದ್ಭವಿಸಿದೆ. ಕೇರಳದಲ್ಲಿ ನಡೆದ ಘಟನೆಗಳಿಗಿಂತಲೂ ನೂರು ಪಟ್ಟು ಗಂಭೀರವಾದ ಘಟನೆಗಳು ಇತರ ಪ್ರಾಂತಗಳಲ್ಲಿ ನಡೆದಿವೆ ಮತ್ತು ಈಗಲೂ ನಡಿಯುತ್ತಿವೆ. ಲಂಚಗುಳಿತನ, ಸ್ವಜನ ಪಕ್ಷಪಾತ, ಹಣದ ದುರುಪಯೋಗ ಆಡಳಿತೆಯಲ್ಲಿ ಕಾಂಗ್ರೆಸ್ಸಿಗರ ಕೈವಾಡ ಜನತೆಯ ಮೇಲೆ ದಬ್ಬಾಳಿಕೆ, ಮುಂತಾದುವುಗಳು ಕಾಂಗ್ರೆಸ್ ಆಡಳಿತೆಯಲ್ಲಿ ತಾಂಡವವಾಡುತ್ತಿವೆ. ಗೋಳಿಬಾರು, ಲಾಠಿಚಾರ್ಜು ಮುಂತಾದುವುಗಳು ದಿನನಿತ್ಯದ ವಿಷಯವಾಗಿದೆ. ಮೊರಾರ್ಜಿ ದೇಸಾಯಿಯವರು ಮುಂಬಯಿ ರಾಜ್ಯದಲ್ಲಿ ನಡೆಸಿದ ಹತ್ಯಾಕಾಂಡ, ರಾಮನಾಥಪುರದ ದುರಂತ, ಲಕ್ನೋ ಗೋಳಿಬಾರು, ಜಮಷೆದ್‌ಪುರದಲ್ಲಾದ ಅತ್ಯಾಚಾರ, ಈಗ ಅಹಮದಾಬಾದಿನಲ್ಲಾದ ಗೋಳಿಬಾರುಗಳು ಎಲ್ಲರನ್ನು ನಾಚಿಸುವಂತಾಗಿದೆ. ಕಾಂಗ್ರೆಸ್ ಮಂತ್ರಿ ಮಂಡಲಗಳ ಬಗ್ಗೆ ಎಲ್ಲ ಪ್ರಾಂತಗಳಲ್ಲೂ ಕಾಂಗ್ರೆಸ್ಸಿಗರೇ ಗಂಭೀರವಾದ ಆರೋಪಗಳನ್ನು ತಂದಿರುತ್ತಾರೆ. ಪಶ್ಚಿಮ ಬಂಗಾಳದ ಮಂತ್ರಿ ಮಂಡಲದ ವಿರುದ್ಧ ಮಂತ್ರಿಯಾಗಿದ್ದ ಶ್ರೀ ಸಿದ್ಧಾರ್ತನಾಥರಾಯ್‌ರವರು ದೀರ್ಘವಾದ ಆರೋಪ ಹೊರಿಸಿ ಬೇಸರದಿಂದ ಕಾಂಗ್ರೆಸ್ಸಿಗೇ ರಾಜಿನಾಮೆ ಕೊಟ್ಟಿರುತ್ತಾರೆ. ಮೇಲಿನ ಯಾವ ಸಂದರ್ಭದಲ್ಲೂ ನೆಹರೂರವರು ಆ ಮಂತ್ರಿ ಮಂಡಲಗಳನ್ನು ಟೀಕಿಸಿಲ್ಲ. ಅವರನ್ನು ಸಾಕಷ್ಟು ರಕ್ಷಣೆ ಮಾಡಿದ್ದಾರೆ. ಆದರೆ ಕೇರಳದ ಕಮ್ಯೂನಿಸ್ಟ್ ಸರಕಾರದ ಮೇಲೆ ನಿರಾಧಾರವಾದ ಆರೋಪಗಳನ್ನು ಹೊರಿಸಿ ಬಹಿರಂಗವಾಗಿ ಟೀಕಿಸಲು ಹೊರಟ ನೆಹರೂರವರ ವರ್ತನೆಯು ವಿಷಾದಕರವಾಗಿದೆ. ಪ್ರಧಾನ ಮಂತ್ರಿ ನೆಹರೂರವರಂತೆ ಅವರು ವರ್ತಿಸದೆ ಕಾಂಗ್ರೆಸ್ ಪಕ್ಷದ ವ್ಯಕ್ತಿಯಂತೆ ಅವರ ವರ್ತನೆಯಾಗಿದೆ. ಅವರ ಹೇಳಿಕೆಯು ಕಾಂಗ್ರೆಸ್ ಮತ್ತಿತರ ವಿರೋಧ ಪಕ್ಷಗಳಿಗೆ ತಮ್ಮ ಹಿಂಸಾತ್ಮಕ ಮತ್ತು ಹಾನಿಕರಕ ನೀತಿಯನ್ನು ಮುಂದರಿಸಲು ಪ್ರೋತ್ಸಾಹ ನೀಡಿದಂತಾಗಿದೆ.

ಕಮ್ಯೂನಿಸ್ಟ್ ಪಾರ್ಟಿಯು ಅಮೃತಸರ ಅಧಿವೇಶನದಲ್ಲಿ ಚಾರಿತ್ರಿಕವಾದ ತೀರ್ಮಾನಗಳನ್ನು ಮಾಡಿ ದೇಶದ ರಾಜಕೀಯದಲ್ಲಿ ಹೊಸ ಕಳೆಯನ್ನು ತುಂಬಿದೆ. ಭಾರತ ಕಮ್ಯೂನಿಸ್ಟ್ ಪಾರ್ಟಿಯ ಹೊಸ ಘಟನೆ ಮತ್ತು ನೀತಿಯಿಂದ ಪ್ರತಿಗಾಮಿಗಳು ಗಾಬರಿಗೊಂಡಿದ್ದಾರೆ. ಅಜೇಯವಾದ ಮಾರ್ಕ್ಸ್-ಲೆನಿನ್ ಸಿದ್ಧಾಂತ ಜಗತ್ತಿನಾದ್ಯಂತ ವಿಜಯ ದುಂದುಭಿಯನ್ನು ಮೊಳಗಿಸಿದೆ.

ಮೈಸೂರು ದೇಶದಲ್ಲಿ ಕಳೆದ ವರ್ಷದಲ್ಲಿ ಮಹತ್ವದ ಘಟನೆಗಳು ನಡೆದುವು. ಹಿಂದುಸ್ಥಾನ ವಿಮಾನ ಕಾರ್ಖಾನೆಯ ನೌಕರರ ಮೇಲೆ ನಡೆದ ಅತ್ಯಾಚಾರ, ಗೋಳಿಬಾರು ರಕ್ತಪಾತ ಜನತೆಯಲ್ಲಿ ತೀವ್ರ ಪರಿಣಾಮವನ್ನುಂಟುಮಾಡಿತು. ಇತರ ಹವು ಹೋರಾಟಗಳೂ ನಡೆದುವು.

ನಮ್ಮ ಪ್ರಾಂತದಲ್ಲೂ ಕಮ್ಯೂನಿಸ್ಟ್ ಪಾರ್ಟಿಯೂ, ಸಾಮೂಹಿಕ ಸಂಘಟನೆಗಳೂ ಬೆಳೆಯುತ್ತಿವೆ. ನಾಡಿನ ಅಭಿವೃದ್ಧಿಗೆ ಪ್ರಜಾಪ್ರಭುತ್ವದ ಬೆಳವಣಿಗೆಗೆ ಕಮ್ಯೂನಿಸ್ಟ್ ಪಾರ್ಟಿ ತೀವ್ರವಾಗಿ ಬೆಳೆಯುವುದು ಅತ್ಯವಶ್ಯಕವೆಂಬುದನ್ನು ಕಳೆದ ವರುಷದ ಅನುಭವಗಳು ಎತ್ತಿತೋರಿಸಿವೆ.

ಈ ವರುಷ ಅನೇಕ ಕಡೆಗಳಲ್ಲಿ ಮಳೆಯಿಲ್ಲದೆ ಹಾಹಾಕಾರವೆದ್ದಿದೆ. ಜನರಿಗೆ ಅನ್ನವಿಲ್ಲ; ದನ, ಎತ್ತುಗಳಿಗೆ ಮೇವಿಲ್ಲ; ಕೆಲವು ಭಾಗಗಳಲ್ಲಿ ಕುಡಿಯಲು ನೀರು ಸಹವಿಲ್ಲವೆಂಬ ವರದಿಯಾಗಿದೆ. ಕ್ಷಾಮ ಪರಿಸ್ಥಿತಿ ತಲೆಯೆತ್ತಿದೆ. ಇತರ ಪ್ರದೇಶಗಳಲ್ಲಿ ಮಳೆ ಹೆಚ್ಚಾಗಿ ಬೆಳೆ ಕೆಟ್ಟುಹೋಗಿರುತ್ತದೆ. ಒಟ್ಟಿನಲ್ಲಿ ಮುಂದಿನ ವರ್ಷ ಆಹಾರ ಪರಿಸ್ಥಿತಿ ಏನಾಗುವುದೆಂಬುದನ್ನು ಹೇಳುವುದೇ ಕಷ್ಟವಾಗಿದೆ.

ಕಳೆದ ಆಗಸ್ಟ್ 15ರಂದು ನಾವು ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವವನ್ನಾಚರಿಸಿದೆವು. ಈಗೊಂದು ವರ್ಷದಲ್ಲಿ ದೇಶಾದ್ಯಂತ ಜನತೆಯ ಚಳುವಳಿ ಮುನ್ನಡೆದಿದೆ. ಆದರೆ ಜನತೆಯ ಸಮಸ್ಯೆಗಳು ಮಾತ್ರ ಬಗೆಹರಿಯದೆ ಉಳಿದಿವೆ. ಅಷ್ಟೇ ಅಲ್ಲದೆ ನಮ್ಮ ರಾಜ್ಯಾಂಗದ ಮೂಲ ಹಕ್ಕಿಗೆ ಧಕ್ಕೆ ತಗಲಿದೆ. ಪ್ರಜಾಪ್ರಭುತ್ವ ರೀತಿಯಲ್ಲಿ, ಘಟನಾಬದ್ಧವಾಗಿ ಕಮ್ಯೂನಿಸ್ಟ್ ಪಾರ್ಟಿ ಅಧಿಕಾರದಲ್ಲಿರಲು ಹಕ್ಕು ಇದೆಯೇ ಇಲ್ಲವೇ ಎಂಬ ಮೂಲಭೂತ ಪ್ರಶ್ನೆ ಉದ್ಭವಿಸಿದೆ. ಇದು ಇಡೀ ದೇಶದ ಪ್ರಜಾಪ್ರಭುತ್ವವಾದಿಗಳ ಮುಂದೆ ಇರುವ ಪ್ರಶ್ನೆ. ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೆ ಧಕ್ಕೆ ತಗಲುವುದೆಂದರೆ ದೇಶದ ಪ್ರಜಾಪ್ರಭುತ್ವವಾದಿಗಳಿಗಾದ ಸೋಲೆಂಬುದು ಖಂಡಿತ. ಆದ್ದರಿಂದ ಈ ಸ್ವಾತಂತ್ರ್ಯ ದಿನದಂದು ದೇಶದ ಸ್ವಾತಂತ್ರ್ಯವನ್ನು ಬಲಗೊಳಿಸಲಿಕ್ಕೂ, ಜನತೆಯ ಸಂಘಟನೆ ಮತ್ತು ಐಕ್ಯತೆಗೂ ಹೋರಾಡುವ ನಿರ್ಧಾರ ಮಾಡಬೇಕಾಗಿದೆ. ಅದೇ ಸಂದರ್ಭದಲ್ಲಿ ಕೇರಳ ಸರಕಾರದ ರಕ್ಷಣೆಗೆ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಬೆಂಬಲ ನೀಡಬೇಕೆಂದು ವಿನಂತಿಸುತ್ತೇವೆ. ಮುಂದಿನ ವರ್ಷ ದೇಶದ ಮತ್ತು ಜನತೆಯ ಇನ್ನೂ ಹೆಚ್ಚಿನ ಸೇವೆಗೆ ಪಣ ತೊಡೋಣ.

—

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810